भारत का राजपत्र
The Gazette of India

ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

भाग IX अनुभाग 1
**PART IX SECTION 1**
ಭಾಗ IX ವಿಭಾಗ 1

प्राधिकार से प्रकाशित
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ

| | | |
|---|---|---|
| सं 1, नई दिल्ली, शुक्रवार, मई 17, 2024<br>No.1, New Delhi, Friday, May 17, 2024<br>ನಂ.1, ನವದೆಹಲಿ, ಶುಕ್ರವಾರ, ಮೇ 17, 2024 | वैशाख 09, 1946 (शक)<br>Vaishakha 09, 1946 (saka)<br>ವೈಶಾಖ 09, 1946 (ಶಕ) | खंड.55<br>Vol. 55<br>ಸಂಪುಟ.55 |


**Ministry of Law and Justice**
(Legislative Department)
New Delhi, 17th May, 2024

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

(ವಿಧಾಯೀ ಇಲಾಖೆ)

**ನವದೆಹಲಿ, 17ನೇ ಮೇ, 2024**

The Translation in Kannada of the following Acts, namely:- (1) THE DISASTER MANAGEMENT ACT, 2005 (NO.53 OF 2005) (2) THE STREET VENDORS (PROTECTION OF LIVELIHOOD AND REGULATION OF STREET VENDING) ACT, 2014 (NO.7 OF 2014) (3)THE COMMERCIAL COURTS ACT, 2015 (NO.4 OF 2016) (4) THE TRIBUNALS REFORMS ACT, 2021 (NO.33 OF 2021) (5) THE SURROGACY (REGULATION) ACT, 2021 (NO.47 OF 2021) - are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ವಿಪತ್ತು ನಿರ್ವಹಣಾ ಅಧಿನಿಯಮ, 2005 (2005ರ ಸಂಖ್ಯೆ 53) (2)ಬೀದಿಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿಬದಿ ವ್ಯಾಪಾರ ವಿನಿಯಮನ) ಅಧಿನಿಯಮ, 2014 (2014ರ ಸಂಖ್ಯೆ 7) (3) ವಾಣಿಜ್ಯ ನ್ಯಾಯಾಲಯಗಳ ಅಧಿನಿಯಮ, 2015 (2016ರ ಸಂಖ್ಯೆ 4) (4) ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021 (2021ರ ಸಂಖ್ಯೆ 33) (5) ಬಾಡಿಗೆ–ತಾಯ್ತನ (ವಿನಿಯಮನ) ಅಧಿನಿಯಮ, 2021 (2021ರ ಸಂಖ್ಯೆ 47) – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

## ವಿಪತ್ತು ನಿರ್ವಹಣಾ ಅಧಿನಿಯಮ, 2005

## (2005ರ ಸಂಖ್ಯೆ 53)

[23ನೇ ಡಿಸೆಂಬರ್, 2005.]

ಪರಿಣಾಮಕಾರಿ ವಿಪತ್ತು ನಿರ್ವಹಣೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ, ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು, ವಿಪತ್ತು ನಿರ್ವಹಣಾ ಅಧಿನಿಯಮ, 2005 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಂದು ಜಾರಿಗೆ ಬರತಕ್ಕದ್ದು; ಮತ್ತು ಈ ಅಧಿನಿಯಮದ ಬೇರೆಬೇರೆ ಉಪಬಂಧಗಳಿಗಾಗಿ ಮತ್ತು ಬೇರೆಬೇರೆ ರಾಜ್ಯಗಳಿಗಾಗಿ ಬೇರೆಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಯಾವುದೇ ರಾಜ್ಯಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಯಾವುದೇ ಉಪಬಂಧದಲ್ಲಿ ಪ್ರಾರಂಭದ ಬಗ್ಗೆ ಇರುವ ಯಾವುದೇ ಉಲ್ಲೇಖವನ್ನು, ಆ ರಾಜ್ಯದ ಆ ಉಪಬಂಧದ ಪ್ರಾರಂಭದ ಬಗೆಗಿನ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಬಾಧಿತ ಪ್ರದೇಶ" ಎಂದರೆ, ವಿಪತ್ತಿನಿಂದ ಬಾಧಿತವಾದ ದೇಶದ ಒಂದು ಪ್ರದೇಶ ಅಥವಾ ಒಂದು ಭಾಗ;

(ಬಿ) "ಸಾಮರ್ಥ್ಯ ಸಂವರ್ಧನೆ"ಯು,–

(i) ಹಾಲಿ ಇರುವಂಥ ಸಂಪನ್ಮೂಲಗಳನ್ನು ಗುರುತಿಸುವುದು ಮತ್ತು ಸ್ವಾಧೀನಪಡಿಸಿಕೊಳ್ಳಬಹುದಾದ ಅಥವಾ ಸೃಜಿಸಬಹುದಾದ ಸಂಪನ್ಮೂಲಗಳು;

(ii) ಉಪಖಂಡ (i)ರ ಅಡಿಯಲ್ಲಿ ಗುರುತಿಸಲಾದ ಸಂಪನ್ಮೂಲಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಅಥವಾ ಸೃಜಿಸುವುದು;

(iii) ವಿಪತ್ತುಗಳ ಪರಿಣಾಮಕಾರಿ ನಿರ್ವಹಣೆಗಾಗಿ ಸಿಬ್ಬಂದಿಗಳ ಸಂಘಟನೆ ಮತ್ತು ತರಬೇತಿ ಮತ್ತು ಅಂಥ ತರಬೇತಿಯ ಸಮನ್ವಯ;

(ಸಿ) "ಕೇಂದ್ರ ಸರ್ಕಾರ" ಎಂದರೆ, ವಿಪತ್ತು ನಿರ್ವಹಣೆಯ ಆಡಳಿತಾತ್ಮಕ ನಿಯಂತ್ರಣವನ್ನು ಹೊಂದಿರುವ ಭಾರತ ಸರ್ಕಾರದ ಮಂತ್ರಾಲಯ ಅಥವಾ ಇಲಾಖೆ;

(ಡಿ) "ವಿಪತ್ತು" ಎಂದರೆ, ಯಾವುದೇ ಪ್ರದೇಶದಲ್ಲಿ ನೈಸರ್ಗಿಕ ಅಥವಾ ಮಾನವ ಕೃತ ಕಾರಣಗಳಿಂದಾಗಿ ಅಥವಾ ಆಕಸ್ಮಿಕವಾಗಿ ಅಥವಾ ನಿರ್ಲಕ್ಷತೆಯಿಂದಾಗಿ ಉಂಟಾಗುವ ಆಪತ್ತು, ದುರಂತ, ದುರ್ಘಟನೆ ಅಥವಾ ಗಂಭೀರ ಘಟನೆಯ ಪರಿಣಾಮವಾಗಿ ಗಣನೀಯ ಪ್ರಮಾಣದ ಜೀವಹಾನಿ ಅಥವಾ ಜನರು ಅತೀವ ತೊಂದರೆಗೊಳಗಾಗುವುದು ಅಥವಾ ಸ್ವತ್ತಿನ ಹಾನಿ ಮತ್ತು ಪರಿಸರದ ಹಾನಿ ಅಥವಾ ನಾಶ ಮತ್ತು ವಿಪತ್ತಿನಿಂದ ಬಾಧಿತ ಪ್ರದೇಶದ ಜನ ಸಮುದಾಯವು ಅದನ್ನು ನಿಭಾಯಿಸುವ ಅವರ ಸಾಮರ್ಥ್ಯವನ್ನು ಮೀರಿದ ಪರಿಣಾಮವನ್ನುಂಟು ಮಾಡುವಂಥ ಸ್ವರೂಪದಾಗಿರುವಂಥದ್ದು ಅಥವಾ ಬೃಹತ್ ಪರಿಣಾಮ ಉಂಟುಮಾಡುವಂಥದ್ದು;

(ಇ) "ವಿಪತ್ತು ನಿರ್ವಹಣೆ" ಎಂದರೆ, ಈ ಮುಂದಿನವುಗಳಿಗಾಗಿ ಅಗತ್ಯವಾದ ಅಥವಾ ವಿಹಿತವಾದ ಯೋಜನೆ, ಸಂಘಟನೆ, ಸಮನ್ವಯ ಮತ್ತು ಅನುಷ್ಠಾನ ಕ್ರಮಗಳ ನಿರಂತರ ಮತ್ತು ಸಮಗ್ರ ಪ್ರಕ್ರಿಯೆ ಎಂದರೆ:–

(i) ಯಾವುದೇ ವಿಪತ್ತಿನ ಅಪಾಯವನ್ನು ಅಥವಾ ಅಪಾಯ ಸಂಭಾವ್ಯ ವಿಪತ್ತನ್ನು ತಡೆಗಟ್ಟುವುದು;

(ii) ಯಾವುದೇ ವಿಪತ್ತಿನ ಅಪಾಯವನ್ನು ಅಥವಾ ತೀವ್ರತೆಯನ್ನು ಅಥವಾ ಪರಿಣಾಮಗಳನ್ನು ಉಪಶಮನ ಅಥವಾ ಕಡಿಮೆ ಮಾಡುವುದು;

(iii) ಸಾಮರ್ಥ್ಯ ಸಂವರ್ಧನೆ;

(iv) ಯಾವುದೇ ವಿಪತ್ತನ್ನು ಎದುರಿಸಲು ಸಿದ್ಧವಾಗಿರುವುದು;

(v) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಅಥವಾ ವಿಪತ್ತಿಗೆ ಕೂಡಲೇ ಸ್ಪಂದಿಸುವುದು;

(vi) ಯಾವುದೇ ವಿಪತ್ತಿನ ಪರಿಣಾಮಗಳ ತೀವ್ರತೆ ಅಥವಾ ಪರಿಮಾಣವನ್ನು ನಿರ್ಧರಿಸುವುದು;

(vii) ಸ್ಥಳಾಂತರಿಸುವುದು, ರಕ್ಷಣೆ ಮತ್ತು ಪರಿಹಾರ;

(viii) ಪುನರ್ವಸತಿ ಮತ್ತು ಪುನರ್ ನಿರ್ಮಾಣ;

(ಎಫ್) "ಜಿಲ್ಲಾ ಪ್ರಾಧಿಕಾರ" ಎಂದರೆ, 25ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ರಚಿಸಲಾದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ;

(ಜಿ) "ಜಿಲ್ಲಾ ಯೋಜನೆ" ಎಂದರೆ, 31ನೇ ಪ್ರಕರಣದ ಅಡಿಯಲ್ಲಿ ಜಿಲ್ಲೆಗಾಗಿ ತಯಾರಿಸಿದ ವಿಪತ್ತು ನಿರ್ವಹಣಾ ಯೋಜನೆ;

(ಹೆಚ್) "ಸ್ಥಳೀಯ ಪ್ರಾಧಿಕಾರ" ಎಂಬುದರಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು, ಮುನ್ಸಿಪಾಲಿಟಿಗಳು, ಜಿಲ್ಲಾ ಮಂಡಳಿ, ಕಂಟೋನ್ಮೆಂಟ್ ಬೋರ್ಡ್, ಪಟ್ಟಣ ಯೋಜನಾ ಪ್ರಾಧಿಕಾರ ಅಥವಾ ಜಿಲ್ಲಾ ಪರಿಷತ್ ಅಥವಾ ನಿರ್ದಿಷ್ಟಪಡಿಸಿದ ಸ್ಥಳೀಯ ಪ್ರದೇಶದಲ್ಲಿ ಅಗತ್ಯ ಸೇವೆಗಳನ್ನು ಸಲ್ಲಿಸುವುದಕ್ಕಾಗಿ ಅಥವಾ ನಾಗರಿಕ ಸೇವೆಗಳ ನಿಯಂತ್ರಣ ಸಹಿತ ಮತ್ತು ನಿರ್ವಹಣೆ ಸಹಿತ ಕಾಲಕಾಲಕ್ಕೆ ಕಾನೂನಿನ ಮೂಲಕ ಅಧಿಕಾರ ಪ್ರದಾನ ಮಾಡಲಾದ, ಯಾವುದೇ ಹೆಸರಿನಿಂದ ಕರೆಯುವ ಯಾವುದೇ ಇತರ ನಿಕಾಯ ಅಥವಾ ಪ್ರಾಧಿಕಾರ;

(ಐ) "ಉಪಶಮನ" ಎಂದರೆ, ವಿಪತ್ತಿನ ಅಥವಾ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದ ಅಪಾಯ ಸಂಭವ, ಪ್ರಭಾವ ಅಥವಾ ಪರಿಣಾಮಗಳನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿರುವ ಕ್ರಮಗಳು;

(ಜೆ) "ರಾಷ್ಟ್ರೀಯ ಪ್ರಾಧಿಕಾರ" ಎಂದರೆ, 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿಸಲಾದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ;

(ಕೆ) "ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿ" ಎಂದರೆ, 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಚಿಸಲಾದ ರಾಷ್ಟ್ರೀಯ ಪ್ರಾಧಿಕಾರದ ಕಾರ್ಯನಿರ್ವಾಹಕ ಸಮಿತಿ;

(ಎಲ್) "ರಾಷ್ಟ್ರೀಯ ಯೋಜನೆ" ಎಂದರೆ, 11ನೇ ಪ್ರಕರಣದ ಮೇರೆಗೆ ವಿಪತ್ತು ನಿರ್ವಹಣೆಗಾಗಿ ಇಡೀ ದೇಶಕ್ಕಾಗಿ ಸಿದ್ಧಪಡಿಸಿದ ಯೋಜನೆ;

(ಎಮ್) "ಸನ್ನದ್ಧತೆ" ಎಂದರೆ, ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶವನ್ನು ಅಥವಾ ವಿಪತ್ತನ್ನು ಮತ್ತು ಅದರ ಪರಿಣಾಮಗಳನ್ನು ಎದುರಿಸಲು ಸನ್ನದ್ಧರಾಗಿರುವ ಸ್ಥಿತಿ;

(ಎನ್) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಒ) "ಪುನರ್ ನಿರ್ಮಾಣ" ಎಂದರೆ, ವಿಪತ್ತಿನ ನಂತರ, ಯಾವುದೇ ಸ್ವತ್ತಿನ ನಿರ್ಮಾಣ ಅಥವಾ ಪುನರ್ ನಿರ್ಮಾಣ ಅಥವಾ ಪೂರ್ವಸ್ಥಿತಿಗೆ ತರುವುದು;

(ಪಿ) "ಸಂಪನ್ಮೂಲಗಳು" ಎಂಬುದರಲ್ಲಿ, ಮಾನವ ಸಂಪನ್ಮೂಲ, ಸೇವೆಗಳು, ವಸ್ತುಗಳು ಮತ್ತು ಆಹಾರ ಪದಾರ್ಥಗಳನ್ನು ಒಳಗೊಂಡಿರುತ್ತವೆ;

(ಕ್ಯೂ) "ರಾಜ್ಯ ಪ್ರಾಧಿಕಾರ" ಎಂದರೆ, 14ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿಸಲಾದ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ಇದು, ಆ ಪ್ರಕರಣದ ಅಡಿಯಲ್ಲಿ, ಒಕ್ಕೂಟ ರಾಜ್ಯಕ್ಷೇತ್ರಕ್ಕಾಗಿ ರಚಿಸಲಾದ ವಿಪತ್ತು ನಿರ್ವಹಣಾ ಪ್ರಾಧಿಕಾರವನ್ನು ಸಹ ಒಳಗೊಂಡಿರುತ್ತದೆ;

(ಆರ್) "ರಾಜ್ಯ ಕಾರ್ಯನಿರ್ವಾಹಕ ಸಮಿತಿ" ಎಂದರೆ, 20ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ರಚಿಸಲಾದ ರಾಜ್ಯ ಪ್ರಾಧಿಕಾರದ ಕಾರ್ಯನಿರ್ವಾಹಕ ಸಮಿತಿ;

(ಎಸ್) "ರಾಜ್ಯ ಸರ್ಕಾರ" ಎಂದರೆ, ವಿಪತ್ತು ನಿರ್ವಹಣೆಯ ಆಡಳಿತಾತ್ಮಕ ನಿಯಂತ್ರಣ ಹೊಂದಿರುವ, ರಾಜ್ಯ ಸರ್ಕಾರದ ಇಲಾಖೆ ಮತ್ತು ಇದು, ಸಂವಿಧಾನದ 239ನೇ ಅನುಚ್ಛೇದದ ಮೇರೆಗೆ ರಾಷ್ಟ್ರಪತಿಯು ನೇಮಕ ಮಾಡಿದ ಆಡಳಿತಾಧಿಕಾರಿಯನ್ನು ಒಳಗೊಳ್ಳುತ್ತದೆ;

(ಟಿ) "ರಾಜ್ಯ ಯೋಜನೆ" ಎಂದರೆ, 23ನೇ ಪ್ರಕರಣದ ಅಡಿಯಲ್ಲಿ ವಿಪತ್ತು ನಿರ್ವಹಣೆಗಾಗಿ ಇಡೀ ರಾಜ್ಯಕ್ಕಾಗಿ ಸಿದ್ಧಪಡಿಸಲಾದ ಯೋಜನೆ.

## ಅಧ್ಯಾಯ II

## ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ

**3. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸ್ಥಾಪನೆ.–** (1) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಗೊತ್ತುಪಡಿಸಬಹುದಾದ ದಿನಾಂಕದಿಂದ ಜಾರಿಗೆ ಬರುವಂತೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ಸ್ಥಾಪಿಸತಕ್ಕದ್ದು.

(2) ರಾಷ್ಟ್ರೀಯ ಪ್ರಾಧಿಕಾರವು, ಕೇಂದ್ರ ಸರ್ಕಾರವು ನಿಯಮಿಸಬಹುದಾದ, ಒಬ್ಬ ಅಧ್ಯಕ್ಷ ಮತ್ತು ಒಂಬತ್ತಕ್ಕೆ ಮೀರದಷ್ಟು ಸಂಖ್ಯೆಯ ಇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು ಮತ್ತು ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು, ರಾಷ್ಟ್ರೀಯ ಪ್ರಾಧಿಕಾರವು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು:–

(ಎ) ಭಾರತದ ಪ್ರಧಾನಮಂತ್ರಿಯು ರಾಷ್ಟ್ರೀಯ ಪ್ರಾಧಿಕಾರದ ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು;

(ಬಿ) ರಾಷ್ಟ್ರೀಯ ಪ್ರಾಧಿಕಾರದ ಅಧ್ಯಕ್ಷನು, ಒಂಬತ್ತಕ್ಕೆ ಮೀರದಷ್ಟು ಸಂಖ್ಯೆಯ ಸದಸ್ಯರನ್ನು, ಇತರೆ ಸದಸ್ಯರನ್ನು ನಾಮನಿರ್ದೇಶಿಸತಕ್ಕದ್ದು.

(3) ರಾಷ್ಟ್ರೀಯ ಪ್ರಾಧಿಕಾರದ ಅಧ್ಯಕ್ಷನು, (2)ನೇ ಉಪಪ್ರಕರಣದ (ಬಿ) ಖಂಡದ ಅಡಿಯಲ್ಲಿ ನೇಮಕಗೊಂಡ ಸದಸ್ಯರ ಪೈಕಿ ಒಬ್ಬನನ್ನು ರಾಷ್ಟ್ರೀಯ ಪ್ರಾಧಿಕಾರದ ಉಪಾಧ್ಯಕ್ಷನನ್ನಾಗಿ ನೇಮಿಸಬಹುದು;

(4) ರಾಷ್ಟ್ರೀಯ ಪ್ರಾಧಿಕಾರದ ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**4. ರಾಷ್ಟ್ರೀಯ ಪ್ರಾಧಿಕಾರದ ಸಭೆಗಳು.–** (1) ರಾಷ್ಟ್ರೀಯ ಪ್ರಾಧಿಕಾರವು, ಅಗತ್ಯವಿದ್ದಾಗ ಮತ್ತು ರಾಷ್ಟ್ರೀಯ ಪ್ರಾಧಿಕಾರದ ಅಧ್ಯಕ್ಷನು, ಸೂಕ್ತವೆಂದು ಭಾವಿಸುವಂಥ ಸಮಯ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು.

(2) ರಾಷ್ಟ್ರೀಯ ಪ್ರಾಧಿಕಾರದ ಅಧ್ಯಕ್ಷನು, ರಾಷ್ಟ್ರೀಯ ಪ್ರಾಧಿಕಾರದ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು.

(3) ಯಾವುದೇ ಕಾರಣದಿಂದಾಗಿ, ರಾಷ್ಟ್ರೀಯ ಪ್ರಾಧಿಕಾರದ ಅಧ್ಯಕ್ಷನು, ರಾಷ್ಟ್ರೀಯ ಪ್ರಾಧಿಕಾರದ ಯಾವುದೇ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ, ರಾಷ್ಟ್ರೀಯ ಪ್ರಾಧಿಕಾರದ ಉಪಾಧ್ಯಕ್ಷನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

**5. ರಾಷ್ಟ್ರೀಯ ಪ್ರಾಧಿಕಾರದ ಅಧಿಕಾರಿಗಳು ಮತ್ತು ಇತರೆ ನೌಕರರ ನೇಮಕ.–** ಕೇಂದ್ರ ಸರ್ಕಾರವು, ರಾಷ್ಟ್ರೀಯ ಪ್ರಾಧಿಕಾರದ ಕಾರ್ಯಗಳನ್ನು ನಿರ್ವಹಿಸಲು ಅಗತ್ಯವೆಂದು ಪರಿಗಣಿಸಿದ ಅಧಿಕಾರಿಗಳನ್ನು, ಸಮಾಲೋಚಕರನ್ನು ಮತ್ತು ನೌಕರರನ್ನು ರಾಷ್ಟ್ರೀಯ ಪ್ರಾಧಿಕಾರಕ್ಕಾಗಿ ನೇಮಕ ಮಾಡತಕ್ಕದ್ದು.

**6. ರಾಷ್ಟ್ರೀಯ ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ರಾಷ್ಟ್ರೀಯ ಪ್ರಾಧಿಕಾರವು, ವಿಪತ್ತಿಗೆ ಸಕಾಲಿಕವಾಗಿ ಮತ್ತು ಪರಿಣಾಮಕಾರಿಯಾಗಿ ಪ್ರತಿಸ್ಪಂದಿಸುವುದನ್ನು ಖಚಿತಪಡಿಸುವುದಕ್ಕಾಗಿ, ವಿಪತ್ತು ನಿರ್ವಹಣೆಯ ನೀತಿಗಳನ್ನು, ಯೋಜನೆಗಳನ್ನು ಮತ್ತು ಮಾರ್ಗಸೂಚಿಗಳನ್ನು ರೂಪಿಸುವ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಒಳಗೊಂಡಿರುವ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ರಾಷ್ಟ್ರೀಯ ಪ್ರಾಧಿಕಾರವು,–

(ಎ) ವಿಪತ್ತು ನಿರ್ವಹಣೆಯ ನೀತಿಗಳನ್ನು ರೂಪಿಸಬಹುದು;

(ಬಿ) ರಾಷ್ಟ್ರೀಯ ಯೋಜನೆಯನ್ನು ಅನುಮೋದಿಸಬಹುದು;

(ಸಿ) ರಾಷ್ಟ್ರೀಯ ಯೋಜನೆಗೆ ಅನುಗುಣವಾಗಿ ಭಾರತ ಸರ್ಕಾರದ ಮಂತ್ರಾಲಯಗಳು ಅಥವಾ ಇಲಾಖೆಗಳು ಸಿದ್ಧಪಡಿಸಿದ ಯೋಜನೆಗಳನ್ನು ಅನುಮೋದಿಸಬಹುದು;

(ಡಿ) ರಾಜ್ಯ ಯೋಜನೆಯನ್ನು ಸಿದ್ಧಪಡಿಸುವಲ್ಲಿ ರಾಜ್ಯ ಪ್ರಾಧಿಕಾರಗಳು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ರೂಪಿಸಬಹುದು;

(ಇ) ಭಾರತ ಸರ್ಕಾರದ ವಿವಿಧ ಮಂತ್ರಾಲಯಗಳು ಅಥವಾ ಇಲಾಖೆಗಳು, ತಮ್ಮ ಅಭಿವೃದ್ಧಿ ಯೋಜನೆಗಳಲ್ಲಿ ಮತ್ತು ಪರಿಯೋಜನೆಗಳಲ್ಲಿ ವಿಪತ್ತು ತಡೆಗಟ್ಟುವಿಕೆ ಅಥವಾ ಅದರ ಪರಿಣಾಮಗಳನ್ನು ಉಪಶಮನ ಮಾಡುವ ಕ್ರಮಗಳನ್ನು ಸಂಯೋಜಿಸುವ ಉದ್ದೇಶಕ್ಕಾಗಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ರೂಪಿಸಬಹುದು;

(ಎಫ್) ವಿಪತ್ತು ನಿರ್ವಹಣೆಗಾಗಿ ಕಾರ್ಯನೀತಿಯ ಮತ್ತು ಯೋಜನೆಯ ಜಾರಿ ಮತ್ತು ಅನುಷ್ಠಾನವನ್ನು ಸಮನ್ವಯಗೊಳಿಸಬಹುದು;

(ಜಿ) ಉಪಶಮನದ ಉದ್ದೇಶಕ್ಕಾಗಿ, ನಿಧಿಗಳ ಏರ್ಪಾಡಿಗಾಗಿ ಶಿಫಾರಸ್ಸು ಮಾಡಬಹುದು;

(ಹೆಚ್) ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಭಾರಿ ವಿಪತ್ತುಗಳಿಂದ ಬಾಧಿತವಾಗಿರುವ ಇತರ ದೇಶಗಳಿಗೆ ನೆರವನ್ನು ಒದಗಿಸಬಹುದು;

(ಐ) ವಿಪತ್ತಿನ ತಡೆಗಟ್ಟುವಿಕೆಗಾಗಿ ಅಥವಾ ಉಪಶಮನಕ್ಕಾಗಿ ಅಥವಾ ಅಗತ್ಯವೆಂದು ಪರಿಗಣಿಸಬಹುದಾದಂತೆ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶವನ್ನು ಮತ್ತು ವಿಪತ್ತನ್ನು ಎದುರಿಸಲು ಸನ್ನದ್ಧವಾಗಿರುವುದಕ್ಕಾಗಿ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ ಇತರ ಕ್ರಮಗಳನ್ನು ಕೈಗೊಳ್ಳಬಹುದು;

(ಜೆ) ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯ ಕಾರ್ಯನಿರ್ವಹಣೆಗಾಗಿ ವಿಸ್ತೃತವಾದ ಕಾರ್ಯನೀತಿಗಳನ್ನು ಮತ್ತು ಮಾರ್ಗಸೂಚಿಗಳನ್ನು ರೂಪಿಸಬಹುದು.

(3) ರಾಷ್ಟ್ರೀಯ ಪ್ರಾಧಿಕಾರದ ಅಧ್ಯಕ್ಷನು, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ, ರಾಷ್ಟ್ರೀಯ ಪ್ರಾಧಿಕಾರದ ಎಲ್ಲಾ ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸುವ ಅಧಿಕಾರವನ್ನು ಹೊಂದಿರತಕ್ಕದ್ದು. ಆದರೆ ಅಂಥ ಅಧಿಕಾರಗಳನ್ನು ಚಲಾಯಿಸುವುದು, ರಾಷ್ಟ್ರೀಯ ಪ್ರಾಧಿಕಾರದಿಂದ ಘಟನೋತ್ತರ ಅನುಮೋದನೆಗೆ ಒಳಪಟ್ಟಿರತಕ್ಕದ್ದು.

**7. ರಾಷ್ಟ್ರೀಯ ಪ್ರಾಧಿಕಾರದಿಂದ ಸಲಹಾ ಸಮಿತಿಯ ರಚನೆ.–** (1) ರಾಷ್ಟ್ರೀಯ ಪ್ರಾಧಿಕಾರವು, ವಿಪತ್ತು ನಿರ್ವಹಣೆಯ ವಿವಿಧ ಅಂಶಗಳ ಬಗ್ಗೆ ಶಿಫಾರಸ್ಸುಗಳನ್ನು ಮಾಡಲು, ವಿಪತ್ತು ನಿರ್ವಹಣೆಯ ಕ್ಷೇತ್ರದಲ್ಲಿಯ ತಜ್ಞರನ್ನು ಒಳಗೊಂಡಿರುವ ಮತ್ತು ರಾಷ್ಟ್ರೀಯ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ವಿಪತ್ತು ನಿರ್ವಹಣೆಯ ಪ್ರಾಯೋಗಿಕ ಅನುಭವವನ್ನು ಹೊಂದಿರುವ ಸಲಹಾ ಸಮಿತಿಯನ್ನು ರಚಿಸಬಹುದು.

(2) ರಾಷ್ಟ್ರೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದಂಥ ಭತ್ಯೆಗಳನ್ನು ಸಲಹಾ ಸಮಿತಿ ಸದಸ್ಯರಿಗೆ ಸಂದಾಯ ಮಾಡತಕ್ಕದ್ದು.

**8. ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯ ರಚನೆ.–** (1) ಕೇಂದ್ರ ಸರ್ಕಾರವು, 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ ಕೂಡಲೇ, ಈ ಅಧಿನಿಯಮದ ಮೇರೆಗೆ ರಾಷ್ಟ್ರೀಯ ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅದಕ್ಕೆ ನೆರವಾಗಲು ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯನ್ನು ರಚಿಸತಕ್ಕದ್ದು.

(2) ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯು, ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ವಿಪತ್ತು ನಿರ್ವಹಣೆಯ ಆಡಳಿತಾತ್ಮಕ ನಿಯಂತ್ರಣ ಹೊಂದಿರುವ, ಕೇಂದ್ರ ಸರ್ಕಾರದ ಮಂತ್ರಾಲಯದ ಅಥವಾ ಇಲಾಖೆಯ ಪ್ರಭಾರದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿ ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು;

(ಬಿ) ಕೃಷಿ, ಪರಮಾಣು ಶಕ್ತಿ, ರಕ್ಷಣೆ, ಕುಡಿಯುವ ನೀರು ಸರಬರಾಜು, ಪರಿಸರ ಮತ್ತು ಅರಣ್ಯ, ಹಣಕಾಸು (ವೆಚ್ಚ), ಆರೋಗ್ಯ, ಇಂಧನ, ಗ್ರಾಮೀಣಾಭಿವೃದ್ಧಿ, ವಿಜ್ಞಾನ ಮತ್ತು ತಂತ್ರಜ್ಞಾನ, ಬಾಹ್ಯಕಾಶ, ದೂರಸಂಪರ್ಕ, ನಗರಾಭಿವೃದ್ಧಿ, ಜಲ ಸಂಪನ್ಮೂಲ ಇಲಾಖೆಗಳ ಆಡಳಿತ ನಿಯಂತ್ರಣ ಹೊಂದಿರುವ ಮಂತ್ರಾಲಯಗಳ ಅಥವಾ ಇಲಾಖೆಗಳ, ಭಾರತ ಸರ್ಕಾರದ ಕಾರ್ಯದರ್ಶಿಗಳು ಮತ್ತು ಸಿಬ್ಬಂದಿ ಸಮಿತಿಯ ಮುಖ್ಯಸ್ಥರುಗಳ ಸಂಯೋಜಿತ ರಕ್ಷಣಾ ಸಿಬ್ಬಂದಿಯ ಮುಖ್ಯಸ್ಥ– ಪದನಿಮಿತ್ತ– ಸದಸ್ಯರುಗಳಾಗಿರತಕ್ಕದ್ದು.

(3) ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯ ಅಧ್ಯಕ್ಷನು, ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯ ಯಾವುದೇ ಸಭೆಯಲ್ಲಿ ಭಾಗವಹಿಸುವುದಕ್ಕಾಗಿ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಯಾವುದೇ ಇತರ ಅಧಿಕಾರಿಯನ್ನು ಆಹ್ವಾನಿಸಬಹುದು ಹಾಗೂ ರಾಷ್ಟ್ರೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರ ಗೊತ್ತುಪಡಿಸಬಹುದಾದಂಥ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯು, ತನ್ನ ಅಧಿಕಾರಗಳನ್ನು ನಿರ್ವಹಿಸುವಲ್ಲಿ ಮತ್ತು ಅದರ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥವು ಆಗಿರತಕ್ಕದ್ದು.

**9. ಉಪ–ಸಮಿತಿಗಳ ರಚನೆ.–** (1) ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯು, ಅದು ಅವಶ್ಯವೆಂದು ಪರಿಗಣಿಸಿದಾಗಲೆಲ್ಲಾ, ಅದರ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ಒಂದು ಅಥವಾ ಹೆಚ್ಚು ಉಪ–ಸಮಿತಿಗಳನ್ನು ರಚಿಸಬಹುದು.

(2) ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದಂತೆ ಅದರ ಸದಸ್ಯರ ಪೈಕಿಯಿಂದ ಉಪ–ಸಮಿತಿಯ ಅಧ್ಯಕ್ಷರನ್ನು ನೇಮಕ ಮಾಡತಕ್ಕದ್ದು.

(3) ಯಾವುದೇ ಉಪ–ಸಮಿತಿಯಲ್ಲಿ ತಜ್ಞ ಸಹವರ್ತಿಯಾಗಿರುವ ಯಾರೇ ವ್ಯಕ್ತಿಗೆ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಭತ್ಯೆಗಳನ್ನು ಸಂದಾಯ ಮಾಡಬಹುದು.

**10. ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** (1) ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯು, ರಾಷ್ಟ್ರೀಯ ಪ್ರಾಧಿಕಾರಕ್ಕೆ, ಅದು ಅದರ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ನೆರವು ನೀಡತಕ್ಕದ್ದು ಮತ್ತು ರಾಷ್ಟ್ರೀಯ ಪ್ರಾಧಿಕಾರದ ಕಾರ್ಯನೀತಿಗಳನ್ನು ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು ಮತ್ತು ದೇಶದಲ್ಲಿ ವಿಪತ್ತು ನಿರ್ವಹಣಾ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರವು ಹೊರಡಿಸಿದ ನಿರ್ದೇಶನಗಳ ಪಾಲನೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಒಳಗೊಂಡ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯು,–

(ಎ) ವಿಪತ್ತು ನಿರ್ವಹಣೆಗಾಗಿ ಸಮನ್ವಯ ಮತ್ತು ಮೇಲ್ವಿಚಾರಣಾ ಸಂಸ್ಥೆಯಾಗಿ ಕಾರ್ಯನಿರ್ವಹಿಸಬಹುದು;

(ಬಿ) ರಾಷ್ಟ್ರೀಯ ಪ್ರಾಧಿಕಾರವು ಅನುಮೋದಿಸಬೇಕಾದ ರಾಷ್ಟ್ರೀಯ ಯೋಜನೆಯನ್ನು ಸಿದ್ಧಪಡಿಸಬಹುದು;

(ಸಿ) ರಾಷ್ಟ್ರೀಯ ಕಾರ್ಯನೀತಿಯನ್ನು ಅನುಷ್ಠಾನದ ಸಮನ್ವಯ ಮತ್ತು ಮೇಲ್ವಿಚಾರಣೆ ಮಾಡಬಹುದು;

(ಡಿ) ಭಾರತ ಸರ್ಕಾರದ ವಿವಿಧ ಮಂತ್ರಾಲಯಗಳು ಅಥವಾ ಇಲಾಖೆಗಳು ಮತ್ತು ರಾಜ್ಯ ಪ್ರಾಧಿಕಾರಗಳು ವಿಪತ್ತು ನಿರ್ವಹಣಾ ಯೋಜನೆಗಳನ್ನು ಸಿದ್ಧಪಡಿಸುವುದಕ್ಕಾಗಿ ಮಾರ್ಗಸೂಚಿಗಳನ್ನು ರೂಪಿಸಬಹುದು;

(ಇ) ರಾಷ್ಟ್ರೀಯ ಪ್ರಾಧಿಕಾರ ರೂಪಿಸಿರುವ ಮಾರ್ಗಸೂಚಿಗಳನುಸಾರ ವಿಪತ್ತು ನಿರ್ವಹಣಾ ಯೋಜನೆಗಳನ್ನು ಸಿದ್ಧಪಡಿಸುವುದಕ್ಕಾಗಿ ರಾಜ್ಯ ಸರ್ಕಾರಗಳಿಗೆ ಮತ್ತು ರಾಜ್ಯ ಪ್ರಾಧಿಕಾರಗಳಿಗೆ ಅಗತ್ಯವಿರುವ ತಾಂತ್ರಿಕ ನೆರವನ್ನು ಒದಗಿಸಬಹುದು;

(ಎಫ್) ಭಾರತ ಸರ್ಕಾರದ ಮಂತ್ರಾಲಯಗಳು ಅಥವಾ ಇಲಾಖೆಗಳು ತಯಾರಿಸಿರುವ ರಾಷ್ಟ್ರೀಯ ಯೋಜನೆಗಳು ಮತ್ತು ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡಬಹುದು;

(ಜಿ) ಮಂತ್ರಾಲಯಗಳು ಅಥವಾ ಇಲಾಖೆಗಳು, ಅವುಗಳ ಅಭಿವೃದ್ಧಿ ಯೋಜನೆಗಳಲ್ಲಿ ಅಥವಾ ಪರಿಯೋಜನೆಗಳಲ್ಲಿ ವಿಪತ್ತುಗಳನ್ನು ತಡೆಗಟ್ಟುವುದಕ್ಕಾಗಿ ಅಥವಾ ಉಪಶಮನ ಮಾಡುವುದಕ್ಕಾಗಿನ ಕ್ರಮಗಳನ್ನು ತೀವ್ರಗೊಳಿಸುವುದಕ್ಕಾಗಿ ರಾಷ್ಟ್ರೀಯ ಪ್ರಾಧಿಕಾರವು ರೂಪಿಸಿದ ಮಾರ್ಗಸೂಚಿಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡಬಹುದು;

(ಹೆಚ್) ವಿವಿಧ ಮಂತ್ರಾಲಯಗಳು ಅಥವಾ ಇಲಾಖೆಗಳು ಮತ್ತು ಸರ್ಕಾರದ ಏಜೆನ್ಸಿಗಳು ಉಪಶಮನ ಮಾಡುವುದಕ್ಕೆ ಮತ್ತು ಸನ್ನದ್ಧರಾಗಿರುವುದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳ ಮೇಲ್ವಿಚಾರಣೆ, ಸಮನ್ವಯ ಮಾಡಬಹುದು ಮತ್ತು ನಿರ್ದೇಶನಗಳನ್ನು ನೀಡಬಹುದು;

(ಐ) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಅಥವಾ ವಿಪತ್ತಿಗೆ ಪ್ರತಿಸ್ಪಂದಿಸುವ ಉದ್ದೇಶಕ್ಕಾಗಿ ಸರ್ಕಾರದ ಎಲ್ಲಾ ಹಂತಗಳಲ್ಲಿ ಸನ್ನದ್ಧತೆಯ ಮೌಲ್ಯನಿರ್ಧರಣೆ ಮಾಡಬಹುದು ಹಾಗೂ ಆ ರೀತಿಯ ಸನ್ನದ್ಧತೆಯನ್ನು ಹೆಚ್ಚಿಸುವುದು ಅಗತ್ಯವಿದ್ದಲ್ಲಿ ನಿರ್ದೇಶನಗಳನ್ನು ನೀಡಬಹುದು;

(ಜೆ) ವಿಪತ್ತು ನಿರ್ವಹಣೆಗಾಗಿ ವಿವಿಧ ಹಂತದ ಅಧಿಕಾರಿಗಳು, ನೌಕರರು ಹಾಗೂ ಸ್ವಯಂ–ರಕ್ಷಣಾ ಕಾರ್ಯಕರ್ತರಿಗೆ ವಿಶೇಷ ತರಬೇತಿ ಕಾರ್ಯಕ್ರಮವನ್ನು ಯೋಜಿಸುವುದು ಮತ್ತು ಸಮನ್ವಯಗೊಳಿಸುವುದು;

(ಕೆ) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶವನ್ನು ಅಥವಾ ವಿಪತ್ತಿನ ಸಂದರ್ಭದಲ್ಲಿ ಸಮನ್ವಯದಿಂದ ಪ್ರತಿಸ್ಪಂದಿಸಬಹುದು;

(ಎಲ್) ಭಾರತ ಸರ್ಕಾರದ ಸಂಬಂಧಪಟ್ಟ ಮಂತ್ರಾಲಯಗಳು ಅಥವಾ ಇಲಾಖೆಗಳು, ರಾಜ್ಯ ಸರ್ಕಾರಗಳು ಮತ್ತು ರಾಜ್ಯ ಪ್ರಾಧಿಕಾರಗಳು ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಅಥವಾ ವಿಪತ್ತಿಗೆ ಪ್ರತಿಕ್ರಿಯಿಸುವಲ್ಲಿ ಅವು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಮಾರ್ಗಸೂಚಿಗಳನ್ನು ಸಿದ್ಧಪಡಿಸಬಹುದು ಅಥವಾ ಅವುಗಳಿಗೆ ನಿರ್ದೇಶನಗಳನ್ನು ನೀಡಬಹುದು;

(ಎಮ್) ತುರ್ತು ಪ್ರತಿಸ್ಪಂದನೆ, ರಕ್ಷಣೆ ಮತ್ತು ಪರಿಹಾರದ ಉದ್ದೇಶಗಳಿಗಾಗಿ ತನ್ನ ಬಳಿ ಲಭ್ಯವಿರುವಂಥ ಮಾನವ ಅಥವಾ ಭೌತಿಕ ಸಂಪನ್ಮೂಲಗಳನ್ನು ರಾಷ್ಟ್ರೀಯ ಪ್ರಾಧಿಕಾರಕ್ಕೆ ಅಥವಾ ರಾಜ್ಯ ಪ್ರಾಧಿಕಾರಗಳಿಗೆ ದೊರೆಯುವಂತೆ ಮಾಡಲು ಸರ್ಕಾರದ ಯಾವುದೇ ಇಲಾಖೆ ಅಥವಾ ಏಜೆನ್ಸಿಯನ್ನು ಅಗತ್ಯಪಡಿಸಬಹುದು;

(ಎನ್) ವಿಪತ್ತು ನಿರ್ವಹಣೆಯಲ್ಲಿ ತೊಡಗಿರುವ, ಭಾರತ ಸರ್ಕಾರದ ಮಂತ್ರಾಲಯಗಳು ಅಥವಾ ಇಲಾಖೆಗಳು, ರಾಜ್ಯ ಪ್ರಾಧಿಕಾರಗಳು, ಶಾಸನಬದ್ಧ ನಿಕಾಯಗಳು, ಇತರೆ ಸರ್ಕಾರಿ ಅಥವಾ ಸರ್ಕಾರೇತರ ಸಂಘಟನೆಗಳು ಮತ್ತು ಇತರರಿಗೆ ಸಲಹೆ ನೀಡಬಹುದು, ನೆರವು ನೀಡಬಹುದು ಹಾಗೂ ಅವುಗಳ ಚಟುವಟಿಕೆಗಳನ್ನು ಸಮನ್ವಯಗೊಳಿಸಬಹುದು;

(ಒ) ಈ ಅಧಿನಿಯಮದ ಮೇರೆಗೆ ರಾಜ್ಯ ಪ್ರಾಧಿಕಾರಗಳು ಹಾಗೂ ಜಿಲ್ಲಾ ಪ್ರಾಧಿಕಾರಗಳು ಅವುಗಳ ಪ್ರಕಾರ್ಯಗಳನ್ನು ನಿರ್ವಹಿಸಲು ಅಗತ್ಯವಿರುವ ತಾಂತ್ರಿಕ ನೆರವು ನೀಡಬಹುದು ಅಥವಾ ಅವುಗಳಿಗೆ ಸಲಹೆ ನೀಡಬಹುದು;

(ಪಿ) ವಿಪತ್ತು ನಿರ್ವಹಣೆಗೆ ಸಂಬಂಧಿಸಿದಂತೆ, ಸಾಮಾನ್ಯ ಶಿಕ್ಷಣಕ್ಕೆ ಹಾಗೂ ಜಾಗೃತಿ ಮೂಡಿಸುವುದಕ್ಕೆ ಉತ್ತೇಜನ ನೀಡಬಹುದು; ಮತ್ತು

(ಕ್ಯೂ) ನಿರ್ವಹಿಸಬೇಕೆಂದು ರಾಷ್ಟ್ರೀಯ ಪ್ರಾಧಿಕಾರವು ಅಗತ್ಯಪಡಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸಬಹುದು.

**11. ರಾಷ್ಟ್ರೀಯ ಯೋಜನೆ.–** (1) ಇಡೀ ದೇಶಕ್ಕಾಗಿ, ರಾಷ್ಟ್ರೀಯ ಯೋಜನೆ ಎಂದು ಕರೆಯಲಾಗುವ ವಿಪತ್ತು ನಿರ್ವಹಣಾ ಯೋಜನೆಯನ್ನು ರೂಪಿಸತಕ್ಕದ್ದು.

(2) ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯು, ರಾಷ್ಟ್ರೀಯ ಕಾರ್ಯನೀತಿಯನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಜ್ಯ ಸರ್ಕಾರಗಳೊಡನೆ ಮತ್ತು ವಿಪತ್ತು ನಿರ್ವಹಣೆಯ ಕ್ಷೇತ್ರದಲ್ಲಿನ ಪರಿಣಿತ ನಿಕಾಯಗಳು ಅಥವಾ ಸಂಘಸಂಸ್ಥೆಗಳೊಂದಿಗೆ ಸಮಾಲೋಚಿಸಿ ರಾಷ್ಟ್ರೀಯ ಪ್ರಾಧಿಕಾರವು ಅನುಮೋದಿಸಬೇಕಾದ ರಾಷ್ಟ್ರೀಯ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು.

(3) ರಾಷ್ಟ್ರೀಯ ಯೋಜನೆಯು,–

(ಎ) ವಿಪತ್ತುಗಳನ್ನು ತಡೆಗಟ್ಟುವುದಕ್ಕಾಗಿ ಅಥವಾ ಅವುಗಳ ಪರಿಣಾಮಗಳನ್ನು ಉಪಶಮನ ಮಾಡುವುದಕ್ಕಾಗಿ ತೆಗೆದುಕೊಳ್ಳಬೇಕಾದ ಕ್ರಮಗಳನ್ನು;

(ಬಿ) ಅಭಿವೃದ್ಧಿ ಯೋಜನೆಗಳಲ್ಲಿ ಉಪಶಮನಕಾರಿ ಕ್ರಮಗಳನ್ನು ತೀವ್ರಗೊಳಿಸುವುದಕ್ಕಾಗಿ ತೆಗೆದುಕೊಳ್ಳಬೇಕಾದ ಕ್ರಮಗಳನ್ನು;

(ಸಿ) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಗಳಿಗೆ ಅಥವಾ ವಿಪತ್ತಿಗೆ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸಲು ಸನ್ನದ್ಧತೆ ಮತ್ತು ಸಾಮರ್ಥ್ಯ ವರ್ಧನೆಗಾಗಿ ತೆಗೆದುಕೊಳ್ಳಬೇಕಾದ ಕ್ರಮಗಳನ್ನು;

(ಡಿ) ಖಂಡ (ಎ), (ಬಿ) ಮತ್ತು (ಸಿ) ಗಳಲ್ಲಿ ನಿರ್ದಿಷ್ಟಪಡಿಸಿದ ಕ್ರಮಗಳಿಗೆ ಸಂಬಂಧಿಸಿದಂತೆ, ಭಾರತ ಸರ್ಕಾರದ ವಿವಿಧ ಮಂತ್ರಾಲಯಗಳ ಅಥವಾ ಇಲಾಖೆಗಳ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು

– ಒಳಗೊಂಡಿರತಕ್ಕದ್ದು.

(4) ರಾಷ್ಟ್ರೀಯ ಯೋಜನೆಯನ್ನು ವಾರ್ಷಿಕವಾಗಿ ಪರಿಶೀಲಿಸತಕ್ಕದ್ದು ಮತ್ತು ತಹಲ್‌ವರೆಗೆ ನಿರ್ವಹಿಸತಕ್ಕದ್ದು.

(5) ರಾಷ್ಟ್ರೀಯ ಯೋಜನೆಯಡಿ ಕೈಗೊಳ್ಳಬೇಕಾದ ಕ್ರಮಗಳಿಗಾಗಿ ಹಣಕಾಸು ನೀಡುವುದಕ್ಕಾಗಿ ಕೇಂದ್ರ ಸರ್ಕಾರವು, ಸೂಕ್ತ ಏರ್ಪಾಡುಗಳನ್ನು ಮಾಡತಕ್ಕದ್ದು.

(6) ಉಪಪ್ರಕರಣಗಳು (2) ಮತ್ತು (4)ರಲ್ಲಿ ಉಲ್ಲೇಖಿಸಲಾದ ರಾಷ್ಟ್ರೀಯ ಯೋಜನೆಯ ಪ್ರತಿಗಳು, ಭಾರತ ಸರ್ಕಾರದ ಮಂತ್ರಾಲಯಗಳಿಗೆ ಅಥವಾ ಇಲಾಖೆಗಳಿಗೆ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಅಂಥ ಮಂತ್ರಾಲಯಗಳು ಅಥವಾ ಇಲಾಖೆಗಳು, ರಾಷ್ಟ್ರೀಯ ಯೋಜನೆಗೆ ಅನುಸಾರವಾಗಿ ತಮ್ಮದೇ ಆದ ಯೋಜನೆಗಳನ್ನು ರೂಪಿಸತಕ್ಕದ್ದು.

**12. ಪರಿಹಾರದ ಕನಿಷ್ಠ ಮಾನಕಗಳಿಗಾಗಿ ಮಾರ್ಗಸೂಚಿಗಳು.–** ರಾಷ್ಟ್ರೀಯ ಪ್ರಾಧಿಕಾರವು, ವಿಪತ್ತಿನಿಂದ ಬಾಧಿತರಾದ ವ್ಯಕ್ತಿಗಳಿಗೆ ಒದಗಿಸಬೇಕಾದ ಪರಿಹಾರದ ಕನಿಷ್ಠ ಮಾನಕಗಳಿಗಾಗಿ ಮಾರ್ಗಸೂಚಿಗಳನ್ನು ಶಿಫಾರಸ್ಸು ಮಾಡತಕ್ಕದ್ದು, ಅವು ಈ ಮುಂದಿನವುಗಳನ್ನು ಎಂದರೆ:–

(i) ವಸತಿ, ಆಹಾರ, ಕುಡಿಯುವ ನೀರು, ವೈದ್ಯಕೀಯ ರಕ್ಷಣೆ ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಪರಿಹಾರ ಶಿಬಿರಗಳಲ್ಲಿ ಒದಗಿಸಬೇಕಾದ ಕನಿಷ್ಠ ಅವಶ್ಯಕತೆಗಳನ್ನು;

(ii) ವಿಧವೆಯರಿಗಾಗಿ ಮತ್ತು ಅನಾಥರಿಗೆ ಮಾಡಬೇಕಾದ ವಿಶೇಷ ಏರ್ಪಾಡುಗಳನ್ನು;

(iii) ಜೀವಹಾನಿಯ ಕಾರಣದಿಂದಾಗಿ, ಅನುಗ್ರಹ ಪೂರ್ವಕ ನೆರವನ್ನು ಹಾಗೂ ಮನೆಗಳಿಗಾದ ಹಾನಿಗಾಗಿ ಮತ್ತು ಜೀವನೋಪಾಯ ಸಾಧನ ಮೂಲಗಳನ್ನು ಪೂರ್ವಸ್ಥಿತಿಗೆ ತರುವುದಕ್ಕಾಗಿ ನೆರವನ್ನು;

(iv) ಅಗತ್ಯವಾಗಬಹುದಾದಂಥ ಇತರ ಪರಿಹಾರವನ್ನು

– ಒಳಗೊಂಡಿರತಕ್ಕದ್ದು.

**13. ಸಾಲ ಮರುಪಾವತಿಯಲ್ಲಿ ಪರಿಹಾರ, ಇತ್ಯಾದಿ.–** ರಾಷ್ಟ್ರೀಯ ಪ್ರಾಧಿಕಾರವು, ತೀವ್ರ ಪರಿಮಾಣಕಾರಿ ವಿಪತ್ತುಗಳ ಸಂದರ್ಭಗಳಲ್ಲಿ, ಸಾಲಗಳ ಮರುಪಾವತಿಯಲ್ಲಿ ಪರಿಹಾರವನ್ನು ಶಿಫಾರಸ್ಸು ಮಾಡಬಹುದು ಅಥವಾ ವಿಪತ್ತಿನಿಂದ ಬಾಧಿತರಾದ ವ್ಯಕ್ತಿಗಳಿಗೆ, ಸೂಕ್ತವೆನಿಸಬಹುದಾದಂಥ ರಿಯಾಯಿತಿ ನಿಬಂಧನೆಗಳ ಮೇಲೆ ಹೊಸ ಸಾಲಗಳನ್ನು ಮಂಜೂರು ಮಾಡಬಹುದು.

## ಅಧ್ಯಾಯ III

## ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರಗಳು

**14. ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಸ್ಥಾಪನೆ.–** (1) ಪ್ರತಿಯೊಂದು ರಾಜ್ಯ ಸರ್ಕಾರವು, 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ ನಂತರ, ಸಾಧ್ಯವಾದಷ್ಟು ಬೇಗನೆ, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ರಾಜ್ಯ ಸರ್ಕಾರವು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ರಾಜ್ಯಕ್ಕಾಗಿ, ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಎಂಬ ಹೆಸರಿನ ಪ್ರಾಧಿಕಾರವನ್ನು ಸ್ಥಾಪಿಸತಕ್ಕದ್ದು.

(2) ರಾಜ್ಯ ಪ್ರಾಧಿಕಾರವು, ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂತೆ, ಅಧ್ಯಕ್ಷ ಮತ್ತು ಒಂಭತ್ತಕ್ಕೆ ಮೀರದಷ್ಟು ಸಂಖ್ಯೆಯ ಇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು ಮತ್ತು ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು, ರಾಜ್ಯ ಪ್ರಾಧಿಕಾರವು, ಈ ಕೆಳಗಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ರಾಜ್ಯದ ಮುಖ್ಯಮಂತ್ರಿಯವರು ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು;

(ಬಿ) ರಾಜ್ಯ ಪ್ರಾಧಿಕಾರದ ಅಧ್ಯಕ್ಷರು ನಾಮನಿರ್ದೇಶನ ಮಾಡಬೇಕಾದ ಇತರ ಸದಸ್ಯರ ಸಂಖ್ಯೆಯು ಎಂಟನ್ನು ಮೀರತಕ್ಕದ್ದಲ್ಲ;

(ಸಿ) ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಅಧ್ಯಕ್ಷ, ಪದನಿಮಿತ್ತ.

(3) ರಾಜ್ಯ ಪ್ರಾಧಿಕಾರದ ಅಧ್ಯಕ್ಷನು, (2)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯರಲ್ಲಿ ಒಬ್ಬರನ್ನು ರಾಜ್ಯ ಪ್ರಾಧಿಕಾರದ ಉಪಾಧ್ಯಕ್ಷನನ್ನಾಗಿ ನಿಯೋಜಿಸಬಹುದು.

(4) ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಅಧ್ಯಕ್ಷನು, ರಾಜ್ಯ ಪ್ರಾಧಿಕಾರದ ಪದನಿಮಿತ್ತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು:

ಪರಂತು, ಒಕ್ಕೂಟ ರಾಜ್ಯಕ್ಷೇತ್ರವಾದ ದೆಹಲಿಯನ್ನು ಹೊರತುಪಡಿಸಿ, ವಿಧಾನಸಭೆಯನ್ನು ಹೊಂದಿರುವ ಒಕ್ಕೂಟ ರಾಜ್ಯಕ್ಷೇತ್ರದ ಸಂದರ್ಭದಲ್ಲಿ, ಮುಖ್ಯಮಂತ್ರಿಯು, ಈ ಪ್ರಕರಣದ ಮೇರೆಗೆ ಸ್ಥಾಪಿತವಾದ ಪ್ರಾಧಿಕಾರದ ಅಧ್ಯಕ್ಷನಾಗಿರತಕ್ಕದ್ದು ಮತ್ತು ಇತರ ಒಕ್ಕೂಟ ರಾಜ್ಯಕ್ಷೇತ್ರಗಳ ಸಂದರ್ಭದಲ್ಲಿ, ಲೆಫ್ಟಿನೆಂಟ್ ಗವರ್ನರ್ ಅಥವಾ ಆಡಳಿತಗಾರರು ಆ ಪ್ರಾಧಿಕಾರದ ಅಧ್ಯಕ್ಷರಾಗಿರತಕ್ಕದ್ದು:

ಮತ್ತು ಪರಂತು, ಒಕ್ಕೂಟ ರಾಜ್ಯಕ್ಷೇತ್ರವಾದ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಅಧ್ಯಕ್ಷನಾಗಿರತಕ್ಕದ್ದು ಮತ್ತು ಅದರ ಮುಖ್ಯಮಂತ್ರಿಯು ರಾಜ್ಯ ಪ್ರಾಧಿಕಾರದ ಉಪಾಧ್ಯಕ್ಷನಾಗಿರತಕ್ಕದ್ದು.

(5) ರಾಜ್ಯ ಪ್ರಾಧಿಕಾರದ ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**15. ರಾಜ್ಯ ಪ್ರಾಧಿಕಾರದ ಸಭೆಗಳು.–** (1) ರಾಜ್ಯ ಪ್ರಾಧಿಕಾರವು, ಅಗತ್ಯವಿದ್ದಾಗ ಮತ್ತು ರಾಜ್ಯ ಪ್ರಾಧಿಕಾರದ ಅಧ್ಯಕ್ಷರು ಸೂಕ್ತವೆಂದು ಭಾವಿಸಬಹುದಾದಂಥ ಸಮಯದಲ್ಲಿ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು.

(2) ರಾಜ್ಯ ಪ್ರಾಧಿಕಾರದ ಅಧ್ಯಕ್ಷನು, ರಾಜ್ಯ ಪ್ರಾಧಿಕಾರದ ಸಭೆಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಯಾವುದೇ ಕಾರಣಕ್ಕಾಗಿ, ರಾಜ್ಯ ಪ್ರಾಧಿಕಾರದ ಅಧ್ಯಕ್ಷನು ರಾಜ್ಯ ಪ್ರಾಧಿಕಾರದ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ, ರಾಜ್ಯ ಪ್ರಾಧಿಕಾರದ ಉಪಾಧ್ಯಕ್ಷನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

**16. ರಾಜ್ಯ ಪ್ರಾಧಿಕಾರದ ಅಧಿಕಾರಿಗಳ ಮತ್ತು ಇತರ ನೌಕರರ ನೇಮಕ.–** ರಾಜ್ಯ ಪ್ರಾಧಿಕಾರದ ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ, ಅದು ಅಗತ್ಯವೆಂದು ಪರಿಗಣಿಸುವಂಥ ಅಧಿಕಾರಿಗಳನ್ನು, ಸಮಾಲೋಚಕರನ್ನು ಮತ್ತು ನೌಕರರನ್ನು ರಾಜ್ಯ ಸರ್ಕಾರವು ರಾಜ್ಯ ಪ್ರಾಧಿಕಾರಕ್ಕಾಗಿ ಒದಗಿಸತಕ್ಕದ್ದು.

**17. ರಾಜ್ಯ ಪ್ರಾಧಿಕಾರದಿಂದ ಸಲಹಾ ಸಮಿತಿಯ ರಚನೆ.–** (1) ರಾಜ್ಯ ಪ್ರಾಧಿಕಾರವು, ಅದು ಅಗತ್ಯವೆಂದು ಪರಿಗಣಿಸಿದಾಗ, ವಿಪತ್ತು ನಿರ್ವಹಣೆಯ ವಿವಿಧ ಅಂಶಗಳ ಬಗ್ಗೆ ಶಿಫಾರಸ್ಸುಗಳನ್ನು ಮಾಡಲು, ವಿಪತ್ತು ನಿರ್ವಹಣೆಯ ಕ್ಷೇತ್ರದಲ್ಲಿಯ ತಜ್ಞರನ್ನು ಒಳಗೊಂಡಿರುವ ಮತ್ತು ವಿಪತ್ತು ನಿರ್ವಹಣೆಯ ಪ್ರಾಯೋಗಿಕ ಅನುಭವವನ್ನು ಹೊಂದಿರುವ ಸಲಹಾ ಸಮಿತಿಯನ್ನು ರಚಿಸಬಹುದು.

(2) ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದಂಥ ಭತ್ಯೆಗಳನ್ನು ಸಲಹಾ ಸಮಿತಿ ಸದಸ್ಯರಿಗೆ ಸಂದಾಯ ಮಾಡತಕ್ಕದ್ದು.

**18. ರಾಜ್ಯ ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ರಾಜ್ಯ ಪ್ರಾಧಿಕಾರವು, ರಾಜ್ಯದಲ್ಲಿ ವಿಪತ್ತು ನಿರ್ವಹಣೆಗಾಗಿ ಕಾರ್ಯನೀತಿಗಳನ್ನು ಮತ್ತು ಯೋಜನೆಗಳನ್ನು ರೂಪಿಸುವ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಅಡಕವಾಗಿರುವ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ರಾಜ್ಯ ಪ್ರಾಧಿಕಾರವು,–

(ಎ) ರಾಜ್ಯ ವಿಪತ್ತು ನಿರ್ವಹಣಾ ನೀತಿಯನ್ನು ರೂಪಿಸಬಹುದು;

(ಬಿ) ರಾಷ್ಟ್ರೀಯ ಪ್ರಾಧಿಕಾರವು ರೂಪಿಸಿದ ಮಾರ್ಗಸೂಚಿಗಳಿಗೆ ಅನುಸಾರವಾಗಿ, ರಾಜ್ಯ ಯೋಜನೆಯನ್ನು ಅನುಮೋದಿಸಬಹುದು;

(ಸಿ) ರಾಜ್ಯ ಸರ್ಕಾರದ ಇಲಾಖೆಗಳು ಸಿದ್ಧಪಡಿಸಿದ ವಿಪತ್ತು ನಿರ್ವಹಣಾ ಯೋಜನೆಗಳನ್ನು ಅನುಮೋದಿಸಬಹುದು;

(ಡಿ) ರಾಜ್ಯ ಸರ್ಕಾರದ ಇಲಾಖೆಗಳು ತಮ್ಮ ತಮ್ಮ ಅಭಿವೃದ್ಧಿ ಯೋಜನೆಗಳಲ್ಲಿಯ ಮತ್ತು ಪರಿಯೋಜನೆಗಳಲ್ಲಿಯ ವಿಪತ್ತುಗಳನ್ನು ತಡೆಗಟ್ಟುವುದಕ್ಕಾಗಿನ ಮತ್ತು ಉಪಶಮನ ಮಾಡುವುದಕ್ಕಾಗಿನ ಕ್ರಮಗಳನ್ನು ಸಂಯೋಜಿಸುವ ಉದ್ದೇಶಕ್ಕಾಗಿ, ಅದಕ್ಕೆ ತಾಂತ್ರಿಕ ನೆರವನ್ನು ಕಲ್ಪಿಸುವುದಕ್ಕಾಗಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ರೂಪಿಸಬಹುದು;

(ಇ) ರಾಜ್ಯ ಯೋಜನೆಯ ಅನುಷ್ಠಾನವನ್ನು ಸಮನ್ವಯಗೊಳಿಸುವುದು;

(ಎಫ್) ಉಪಶಮನ ಮಾಡುವುದಕ್ಕಾಗಿನ ಮತ್ತು ಸನ್ನದ್ಧತೆ ಕ್ರಮಗಳಿಗಾಗಿ ನಿಧಿಗಳನ್ನು ಒದಗಿಸುವುದಕ್ಕಾಗಿ ಶಿಫಾರಸ್ಸು ಮಾಡಬಹುದು;

(ಜಿ) ರಾಜ್ಯದ ವಿವಿಧ ಇಲಾಖೆಗಳ ಅಭಿವೃದ್ಧಿ ಯೋಜನೆಗಳನ್ನು ಪುನರವಲೋಕನ ಮಾಡಬಹುದು ಮತ್ತು ತಡೆಗಟ್ಟುವಿಕೆ ಮತ್ತು ಉಪಶಮನ ಕ್ರಮಗಳನ್ನು ಅದರಲ್ಲಿ ಸಂಯೋಜಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು;

(ಹೆಚ್) ರಾಜ್ಯ ಸರ್ಕಾರದ ಇಲಾಖೆಗಳು, ಉಪಶಮನ ಮಾಡುವುದಕ್ಕಾಗಿ, ಸಾಮರ್ಥ್ಯ ಸಂವರ್ಧನೆಗಾಗಿ ಮತ್ತು ಸನ್ನದ್ಧತೆಗಾಗಿ ಕೈಗೊಳ್ಳುತ್ತಿರುವ ಕ್ರಮಗಳನ್ನು ಪುನರವಲೋಕನ ಮಾಡಬಹುದು ಮತ್ತು ಅಗತ್ಯವಾಗಬಹುದಾದ ಅಂಥ ಮಾರ್ಗಸೂಚಿಗಳನ್ನು ಹೊರಡಿಸುವುದು.

(3) ರಾಜ್ಯ ಪ್ರಾಧಿಕಾರದ ಅಧ್ಯಕ್ಷನು, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ, ರಾಜ್ಯ ಪ್ರಾಧಿಕಾರದ ಎಲ್ಲಾ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸುವ ಅಧಿಕಾರವನ್ನು ಹೊಂದಿರತಕ್ಕದ್ದು, ಆದರೆ ಅಂಥ ಅಧಿಕಾರಗಳನ್ನು ಚಲಾಯಿಸುವುದು, ರಾಜ್ಯ ಪ್ರಾಧಿಕಾರದ ಘಟನೋತ್ತರ ಅನುಸಮರ್ಥನೆಗೊಳಪಟ್ಟಿರತಕ್ಕದ್ದು.

**19. ರಾಜ್ಯ ಪ್ರಾಧಿಕಾರದಿಂದ ಪರಿಹಾರದ ಕನಿಷ್ಠ ಮಾನಕಗಳಿಗಾಗಿ ಮಾರ್ಗಸೂಚಿಗಳು.–** ರಾಜ್ಯದಲ್ಲಿ ವಿಪತ್ತಿನಿಂದ ಬಾಧಿತರಾದ ವ್ಯಕ್ತಿಗಳಿಗೆ, ಪರಿಹಾರದ ಮಾನಕಗಳನ್ನು ಒದಗಿಸುವುದಕ್ಕಾಗಿ ರಾಜ್ಯ ಪ್ರಾಧಿಕಾರವು, ವಿವರವಾದ ಮಾರ್ಗಸೂಚಿಗಳನ್ನು ರೂಪಿಸತಕ್ಕದ್ದು:

ಪರಂತು, ಅಂಥ ಮಾನಕಗಳು, ಯಾವುದೇ ಸಂದರ್ಭದಲ್ಲಿ ಈ ವಿಷಯದಲ್ಲಿ ರಾಷ್ಟ್ರೀಯ ಪ್ರಾಧಿಕಾರವು ತಿಳಿಸಿದ ಮಾರ್ಗಸೂಚಿಗಳ ಕನಿಷ್ಠ ಮಾನಕಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

**20. ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ರಚನೆ.–** (1) ರಾಜ್ಯ ಸರ್ಕಾರವು, 14ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ ತರುವಾಯ, ರಾಜ್ಯ ಪ್ರಾಧಿಕಾರವು ನಿರೂಪಿಸಿದ ಮಾರ್ಗಸೂಚಿಗಳನುಸಾರ, ಅದರ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಮತ್ತು ಕ್ರಮವನ್ನು ಸಮನ್ವಯಗೊಳಿಸುವಲ್ಲಿ, ನೆರವು ನೀಡಲು ರಾಜ್ಯ ಕಾರ್ಯನಿರ್ವಾಹಕ ಸಮಿತಿಯನ್ನು ರಚಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ನಿರ್ದೇಶನಗಳ ಪಾಲನೆಯನ್ನು ಖಚಿತಪಡಿಸತಕ್ಕದ್ದು.

(2) ರಾಜ್ಯ ಕಾರ್ಯನಿರ್ವಾಹಕ ಸಮಿತಿಯು, ಈ ಕೆಳಗಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯು ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು;

(ಬಿ) ರಾಜ್ಯ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಂಥ ನಾಲ್ಕು ಜನ ಸರ್ಕಾರದ ಇಲಾಖೆಗಳ ಕಾರ್ಯದರ್ಶಿಗಳು– ಪದನಿಮಿತ್ತ.

(3) ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಅಧ್ಯಕ್ಷನು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ರಾಜ್ಯ ಪ್ರಾಧಿಕಾರವು ಅವನಿಗೆ ವಹಿಸಿಕೊಡಬಹುದಾದಂಥ ಇತರ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(4) ರಾಜ್ಯ ಕಾರ್ಯನಿರ್ವಾಹಕ ಸಮಿತಿಯು, ತನ್ನ ಅಧಿಕಾರಗಳನ್ನು ಚಲಾಯಿಸುವಾಗ ಮತ್ತು ಅದರ ಪ್ರಕಾರ್ಯಗಳನ್ನು ನಿರ್ವಹಿಸುವಾಗ, ಅನುಸರಿಸಬೇಕಾದ ಕಾರ್ಯವಿಧಾನವು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥದ್ದು ಆಗಿರತಕ್ಕದ್ದು.

**21. ರಾಜ್ಯ ಕಾರ್ಯನಿರ್ವಾಹಕ ಸಮಿತಿಯಿಂದ ಉಪಸಮಿತಿಗಳ ರಚನೆ.–** (1) ರಾಜ್ಯ ಕಾರ್ಯನಿರ್ವಾಹಕ ಸಮಿತಿಯು, ಅದರ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ಒಂದು ಅಥವಾ ಅದಕ್ಕಿಂತ ಹೆಚ್ಚು ಉಪಸಮಿತಿಗಳನ್ನು ರಚಿಸಬಹುದು.

(2) ರಾಜ್ಯ ಕಾರ್ಯನಿರ್ವಾಹಕ ಸಮಿತಿಯು, ಅದರ ಸದಸ್ಯರುಗಳ ಪೈಕಿಯಿಂದ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಉಪಸಮಿತಿಯ ಅಧ್ಯಕ್ಷರನ್ನು ನೇಮಿಸತಕ್ಕದ್ದು.

(3) ಯಾವುದೇ ಉಪಸಮಿತಿಯಲ್ಲಿ ತಜ್ಞ ಎಂಬುದಾಗಿ ತೊಡಗಿಸಿಕೊಂಡಿರುವ ಯಾರೇ ವ್ಯಕ್ತಿಗೆ, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಭತ್ಯೆಗಳನ್ನು ಪಾವತಿಸಬಹುದು.

**22. ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಪ್ರಕಾರ್ಯಗಳು.–** (1) ರಾಜ್ಯ ಕಾರ್ಯನಿರ್ವಾಹಕ ಸಮಿತಿಯು, ರಾಷ್ಟ್ರೀಯ ಯೋಜನೆಯನ್ನು ಮತ್ತು ರಾಜ್ಯ ಯೋಜನೆಯನ್ನು ಅನುಷ್ಠಾನಗೊಳಿಸುವ ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು ಮತ್ತು ರಾಜ್ಯದಲ್ಲಿ ವಿಪತ್ತು ನಿರ್ವಹಣೆಗಾಗಿನ ಸಮನ್ವಯ ಮತ್ತು ಮೇಲ್ವಿಚಾರಣಾ ಸಂಸ್ಥೆಯಾಗಿ ಕಾರ್ಯನಿರ್ವಹಿಸತಕ್ಕದ್ದು.

(2) ಉಪಪ್ರಕರಣ (1)ರ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ರಾಜ್ಯ ಕಾರ್ಯನಿರ್ವಾಹಕ ಸಮಿತಿಯು,–

(ಎ) ರಾಷ್ಟ್ರೀಯ ನೀತಿ, ರಾಷ್ಟ್ರೀಯ ಯೋಜನೆ ಮತ್ತು ರಾಜ್ಯ ಯೋಜನೆಯ ಅನುಷ್ಠಾನವನ್ನು ಸಮನ್ವಯಗೊಳಿಸಬಹುದು ಮತ್ತು ಮೇಲ್ವಿಚಾರಣೆ ಮಾಡಬಹುದು;

(ಬಿ) ವಿವಿಧ ಬಗೆಯ ವಿಪತ್ತುಗಳಿಗೆ ಈಡಾಗುವ ರಾಜ್ಯದ ವಿವಿಧ ಭಾಗಗಳನ್ನು ಪರಿಶೀಲಿಸಬಹುದು ಮತ್ತು ಅವುಗಳನ್ನು ತಡೆಗಟ್ಟುವುದಕ್ಕಾಗಿ ಅಥವಾ ಉಪಶಮನ ಮಾಡುವುದಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ನಿರ್ದಿಷ್ಟಪಡಿಸಬಹುದು;

(ಸಿ) ರಾಜ್ಯ ಸರ್ಕಾರದ ಇಲಾಖೆಗಳು ಮತ್ತು ಜಿಲ್ಲಾ ಪ್ರಾಧಿಕಾರಗಳು, ವಿಪತ್ತು ನಿರ್ವಹಣಾ ಯೋಜನೆಗಳನ್ನು ಸಿದ್ಧಪಡಿಸುವುದಕ್ಕಾಗಿ ಮಾರ್ಗಸೂಚಿಗಳನ್ನು ನಿರೂಪಿಸಬಹುದು;

(ಡಿ) ರಾಜ್ಯ ಸರ್ಕಾರದ ಇಲಾಖೆಗಳು ಮತ್ತು ಜಿಲ್ಲಾ ಪ್ರಾಧಿಕಾರಗಳು ಸಿದ್ಧಪಡಿಸಿದ, ವಿಪತ್ತು ನಿರ್ವಹಣಾ ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡಬಹುದು;

(ಇ) ಇಲಾಖೆಗಳು, ಅವುಗಳ ಅಭಿವೃದ್ಧಿ ಯೋಜನೆಗಳಲ್ಲಿ ಮತ್ತು ಪರಿಯೋಜನೆಗಳಲ್ಲಿ ವಿಪತ್ತುಗಳ ತಡೆಗಟ್ಟುವಿಕೆಗಾಗಿ ಅಥವಾ ಉಪಶಮನಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ರಾಜ್ಯ ಪ್ರಾಧಿಕಾರವು, ನಿರೂಪಿಸಿದ ಮಾರ್ಗಸೂಚಿಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡಬಹುದು;

(ಎಫ್) ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದಲ್ಲಿ ಅಥವಾ ವಿಪತ್ತಿನ ಸಂದರ್ಭದಲ್ಲಿ ಪ್ರತಿಸ್ಪಂದಿಸಲು ಎಲ್ಲಾ ಸರ್ಕಾರಿ ಅಥವಾ ಸರ್ಕಾರೇತರ ಹಂತಗಳಲ್ಲಿ ಸನ್ನದ್ಧತೆಯ ಮೌಲ್ಯಮಾಪನ ಮಾಡಬಹುದು ಮತ್ತು ಅಗತ್ಯವಿರುವ ಕಡೆಯಲ್ಲಿ ಅಂಥ ಸನ್ನದ್ಧತೆಯನ್ನು ಹೆಚ್ಚಿಸುವುದಕ್ಕಾಗಿ ನಿರ್ದೇಶನಗಳನ್ನು ನೀಡಬಹುದು;

(ಜಿ) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದಲ್ಲಿ ಅಥವಾ ವಿಪತ್ತು ಎದುರಾದಲ್ಲಿ ಸಮನ್ವಯದಿಂದ ಪ್ರತಿಸ್ಪಂದಿಸಬಹುದು;

(ಹೆಚ್) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಅಥವಾ ವಿಪತ್ತಿಗೆ ಪ್ರತಿಸ್ಪಂದಿಸಲು ಕೈಗೊಳ್ಳಬೇಕಾದ ಕ್ರಮಗಳಿಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರದ ಯಾವುದೇ ಇಲಾಖೆಗೆ ಅಥವಾ ರಾಜ್ಯದಲ್ಲಿನ ಇತರ ಯಾವುದೇ ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ ನಿರ್ದೇಶನಗಳನ್ನು ನೀಡಬಹುದು;

(ಐ) ರಾಜ್ಯದ ವಿವಿಧ ಭಾಗಗಳು, ಒಳಗಾಗಬಹುದಾದ ವಿವಿಧ ಬಗೆಯ ವಿಪತ್ತುಗಳಿಗೆ ಸಂಬಂಧಿಸಿದಂತೆ ಮತ್ತು ಅಂಥ ವಿಪತ್ತನ್ನು ತಡೆಗಟ್ಟಲು ಅಥವಾ ಉಪಶಮನ ಮಾಡಲು ಮತ್ತು ಪ್ರತಿಸ್ಪಂದಿಸಲು, ಅಂಥ ಸಮುದಾಯವು ಕೈಗೊಳ್ಳಬಹುದಾದಂಥ ಕ್ರಮಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಶಿಕ್ಷಣ, ಜಾಗೃತಿ ಮತ್ತು ಸಮುದಾಯ ತರಬೇತಿಗೆ ಉತ್ತೇಜಿಸಬಹುದು;

(ಜೆ) ವಿಪತ್ತು ನಿರ್ವಹಣೆಯಲ್ಲಿ ತೊಡಗಿರುವ ರಾಜ್ಯ ಸರ್ಕಾರಿ ಇಲಾಖೆಗಳು, ಜಿಲ್ಲಾ ಪ್ರಾಧಿಕಾರಗಳು, ಶಾಸನಾತ್ಮಕ ನಿಕಾಯಗಳು ಮತ್ತು ಇತರ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಚಟುವಟಿಕೆಗಳಿಗೆ ಸಲಹೆ ನೀಡಬಹುದು, ನೆರವು ನೀಡಬಹುದು ಮತ್ತು ಸಮನ್ವಯಗೊಳಿಸಬಹುದು;

(ಕೆ) ಜಿಲ್ಲಾ ಪ್ರಾಧಿಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಅವುಗಳ ಪ್ರಕಾರ್ಯಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳುವುದಕ್ಕಾಗಿ, ಅವುಗಳಿಗೆ ಅಗತ್ಯವಾದ ತಾಂತ್ರಿಕ ನೆರವು ಒದಗಿಸಬಹುದು ಅಥವಾ ಸಲಹೆ ನೀಡಬಹುದು;

(ಎಲ್) ವಿಪತ್ತು ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ಹಣಕಾಸು ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಬಹುದು;

(ಎಮ್) ರಾಜ್ಯದ ಯಾವುದೇ ಸ್ಥಳೀಯ ಪ್ರದೇಶದಲ್ಲಿನ ಕಟ್ಟಡ ನಿರ್ಮಾಣವನ್ನು ಪರೀಕ್ಷಿಸಬಹುದು ಮತ್ತು ವಿಪತ್ತು ತಡೆಗಟ್ಟುವಿಕೆಗಾಗಿ ಅಂಥ ಕಟ್ಟಡ ನಿರ್ಮಾಣಕ್ಕಾಗಿ ನಿರೂಪಿಸಲಾದ ಮಾನಕಗಳನ್ನು ಅನುಸರಿಸಲಾಗುತ್ತಿಲ್ಲ ಅಥವಾ ಅನುಸರಿಸಿಲ್ಲ ಎಂದು ಕಂಡುಬಂದರೆ, ಅಂಥ ಮಾನಕಗಳ ಅನುಪಾಲನೆಯನ್ನು ಖಚಿತಪಡಿಸಿಕೊಳ್ಳಲು ಅಗತ್ಯವಾಗಬಹುದಾದಂಥ ಕ್ರಮವನ್ನು ಕೈಗೊಳ್ಳುವಂತೆ, ಸಂದರ್ಭಾನುಸಾರವಾಗಿ, ಜಿಲ್ಲಾ ಪ್ರಾಧಿಕಾರಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ನಿರ್ದೇಶಿಸಬಹುದು;

(ಎನ್) ವಿಪತ್ತು ನಿರ್ವಹಣೆಯ ವಿವಿಧ ಅಂಶಗಳಿಗೆ ಸಂಬಂಧಿಸಿದಂತೆ, ರಾಷ್ಟ್ರೀಯ ಪ್ರಾಧಿಕಾರಕ್ಕೆ ಮಾಹಿತಿ ಒದಗಿಸಬಹುದು;

(ಒ) ರಾಜ್ಯ ಮಟ್ಟದ ಪ್ರತಿಸ್ಪಂದನಾ ಯೋಜನೆಗಳನ್ನು ಮತ್ತು ಮಾರ್ಗಸೂಚಿಗಳನ್ನು ನಿರೂಪಿಸಬಹುದು, ಪರಿಶೀಲಿಸಬಹುದು ಮತ್ತು ಇಂದೀಕರಿಸಬಹುದು ಮತ್ತು ಜಿಲ್ಲಾ ಮಟ್ಟದ ಯೋಜನೆಗಳನ್ನು ಸಿದ್ಧಪಡಿಸಲಾಗಿರುವುದನ್ನು, ಪರಿಶೀಲಿಸಲಾಗಿರುವುದನ್ನು ಮತ್ತು ಇಂದೀಕರಿಸಲಾಗಿರುವುದನ್ನು ಖಚಿತಪಡಿಸಿಕೊಳ್ಳಬಹುದು;

(ಪಿ) ಸಂವಹನ ವ್ಯವಸ್ಥೆಗಳು ಕ್ರಮಬದ್ಧವಾಗಿರುವುದನ್ನು ಮತ್ತು ವಿಪತ್ತು ನಿರ್ವಹಣಾ ಅಭ್ಯಾಸವನ್ನು ನಿಯತಕಾಲಿಕವಾಗಿ ಕೈಗೊಳ್ಳಲಾಗುತ್ತಿರುವುದನ್ನು ಖಚಿತಪಡಿಸಿಕೊಳ್ಳಬಹುದು;

(ಕ್ಯೂ) ರಾಜ್ಯ ಪ್ರಾಧಿಕಾರವು, ಅದಕ್ಕೆ ವಹಿಸಬಹುದಾದಂಥ ಅಥವಾ ಅದು ಅಗತ್ಯವೆಂದು ಪರಿಗಣಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸಬಹುದು.

**23. ರಾಜ್ಯ ಯೋಜನೆ.–** (1) ಪ್ರತಿಯೊಂದು ರಾಜ್ಯಕ್ಕಾಗಿ, ರಾಜ್ಯ ವಿಪತ್ತು ನಿರ್ವಹಣಾ ಯೋಜನೆ ಎಂಬ ಹೆಸರಿನ ವಿಪತ್ತು ನಿರ್ವಹಣಾ ಯೋಜನೆಯೊಂದು ಇರತಕ್ಕದ್ದು.

(2) ರಾಜ್ಯ ಯೋಜನೆಯನ್ನು, ರಾಷ್ಟ್ರೀಯ ಪ್ರಾಧಿಕಾರವು ನಿರೂಪಿಸಿದ ಮಾರ್ಗಸೂಚಿಗಳನ್ನು ಗಮನಕ್ಕೆ ತೆಗೆದುಕೊಂಡು ಮತ್ತು ರಾಜ್ಯ ಕಾರ್ಯನಿರ್ವಾಹಕ ಸಮಿತಿಯು ಸೂಕ್ತವೆಂದು ಭಾವಿಸಬಹುದಾದ ಸ್ಥಳೀಯ ಪ್ರಾಧಿಕಾರಗಳು, ಜಿಲ್ಲಾ ಪ್ರಾಧಿಕಾರಗಳು ಮತ್ತು ಜನಪ್ರತಿನಿಧಿಗಳೊಂದಿಗೆ ಸಮಾಲೋಚಿಸಿದ ನಂತರ ರಾಜ್ಯ ಕಾರ್ಯನಿರ್ವಾಹಕ ಸಮಿತಿಯು ಸಿದ್ಧಪಡಿಸತಕ್ಕದ್ದು.

(3) ರಾಜ್ಯ ಕಾರ್ಯನಿರ್ವಾಹಕ ಸಮಿತಿಯು, (2)ನೇ ಉಪಪ್ರಕರಣದ ಮೇರೆಗೆ ಸಿದ್ಧಪಡಿಸಿದ ರಾಜ್ಯ ಯೋಜನೆಯನ್ನು ರಾಜ್ಯ ಪ್ರಾಧಿಕಾರವು ಅನುಮೋದಿಸತಕ್ಕದ್ದು.

(4) ರಾಜ್ಯ ಯೋಜನೆಯು,–

(ಎ) ರಾಜ್ಯದ ವಿವಿಧ ಭಾಗಗಳು, ವಿವಿಧ ಬಗೆಯ ವಿಪತ್ತುಗಳಿಗೆ ಈಡಾಗುವ ಸಾಧ್ಯತೆಯನ್ನು;

(ಬಿ) ವಿಪತ್ತುಗಳನ್ನು ತಡೆಗಟ್ಟುವುದಕ್ಕಾಗಿ ಅಥವಾ ಉಪಶಮನ ಮಾಡುವುದಕ್ಕಾಗಿ ಅಳವಡಿಸಿಕೊಳ್ಳಬೇಕಾದ ಕ್ರಮಗಳನ್ನು;

(ಸಿ) ಯಾವ ರೀತಿಯಲ್ಲಿ ಉಪಶಮನ ಮಾಡುವ ಕ್ರಮಗಳನ್ನು ಅಭಿವೃದ್ಧಿ ಯೋಜನೆಗಳು ಮತ್ತು ಪರಿಯೋಜನೆಗಳೊಂದಿಗೆ ಸಮಗ್ರಗೊಳಿಸತಕ್ಕದ್ದೋ ಆ ಕ್ರಮವನ್ನು;

(ಡಿ) ಕೈಗೊಳ್ಳಬೇಕಾದ ಸಾಮರ್ಥ್ಯ ಸಂವರ್ಧನೆ ಮತ್ತು ಸನ್ನದ್ಧತಾ ಕ್ರಮಗಳನ್ನು;

(ಇ) ಮೇಲಿನ (ಬಿ), (ಸಿ) ಮತ್ತು (ಡಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಲಾದ ಕ್ರಮಗಳ ಸಂಬಂಧದಲ್ಲಿ, ರಾಜ್ಯ ಸರ್ಕಾರದ ಪ್ರತಿಯೊಂದು ಇಲಾಖೆಯ ಪಾತ್ರಗಳು ಮತ್ತು ಹೊಣೆಗಾರಿಕೆಗಳನ್ನು;

(ಎಫ್) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಅಥವಾ ವಿಪತ್ತಿಗೆ ಪ್ರತಿಕ್ರಿಯಿಸುವಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಪಾತ್ರಗಳು ಮತ್ತು ಹೊಣೆಗಾರಿಕೆಗಳನ್ನು

– ಒಳಗೊಳ್ಳತಕ್ಕದ್ದು.

(5) ರಾಜ್ಯ ಯೋಜನೆಯನ್ನು ಪರಿಶೀಲಿಸತಕ್ಕದ್ದು ಮತ್ತು ವಾರ್ಷಿಕವಾಗಿ ಇಂದೀಕರಿಸತಕ್ಕದ್ದು.

(6) ರಾಜ್ಯ ಯೋಜನೆಯ ಅಡಿಯಲ್ಲಿ, ಕೈಗೊಳ್ಳಬೇಕಾದ ಕ್ರಮಗಳಿಗಾಗಿ ಹಣ ಒದಗಿಸುವುದಕ್ಕಾಗಿ, ರಾಜ್ಯ ಸರ್ಕಾರವು ಸಮುಚಿತ ಏರ್ಪಾಡುಗಳನ್ನು ಮಾಡತಕ್ಕದ್ದು.

(7) ಉಪಪ್ರಕರಣ (2) ಮತ್ತು (5)ರಲ್ಲಿ ಉಲ್ಲೇಖಿಸಲಾದ ರಾಜ್ಯ ಯೋಜನೆಯ ಪ್ರತಿಗಳನ್ನು, ರಾಜ್ಯ ಸರ್ಕಾರದ ಇಲಾಖೆಗಳಿಗೆ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಅಂಥ ಇಲಾಖೆಗಳು ರಾಜ್ಯ ಯೋಜನೆಯ ಅನುಸಾರವಾಗಿ ತಮ್ಮವೇ ಆದ ಯೋಜನೆಗಳನ್ನು ಸಿದ್ಧಪಡಿಸತಕ್ಕದ್ದು.

**24. ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದಲ್ಲಿ ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** ವಿಪತ್ತಿನಿಂದ ಬಾಧಿತವಾದ ಸಮುದಾಯಕ್ಕೆ ನೆರವು ನೀಡುವ ಮತ್ತು ಸಂರಕ್ಷಿಸುವ ಅಥವಾ ಅಂಥ ಸಮುದಾಯಕ್ಕೆ ಪರಿಹಾರ ಒದಗಿಸುವ ಅಥವಾ ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದ ಪರಿಣಾಮಗಳನ್ನು ತಡೆಯುವ ಅಥವಾ ಅಡ್ಡಿಯನ್ನು ಎದುರಿಸುವ ಅಥವಾ ನಿಭಾಯಿಸುವ ಉದ್ದೇಶಕ್ಕಾಗಿ, ರಾಜ್ಯ ಕಾರ್ಯನಿರ್ವಾಹಕ ಸಮಿತಿಯು,–

(ಎ) ವಿಪತ್ತಿಗೆ ಒಳಗಾಗಬಹುದಾದ ಅಥವಾ ಬಾಧಿತ ಪ್ರದೇಶದೊಳಗೆ ಹೋಗುವ, ಹೊರ ಬರುವ ಅಥವಾ ಪ್ರದೇಶದೊಳಗಿನ ವಾಹನ ಸಂಚಾರವನ್ನು ನಿಯಂತ್ರಿಸಬಹುದು ಮತ್ತು ನಿರ್ಬಂಧಿಸಬಹುದು;

(ಬಿ) ವಿಪತ್ತಿಗೆ ಒಳಗಾಗಬಹುದಾದ ಅಥವಾ ಬಾಧಿತ ಪ್ರದೇಶದೊಳಗೆ ಬರುವ ಯಾರೇ ವ್ಯಕ್ತಿಯ ಪ್ರವೇಶವನ್ನು, ಅಲ್ಲಿ ಆತನ ಚಲನವಲನವನ್ನು ಮತ್ತು ನಿರ್ಗಮನವನ್ನು ನಿಯಂತ್ರಿಸಬಹುದು ಮತ್ತು ನಿರ್ಬಂಧಿಸಬಹುದು;

(ಸಿ) ಅವಶೇಷಗಳನ್ನು ತೆರವುಗೊಳಿಸಬಹುದು, ಶೋಧನಾ ಕಾರ್ಯ ನಡೆಸಬಹುದು ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ಕೈಗೊಳ್ಳಬಹುದು;

(ಡಿ) ರಾಷ್ಟ್ರೀಯ ಪ್ರಾಧಿಕಾರವು ಮತ್ತು ರಾಜ್ಯ ಪ್ರಾಧಿಕಾರವು ನಿರೂಪಿಸಿದ ಮಾನಕಗಳಿಗೆ ಅನುಸಾರ ಆಶ್ರಯ, ಆಹಾರ, ಕುಡಿಯುವ ನೀರು, ಅತ್ಯಾವಶ್ಯಕ ವ್ಯವಸ್ಥೆಗಳು, ಆರೋಗ್ಯ ಪಾಲನೆ ಮತ್ತು ಸೇವೆಗಳನ್ನು ಒದಗಿಸಬಹುದು;

(ಇ) ವಿಪತ್ತಿನಿಂದ ರಕ್ಷಣೆ, ಸ್ಥಳಾಂತರಿಸುವುದು ಅಥವಾ ಜೀವ ಅಥವಾ ಆಸ್ತಿಪಾಸ್ತಿ ರಕ್ಷಣೆಗಾಗಿ ತಕ್ಷಣ ಪರಿಹಾರ ಒದಗಿಸುವುದು, ರಾಜ್ಯ ಸರ್ಕಾರದ ಸಂಬಂಧಪಟ್ಟ ಇಲಾಖೆಗೆ, ಯಾವುದೇ ಜಿಲ್ಲಾ ಪ್ರಾಧಿಕಾರಕ್ಕೆ ಅಥವಾ ರಾಜ್ಯದ ಸ್ಥಳೀಯ ಪರಿಮಿತಿಯೊಳಗಿನ ಇತರ ಪ್ರಾಧಿಕಾರಕ್ಕೆ, ತಾನು ಅವಶ್ಯಕವೆಂದು ಅಭಿಪ್ರಾಯಪಡುವಂಥ ಕ್ರಮಗಳನ್ನು ಅಥವಾ ಉಪಕ್ರಮಗಳನ್ನು ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವನ್ನು ನೀಡಬಹುದು;

(ಎಫ್) ಯಾವುವೇ ಸೂಕ್ತ ಸಂಪನ್ಮೂಲಗಳ ಪ್ರಭಾರ ವಹಿಸಿರುವ ರಾಜ್ಯ ಸರ್ಕಾರದ ಯಾವುದೇ ಇಲಾಖೆಯು ಅಥವಾ ಯಾವುದೇ ಇತರ ನಿಕಾಯವು ಅಥವಾ ಪ್ರಾಧಿಕಾರವು ಅಥವಾ ವ್ಯಕ್ತಿಯು ತುರ್ತಾಗಿ ಪ್ರತಿಸ್ಪಂದಿಸುವ, ರಕ್ಷಣೆಯ ಮತ್ತು ಪರಿಹಾರದ ಉದ್ದೇಶಗಳಿಗಾಗಿ ಸಂಪನ್ಮೂಲಗಳು ಲಭ್ಯವಾಗಿರುವಂತೆ ಅಗತ್ಯಪಡಿಸಬಹುದು;

(ಜಿ) ರಕ್ಷಣೆ ಮತ್ತು ಪರಿಹಾರಕ್ಕಾಗಿ ಸಲಹೆ ಮತ್ತು ನೆರವು ನೀಡುವಂತೆ, ವಿಪತ್ತು ನಿರ್ವಹಣಾ ಕ್ಷೇತ್ರದಲ್ಲಿನ ತಜ್ಞರನ್ನು ಮತ್ತು ಸಮಾಲೋಚಕರನ್ನು ಅಗತ್ಯಪಡಿಸಬಹುದು;

(ಹೆಚ್) ಅಗತ್ಯವಿರುವಾಗ, ಯಾವುದೇ ಪ್ರಾಧಿಕಾರದಿಂದ ಅಥವಾ ಯಾರೇ ವ್ಯಕ್ತಿಯಿಂದ ಸೌಲಭ್ಯಗಳನ್ನು ಪ್ರತ್ಯೇಕವಾಗಿ ಅಥವಾ ಆದ್ಯತಾನುಸಾರ ಬಳಕೆಗಾಗಿ ಪಡೆದುಕೊಳ್ಳಬಹುದು;

(ಐ) ತಾತ್ಕಾಲಿಕ ಸೇತುವೆಗಳನ್ನು ಅಥವಾ ಅಗತ್ಯ ನಿರ್ಮಿತಿಗಳನ್ನು ನಿರ್ಮಾಣ ಮಾಡಬಹುದು ಮತ್ತು ಸಾರ್ವಜನಿಕರಿಗೆ ಅಪಾಯಕಾರಿಯಾದ ಅಸುರಕ್ಷಿತ ಕಟ್ಟಡಗಳನ್ನು ಕೆಡವಬಹುದು;

(ಜೆ) ಸರ್ಕಾರೇತರ ಸಂಸ್ಥೆಗಳು, ಅವು ಕಾರ್ಯಚಟುವಟಿಕೆಗಳನ್ನು ನ್ಯಾಯೋಚಿತವಾಗಿ ಮತ್ತು ಭೇದಭಾವ ರಹಿತವಾಗಿ ಕೈಗೊಳ್ಳುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು;

(ಕೆ) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶವನ್ನು ಅಥವಾ ವಿಪತ್ತನ್ನು ನಿಭಾಯಿಸಲು ಸಾರ್ವಜನಿಕರಿಗೆ ಮಾಹಿತಿ ಪ್ರಸಾರ ಮಾಡಬಹುದು;

(ಎಲ್) ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ, ಎಲ್ಲಾ ಕ್ರಮಗಳನ್ನು ಕೈಗೊಳ್ಳಬಹುದು ಅಥವಾ ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದಿಂದಾಗಿ ಅಥವಾ ವಿಪತ್ತಿನಿಂದಾಗಿ ಅಗತ್ಯವಾದಂಥ ಅಥವಾ ಸಮರ್ಥನೀಯವಾದಂಥ ಇತರ ಎಲ್ಲಾ ಕ್ರಮಗಳನ್ನು ಕೈಗೊಳ್ಳಬಹುದು.

## ಅಧ್ಯಾಯ IV

## ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ

**25. ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ರಚನೆ.–** (1) ಪ್ರತಿ ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, 14ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ ಕೂಡಲೇ, ರಾಜ್ಯದ ಪ್ರತಿಯೊಂದು ಜಿಲ್ಲೆಗಾಗಿ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹೆಸರಿನ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಎಂಬ ಪ್ರಾಧಿಕಾರವನ್ನು ಸ್ಥಾಪಿಸತಕ್ಕದ್ದು.

(2) ಜಿಲ್ಲಾ ಪ್ರಾಧಿಕಾರವು, ಅಧ್ಯಕ್ಷನನ್ನು ಮತ್ತು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಷ್ಟು ಸಂಖ್ಯೆಯ, ಆದರೆ ಏಳಕ್ಕೆ ಮೀರದಷ್ಟು ಸಂಖ್ಯೆಯ ಸದಸ್ಯರನ್ನು ಒಳಗೊಂಡಿರತಕ್ಕದ್ದು ಮತ್ತು ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು, ಈ ಮುಂದಿನ ಸದಸ್ಯರನ್ನು ಒಳಗೊಳ್ಳತಕ್ಕದ್ದು, ಎಂದರೆ:–

(ಎ) ಸಂದರ್ಭಾನುಸಾರವಾಗಿ, ಜಿಲ್ಲೆಯ ಕಲೆಕ್ಟರ್ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾಧಿಕಾರಿಯು ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು;

(ಬಿ) ಸ್ಥಳೀಯ ಪ್ರಾಧಿಕಾರದ ಚುನಾಯಿತ ಪ್ರತಿನಿಧಿ ಪದನಿಮಿತ್ತ ಸಹ–ಅಧ್ಯಕ್ಷರಾಗಿರತಕ್ಕದ್ದು:

ಪರಂತು, ಸಂವಿಧಾನದ ಆರನೇ ಅನುಸೂಚಿಯಲ್ಲಿ ಉಲ್ಲೇಖಿಸಲಾದಂತೆ, ಬುಡಕಟ್ಟು ಪ್ರದೇಶಗಳಲ್ಲಿ, ಸ್ವಾಯತ್ತ ಜಿಲ್ಲೆಯ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯನಿರ್ವಾಹಕ ಸದಸ್ಯನು ಪದನಿಮಿತ್ತ ಸಹ–ಅಧ್ಯಕ್ಷರಾಗಿರತಕ್ಕದ್ದು;

(ಸಿ) ಜಿಲ್ಲಾ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಪದನಿಮಿತ್ತ;

(ಡಿ) ಪೊಲೀಸ್ ಅಧೀಕ್ಷಕ, ಪದನಿಮಿತ್ತ;

(ಇ) ಜಿಲ್ಲೆಯ ಮುಖ್ಯ ವೈದ್ಯಾಧಿಕಾರಿ, ಪದನಿಮಿತ್ತ;

(ಎಫ್) ರಾಜ್ಯ ಸರ್ಕಾರವು ನೇಮಿಸಬೇಕಾದ, ಇಬ್ಬರನ್ನು ಮೀರದ, ಜಿಲ್ಲಾ ಮಟ್ಟದ ಇತರ ಅಧಿಕಾರಿಗಳು.

(3) ಜಿಲ್ಲಾ ಪರಿಷತ್ತು ಅಸ್ತಿತ್ವದಲ್ಲಿರುವ ಯಾವುದೇ ಜಿಲ್ಲೆಯಲ್ಲಿ, ಅದರ ಅಧ್ಯಕ್ಷನು ಜಿಲ್ಲಾ ಪ್ರಾಧಿಕಾರದ ಸಹ–ಅಧ್ಯಕ್ಷನಾಗಿರತಕ್ಕದ್ದು.

(4) ರಾಜ್ಯ ಸರ್ಕಾರವು, ಸಂದರ್ಭಾನುಸಾರ, ಜಿಲ್ಲೆಯ ಅಪರ ಕಲೆಕ್ಟರ್ ಅಥವಾ ಅಪರ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಅಪರ ಜಿಲ್ಲಾಧಿಕಾರಿ ದರ್ಜೆಗೆ ಕಡಿಮೆಯಲ್ಲದ ಅಧಿಕಾರಿಯನ್ನು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ಮತ್ತು ಜಿಲ್ಲಾ ಪ್ರಾಧಿಕಾರವು, ಅವನಿಗೆ ಪ್ರತ್ಯಾಯೋಜಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು, ಜಿಲ್ಲಾ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ನೇಮಿಸತಕ್ಕದ್ದು.

**26. ಜಿಲ್ಲಾ ಪ್ರಾಧಿಕಾರದ ಅಧ್ಯಕ್ಷನ ಅಧಿಕಾರಗಳು.–** (1) ಜಿಲ್ಲಾ ಪ್ರಾಧಿಕಾರದ ಅಧ್ಯಕ್ಷನು, ಜಿಲ್ಲಾ ಪ್ರಾಧಿಕಾರದ ಸಭೆಗಳ ಅಧ್ಯಕ್ಷತೆ ವಹಿಸುವುದರ ಜೊತೆಗೆ, ಜಿಲ್ಲಾ ಪ್ರಾಧಿಕಾರವು ಪ್ರತಿಯೋಜಿಸಬಹುದಾದಂಥ, ಜಿಲ್ಲಾ ಪ್ರಾಧಿಕಾರದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) ಜಿಲ್ಲಾ ಪ್ರಾಧಿಕಾರದ ಅಧ್ಯಕ್ಷನು, ತುರ್ತು ಸಂದರ್ಭದಲ್ಲಿ, ಜಿಲ್ಲಾ ಪ್ರಾಧಿಕಾರದ ಎಲ್ಲಾ ಅಥವಾ ಯಾವುದೇ ಅಧಿಕಾರಗಳನ್ನು ಚಲಾಯಿಸುವ ಅಧಿಕಾರ ಹೊಂದಿರತಕ್ಕದ್ದು; ಆದರೆ ಅಂಥ ಅಧಿಕಾರಗಳನ್ನು ಚಲಾಯಿಸುವುದು ಜಿಲ್ಲಾ ಪ್ರಾಧಿಕಾರದ ಘಟನೋತ್ತರ ಅನುಸಮರ್ಥನೆಗೆ ಒಳಪಟ್ಟಿರತಕ್ಕದ್ದು.

(3) ಜಿಲ್ಲಾ ಪ್ರಾಧಿಕಾರವು ಅಥವಾ ಜಿಲ್ಲಾ ಪ್ರಾಧಿಕಾರದ ಅಧ್ಯಕ್ಷನು, ಲಿಖಿತದಲ್ಲಿ, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಸಂದರ್ಭಾನುಸಾರವಾಗಿ, (1)ನೇ ಅಥವಾ (2)ನೇ ಉಪಪ್ರಕರಣದ ಮೇರೆಗೆ, ಅದರ ಅಥವಾ ಅವನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು, ಅದು ಅಥವಾ ಅವನು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳು, ಯಾವುದಾದರೂ ಇದ್ದರೆ, ಅದಕ್ಕೆ ಒಳಪಟ್ಟು ಜಿಲ್ಲಾ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಪ್ರತಿಯೋಜಿಸಬಹುದು.

**27. ಸಭೆಗಳು.–** ಜಿಲ್ಲಾ ಪ್ರಾಧಿಕಾರವು, ಅಧ್ಯಕ್ಷನು ಅಗತ್ಯನುಸಾರವಾಗಿ ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂಥ ಸಮಯ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು.

**28. ಸಲಹಾ ಸಮಿತಿಗಳು ಮತ್ತು ಇತರ ಸಮಿತಿಗಳ ರಚನೆ.–** (1) ಜಿಲ್ಲಾ ಪ್ರಾಧಿಕಾರವು, ತಾನು ಅಗತ್ಯವೆಂದು ಪರಿಗಣಿಸಿದಾಗ, ಅದರ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ, ಒಂದು ಅಥವಾ ಹೆಚ್ಚು ಸಲಹಾ ಸಮಿತಿಗಳನ್ನು ಮತ್ತು ಇತರ ಸಮಿತಿಗಳನ್ನು ರಚಿಸಬಹುದು.

(2) ಜಿಲ್ಲಾ ಪ್ರಾಧಿಕಾರವು, ಅದರ ಸದಸ್ಯರುಗಳ ಪೈಕಿಯಿಂದ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸಮಿತಿಯ ಅಧ್ಯಕ್ಷನನ್ನು ನೇಮಕ ಮಾಡತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ರಚನೆಗೊಂಡ, ಯಾವುದೇ ಸಮಿತಿಯಲ್ಲಿ ಅಥವಾ ಉಪಸಮಿತಿಯಲ್ಲಿ ತಜ್ಞನಾಗಿ ಸಹವರ್ತಿಯಾಗಿರುವ ಯಾರೇ ವ್ಯಕ್ತಿಗೆ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಭತ್ಯೆಗಳನ್ನು ಸಂದಾಯ ಮಾಡಬಹುದು.

**29. ಜಿಲ್ಲಾ ಪ್ರಾಧಿಕಾರದ ಅಧಿಕಾರಿಗಳು ಮತ್ತು ಇತರ ನೌಕರರ ನೇಮಕ.–** ರಾಜ್ಯ ಸರ್ಕಾರವು, ಜಿಲ್ಲಾ ಪ್ರಾಧಿಕಾರದ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ಅವಶ್ಯಕವೆಂದು ತಾನು ಪರಿಗಣಿಸುವಂಥ ಅಧಿಕಾರಿಗಳು, ಸಮಾಲೋಚಕರು ಮತ್ತು ಇತರ ನೌಕರರನ್ನು ಜಿಲ್ಲಾ ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು.

**30. ಜಿಲ್ಲಾ ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** (1) ಜಿಲ್ಲಾ ಪ್ರಾಧಿಕಾರವು, ವಿಪತ್ತು ನಿರ್ವಹಣೆಗಾಗಿ ಜಿಲ್ಲೆಯ ಯೋಜನೆ, ಸಮನ್ವಯ ಮತ್ತು ಅನುಷ್ಠಾನ ನಿಕಾಯವಾಗಿ ಕಾರ್ಯನಿರ್ವಹಿಸತಕ್ಕದ್ದು ಮತ್ತು ರಾಷ್ಟ್ರೀಯ ಪ್ರಾಧಿಕಾರವು ಮತ್ತು ರಾಜ್ಯ

ಪ್ರಾಧಿಕಾರವು ನಿರೂಪಿಸಿದ ಮಾರ್ಗಸೂಚಿಗಳಿಗೆ ಅನುಸಾರವಾಗಿ ಜಿಲ್ಲೆಯ ವಿಪತ್ತು ನಿರ್ವಹಣಾ ಉದ್ದೇಶಗಳಿಗಾಗಿ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಉಪಪ್ರಕರಣ (1)ರ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಜಿಲ್ಲಾ ಪ್ರಾಧಿಕಾರವು,–

(i) ಜಿಲ್ಲೆಗಾಗಿ ಜಿಲ್ಲಾ ಪ್ರತಿಸ್ಪಂದನಾ ಯೋಜನೆಯೂ ಸೇರಿದಂತೆ, ಜಿಲ್ಲಾ ನಿರ್ವಹಣಾ ಯೋಜನೆಯನ್ನು ಸಿದ್ಧಪಡಿಸಬಹುದು;

(ii) ರಾಷ್ಟ್ರೀಯ ಕಾರ್ಯನೀತಿ, ರಾಜ್ಯ ಕಾರ್ಯನೀತಿ, ರಾಷ್ಟ್ರೀಯ ಯೋಜನೆ, ರಾಜ್ಯ ಯೋಜನೆ ಮತ್ತು ಜಿಲ್ಲಾ ಯೋಜನೆಯ ಅನುಷ್ಠಾನವನ್ನು ಸಮನ್ವಯಗೊಳಿಸಬಹುದು ಮತ್ತು ಮೇಲ್ವಿಚಾರಣೆ ಮಾಡಬಹುದು;

(iii) ಜಿಲ್ಲಾ ಮಟ್ಟದಲ್ಲಿನ ಸರ್ಕಾರಿ ಇಲಾಖೆಗಳು, ಅದೇ ರೀತಿ ಸ್ಥಳೀಯ ಪ್ರಾಧಿಕಾರಗಳು ಜಿಲ್ಲೆಯಲ್ಲಿ ವಿಪತ್ತುಗಳಿಗೆ ಒಳಗಾಗುವ ಸಾಧ್ಯತೆಯಿರುವ ಪ್ರದೇಶಗಳನ್ನು ಗುರುತಿಸಲಾಗಿರುವುದನ್ನು ಮತ್ತು ವಿಪತ್ತುಗಳ ತಡೆಗಟ್ಟುವುದಕ್ಕಾಗಿ ಮತ್ತು ಅವುಗಳ ಪರಿಣಾಮಗಳನ್ನು ಉಪಶಮನ ಮಾಡುವುದಕ್ಕಾಗಿ ಕ್ರಮ ಕೈಗೊಳ್ಳುವುದನ್ನು ಖಚಿತಪಡಿಸಿಕೊಳ್ಳಬಹುದು;

(iv) ರಾಷ್ಟ್ರೀಯ ಪ್ರಾಧಿಕಾರವು ಮತ್ತು ರಾಜ್ಯ ಪ್ರಾಧಿಕಾರವು ನಿರೂಪಿಸಿದ, ವಿಪತ್ತು ತಡೆಗಟ್ಟುವುದಕ್ಕಾಗಿ, ಅದರ ಪರಿಣಾಮಗಳನ್ನು ಉಪಶಮನ ಮಾಡುವುದಕ್ಕಾಗಿ, ಸನ್ನದ್ಧತೆಗಾಗಿ ಮತ್ತು ಪ್ರತಿಸ್ಪಂದನಾ ಕ್ರಮಗಳಿಗಾಗಿ ಮಾರ್ಗಸೂಚಿಗಳನ್ನು, ಜಿಲ್ಲಾ ಮಟ್ಟದ ಎಲ್ಲಾ ಸರ್ಕಾರಿ ಇಲಾಖೆಗಳು ಮತ್ತು ಜಿಲ್ಲೆಯಲ್ಲಿನ ಸ್ಥಳೀಯ ಪ್ರಾಧಿಕಾರಗಳು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಬಹುದು;

(v) ಜಿಲ್ಲಾ ಮಟ್ಟದ ವಿವಿಧ ಪ್ರಾಧಿಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು, ವಿಪತ್ತು ತಡೆಗಟ್ಟುವುದಕ್ಕಾಗಿ ಅಥವಾ ಉಪಶಮನ ಮಾಡುವುದಕ್ಕಾಗಿ, ಅಗತ್ಯವಾಗಬಹುದಾದಂಥ ಇತರ ಕ್ರಮಗಳನ್ನು ಕೈಗೊಳ್ಳಲು ನಿರ್ದೇಶನಗಳನ್ನು ನೀಡಬಹುದು;

(vi) ಜಿಲ್ಲಾ ಮಟ್ಟದ ಸರ್ಕಾರಿ ಇಲಾಖೆಗಳು ಮತ್ತು ಜಿಲ್ಲೆಯಲ್ಲಿನ ಸ್ಥಳೀಯ ಪ್ರಾಧಿಕಾರಗಳ ವಿಪತ್ತು ತಡೆಗಟ್ಟುವುದಕ್ಕಾಗಿ ಮತ್ತು ವಿಪತ್ತು ನಿರ್ವಹಣಾ ಯೋಜನೆಗಳಿಗಾಗಿ ಮಾರ್ಗಸೂಚಿಗಳನ್ನು ನಿರೂಪಿಸಬಹುದು;

(vii) ಜಿಲ್ಲಾ ಮಟ್ಟದ ಸರ್ಕಾರಿ ಇಲಾಖೆಗಳು ಸಿದ್ಧಪಡಿಸಿದ ವಿಪತ್ತು ನಿರ್ವಹಣಾ ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡಬಹುದು;

(viii) ಜಿಲ್ಲಾ ಮಟ್ಟದ ಸರ್ಕಾರಿ ಇಲಾಖೆಗಳು, ಅವುಗಳ ಅಭಿವೃದ್ಧಿ ಯೋಜನೆಗಳಲ್ಲಿ ಮತ್ತು ಪರಿಯೋಜನೆಗಳಲ್ಲಿ ವಿಪತ್ತನ್ನು ತಡೆಗಟ್ಟುವುದಕ್ಕಾಗಿ ಅಥವಾ ಉಪಶಮನ ಮಾಡುವುದಕ್ಕಾಗಿ ಕ್ರಮಗಳನ್ನು ಸಂಯೋಜಿಸುವ ಉದ್ದೇಶದಿಂದ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ನಿರೂಪಿಸಬಹುದು ಮತ್ತು ಅದಕ್ಕೆ ಅಗತ್ಯವಾದ ತಾಂತ್ರಿಕ ನೆರವನ್ನು ಒದಗಿಸಬಹುದು;

(ix) ಖಂಡ (viii)ರಲ್ಲಿ ಉಲ್ಲೇಖಿಸಲಾದ ಕ್ರಮಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡಬಹುದು;

(x) ಜಿಲ್ಲೆಯಲ್ಲಿನ ಯಾವುದೇ ವಿಪತ್ತು ಅಥವಾ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಪ್ರತಿಸ್ಪಂದಿಸುವುದರ ಸಾಮರ್ಥ್ಯ ಸ್ಥಿತಿಯನ್ನು ಪರಿಶೀಲಿಸಬಹುದು ಮತ್ತು ಅಗತ್ಯಾನುಸಾರವಾಗಿ ಅಂಥ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವಂತೆ ಜಿಲ್ಲಾ ಮಟ್ಟದ ಸಮುಚಿತ ಇಲಾಖೆಗಳಿಗೆ ಅಥವಾ ಪ್ರಾಧಿಕಾರಗಳಿಗೆ ನಿರ್ದೇಶನಗಳನ್ನು ನೀಡಬಹುದು;

(xi) ಸನ್ನದ್ಧತಾ ಕ್ರಮಗಳನ್ನು ಪರಿಶೀಲಿಸಬಹುದು ಮತ್ತು ಅಗತ್ಯವಿದ್ದಲ್ಲಿ, ಜಿಲ್ಲಾ ಮಟ್ಟದಲ್ಲಿ, ಸಂಬಂಧಪಟ್ಟ ಇಲಾಖೆಗಳಿಗೆ ಅಥವಾ ಇತರ ಸಂಬಂಧಪಟ್ಟ ಪ್ರಾಧಿಕಾರಗಳಿಗೆ, ಯಾವುದೇ ವಿಪತ್ತು ಅಥವಾ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದಲ್ಲಿ ಪರಿಣಾಮಕಾರಿಯಾಗಿ ಪ್ರತಿಸ್ಪಂದಿಸಲು ಅಗತ್ಯವಾದಷ್ಟು ಸನ್ನದ್ಧತಾ ಕ್ರಮಗಳನ್ನು ಹೆಚ್ಚಿಸಿಕೊಳ್ಳುವಂತೆ ನಿರ್ದೇಶನಗಳನ್ನು ನೀಡಬಹುದು;

(xii) ಜಿಲ್ಲೆಯಲ್ಲಿನ ವಿವಿಧ ಹಂತಗಳ ಅಧಿಕಾರಿಗಳಿಗಾಗಿ, ನೌಕರರಿಗಾಗಿ ಮತ್ತು ಸ್ವಯಂ–ರಕ್ಷಣಾ ಕಾರ್ಯಕರ್ತರಿಗಾಗಿ, ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಬಹುದು ಮತ್ತು ಸಮನ್ವಯಗೊಳಿಸಬಹುದು;

(xiii) ಸ್ಥಳೀಯ ಪ್ರಾಧಿಕಾರಗಳ, ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಬೆಂಬಲದೊಂದಿಗೆ ವಿಪತ್ತನ್ನು ತಡೆಗಟ್ಟುವುದಕ್ಕಾಗಿ ಅಥವಾ ಉಪಶಮನ ಮಾಡುವುದಕ್ಕಾಗಿ, ಸಮುದಾಯ ತರಬೇತಿ ಮತ್ತು ಜಾಗೃತಿ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸಬಹುದು;

(xiv) ಮುನ್ನೆಚ್ಚರಿಕೆ ನೀಡುವುದಕ್ಕಾಗಿ ಮತ್ತು ಸಾರ್ವಜನಿಕರಿಗೆ ಸೂಕ್ತ ಮಾಹಿತಿಯ ಪ್ರಸಾರಕ್ಕಾಗಿ ಕಾರ್ಯರೀತಿಯನ್ನು ನಿರೂಪಿಸಬಹುದು, ನಿರ್ವಹಿಸಬಹುದು, ಪರಿಶೀಲಿಸಬಹುದು ಮತ್ತು ಮೇಲ್ದರ್ಜೆಗೇರಿಸಬಹುದು;

(xv) ಜಿಲ್ಲಾಮಟ್ಟದ ಪ್ರತಿಸ್ಪಂದನಾ ಯೋಜನೆ ಮತ್ತು ಮಾರ್ಗಸೂಚಿಗಳನ್ನು ಸಿದ್ಧಪಡಿಸಬಹುದು, ಪರಿಶೀಲಿಸಬಹುದು ಮತ್ತು ಇಂದೀಕರಿಸಬಹುದು;

(xvi) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಮತ್ತು ವಿಪತ್ತಿಗೆ ಪ್ರತಿಸ್ಪಂದನೆಯನ್ನು ಸಮನ್ವಯಗೊಳಿಸಬಹುದು;

(xvii) ಜಿಲ್ಲಾ ಮಟ್ಟದಲ್ಲಿಯ ಸರ್ಕಾರದ ಇಲಾಖೆಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಜಿಲ್ಲಾ ಪ್ರತಿಸ್ಪಂದನಾ ಯೋಜನೆಗೆ ಅನುಸಾರವಾಗಿ ತಮ್ಮ ಪ್ರತಿಸ್ಪಂದನಾ ಯೋಜನೆಗಳನ್ನು ಸಿದ್ಧಪಡಿಸಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು;

(xviii) ಜಿಲ್ಲಾ ಮಟ್ಟದಲ್ಲಿ ಸರ್ಕಾರದ ಸಂಬಂಧಪಟ್ಟ ಇಲಾಖೆಗೆ ಅಥವಾ ಜಿಲ್ಲೆಯ ಸ್ಥಳೀಯ ಮಿತಿಯೊಳಗಿರುವ ಯಾವುದೇ ಇತರ ಪ್ರಾಧಿಕಾರಗಳಿಗೆ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಅಥವಾ ವಿಪತ್ತಿಗೆ ಪರಿಣಾಮಕಾರಿಯಾಗಿ ಪ್ರತಿಸ್ಪಂದಿಸಲು ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ, ಮಾರ್ಗಸೂಚಿಗಳನ್ನು ಹೊರಡಿಸಬಹುದು ಅಥವಾ ನಿರ್ದೇಶನಗಳನ್ನು ನೀಡಬಹುದು;

(xix) ಜಿಲ್ಲೆಯಲ್ಲಿ, ವಿಪತ್ತು ನಿರ್ವಹಣಾ ಕಾರ್ಯದಲ್ಲಿ ತೊಡಗಿಕೊಂಡಿರುವ ಜಿಲ್ಲಾಮಟ್ಟದ ಸರ್ಕಾರದ ಸಂಬಂಧಪಟ್ಟ ಇಲಾಖೆಯ ಅಥವಾ ಶಾಸನಬದ್ಧ ನಿಕಾಯಗಳ ಮತ್ತು ಇತರೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳಲ್ಲಿ ಕಾರ್ಯಚಟುವಟಿಕೆಗಳ ಸಂಬಂಧದಲ್ಲಿ ಸಲಹೆ ನೀಡಬಹುದು, ನೆರವು ನೀಡಬಹುದು ಮತ್ತು ಸಮನ್ವಯಗೊಳಿಸಬಹುದು;

(xx) ಜಿಲ್ಲೆಯಲ್ಲಿ, ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶವನ್ನು ಅಥವಾ ವಿಪತ್ತನ್ನು ತಡೆಗಟ್ಟುವುದಕ್ಕಾಗಿ ಅಥವಾ ಉಪಶಮನ ಮಾಡುವುದಕ್ಕಾಗಿ ಕ್ರಮಗಳನ್ನು ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಕೈಗೊಳ್ಳಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಜಿಲ್ಲೆಯ ಸ್ಥಳೀಯ ಪ್ರಾಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಬಹುದು ಮತ್ತು ಅವುಗಳಿಗೆ ಮಾರ್ಗಸೂಚಿಗಳನ್ನು ನೀಡಬಹುದು;

(xxi) ಜಿಲ್ಲೆಯಲ್ಲಿಯ ಸ್ಥಳೀಯ ಪ್ರಾಧಿಕಾರಿಗಳಿಗೆ, ಅವು ತಮ್ಮ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅಗತ್ಯವಿರುವ ತಾಂತ್ರಿಕ ನೆರವನ್ನು ಒದಗಿಸಬಹುದು ಅಥವಾ ಸಲಹೆಯನ್ನು ನೀಡಬಹುದು;

(xxii) ವಿಪತ್ತನ್ನು ತಡೆಗಟ್ಟುವುದಕ್ಕಾಗಿ ಅಥವಾ ಉಪಶಮನ ಮಾಡುವುದಕ್ಕಾಗಿ, ಅವಶ್ಯಕ ಏರ್ಪಾಡುಗಳನ್ನು ಮಾಡುವುದಕ್ಕಾಗಿ, ಜಿಲ್ಲಾ ಮಟ್ಟದಲ್ಲಿ ಸರ್ಕಾರದ ಇಲಾಖೆಗಳು, ಶಾಸನಬದ್ಧ ಪ್ರಾಧಿಕಾರಗಳು ಅಥವಾ ಸ್ಥಳೀಯ ಪ್ರಾಧಿಕಾರಗಳು ಸಿದ್ಧಪಡಿಸಿದ ಅಭಿವೃದ್ಧಿ ಯೋಜನೆಗಳನ್ನು ಪರಿಶೀಲಿಸಬಹುದು;

(xxiii) ಜಿಲ್ಲೆಯ ಯಾವುದೇ ಪ್ರದೇಶದಲ್ಲಿನ ನಿರ್ಮಾಣವನ್ನು ಪರಿಶೀಲಿಸುವುದು ಮತ್ತು ವಿಪತ್ತು ತಡೆಗಟ್ಟುವುದಕ್ಕಾಗಿ ಅಥವಾ ಉಪಶಮನ ಮಾಡುವುದಕ್ಕಾಗಿ ಅಂಥ ನಿರ್ಮಾಣಕ್ಕಾಗಿ ನಿರೂಪಿಸಿರುವ ಮಾನಕಗಳನ್ನು ಅನುಸರಿಸುತ್ತಿಲ್ಲ ಅಥವಾ

ಅನುಸರಿಸಿಲ್ಲ ಎಂದು ಅಭಿಪ್ರಾಯಪಟ್ಟರೆ, ಅಂಥ ಮಾನಕಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಅಗತ್ಯವಾಗಬಹುದಾದಂಥ ಕ್ರಮವನ್ನು ತೆಗೆದುಕೊಳ್ಳಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ನಿರ್ದೇಶಿಸಬಹುದು;

(xxiv) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದಲ್ಲಿ ಅಥವಾ ವಿಪತ್ತಿನ ಸಂದರ್ಭದಲ್ಲಿ, ಪರಿಹಾರ ಕೇಂದ್ರಗಳಾಗಿ ಅಥವಾ ಶಿಬಿರಗಳಾಗಿ ಬಳಸಬಹುದಾದ ಕಟ್ಟಡಗಳನ್ನು ಮತ್ತು ಸ್ಥಳಗಳನ್ನು ಗುರುತಿಸಬಹುದು ಮತ್ತು ಅಂಥ ಕಟ್ಟಡಗಳಲ್ಲಿ ಅಥವಾ ಸ್ಥಳಗಳಲ್ಲಿ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕಾಗಿ ಏರ್ಪಾಡುಗಳನ್ನು ಮಾಡಬಹುದು;

(xxv) ಪರಿಹಾರ ಮತ್ತು ರಕ್ಷಣಾ ಸಾಮಗ್ರಿಗಳ ದಾಸ್ತಾನು ಮಳಿಗೆಗಳನ್ನು ಸ್ಥಾಪಿಸಬಹುದು ಅಥವಾ ಅಂಥ ಸಾಮಗ್ರಿಗಳು ಕಡಿಮೆ ಸಮಯದಲ್ಲಿ ಲಭ್ಯವಾಗುವಂತೆ ಮಾಡಲು ಸನ್ನದ್ಧರಾಗಿರುವುದನ್ನು ಖಚಿತಪಡಿಸಿಕೊಳ್ಳಬಹುದು;

(xxvi) ವಿಪತ್ತು ನಿರ್ವಹಣೆಯ ವಿವಿಧ ಅಂಶಗಳಿಗೆ ಸಂಬಂಧಿಸಿದಂತೆ ರಾಜ್ಯ ಪ್ರಾಧಿಕಾರಕ್ಕೆ ಮಾಹಿತಿಯನ್ನು ಒದಗಿಸುವುದು;

(xxvii) ವಿಪತ್ತು ನಿರ್ವಹಣೆಗಾಗಿ, ಜಿಲ್ಲೆಯಲ್ಲಿ ತಳಹಂತದಲ್ಲಿ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳು ಮತ್ತು ಸ್ವಯಂಸೇವಾ ಸಮಾಜ ಕಲ್ಯಾಣ ಸಂಸ್ಥೆಗಳು ತೊಡಗಿಸಿಕೊಳ್ಳುವುದನ್ನು ಪ್ರೋತ್ಸಾಹಿಸಬಹುದು;

(xxviii) ಸಂವಹನ ವ್ಯವಸ್ಥೆಗಳು ಕ್ರಮಬದ್ಧವಾಗಿರುವುದನ್ನು ಮತ್ತು ವಿಪತ್ತು ನಿರ್ವಹಣಾ ಅಭ್ಯಾಸಗಳನ್ನು ನಿಯತಕಾಲಿಕವಾಗಿ ನಡೆಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು;

(xxix) ರಾಜ್ಯ ಸರ್ಕಾರವು ಅಥವಾ ರಾಜ್ಯ ಪ್ರಾಧಿಕಾರವು ಅದಕ್ಕೆ ವಹಿಸಬಹುದಾದಂಥ ಅಥವಾ ಜಿಲ್ಲೆಯಲ್ಲಿ ವಿಪತ್ತು ನಿರ್ವಹಣೆಗೆ ಅಗತ್ಯವೆಂದು ಭಾವಿಸಬಹುದಾದ ಅಂಥ ಇತರೆ ಪ್ರಕಾರ್ಯಗಳನ್ನು ನಿರ್ವಹಿಸಬಹುದು.

**31. ಜಿಲ್ಲಾ ಯೋಜನೆ.–** (1) ರಾಜ್ಯದ ಪ್ರತಿಯೊಂದು ಜಿಲ್ಲೆಗೂ, ವಿಪತ್ತು ನಿರ್ವಹಣೆಗಾಗಿ ಒಂದು ಯೋಜನೆ ಇರತಕ್ಕದ್ದು.

(2) ಜಿಲ್ಲಾ ಪ್ರಾಧಿಕಾರವು, ಸ್ಥಳೀಯ ಪ್ರಾಧಿಕಾರಗಳೊಂದಿಗೆ ಸಮಾಲೋಚಿಸಿದ ತರುವಾಯ ಮತ್ತು ರಾಷ್ಟ್ರೀಯ ಯೋಜನೆಯನ್ನು ಮತ್ತು ರಾಜ್ಯ ಯೋಜನೆಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಪ್ರಾಧಿಕಾರದಿಂದ ಅನುಮೋದಿಸಲಾಗುವ ಜಿಲ್ಲಾ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು.

(3) ಜಿಲ್ಲಾ ಯೋಜನೆಯು, ಈ ಕೆಳಕಂಡವುಗಳನ್ನು ಎಂದರೆ:–

(ಎ) ಜಿಲ್ಲೆಯಲ್ಲಿ, ವಿವಿಧ ರೀತಿಯ ವಿಪತ್ತುಗಳಿಗೆ ಒಳಗಾಗುವ ಪ್ರದೇಶಗಳನ್ನು;

(ಬಿ) ವಿಪತ್ತನ್ನು ತಡೆಗಟ್ಟುವುದಕ್ಕಾಗಿ ಮತ್ತು ಉಪಶಮನ ಮಾಡುವುದಕ್ಕಾಗಿ, ಜಿಲ್ಲಾ ಮಟ್ಟದಲ್ಲಿ, ಸರ್ಕಾರದ ಇಲಾಖೆಗಳು ಮತ್ತು ಜಿಲ್ಲೆಯ ಸ್ಥಳೀಯ ಪ್ರಾಧಿಕಾರಗಳು ತೆಗೆದುಕೊಳ್ಳಬೇಕಾದ ಕ್ರಮಗಳನ್ನು;

(ಸಿ) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಅಥವಾ ವಿಪತ್ತಿಗೆ ಸ್ಪಂದಿಸಲು ಜಿಲ್ಲಾ ಮಟ್ಟದಲ್ಲಿ ಸರ್ಕಾರದ ಇಲಾಖೆಗಳು ಮತ್ತು ಜಿಲ್ಲೆಯ ಸ್ಥಳೀಯ ಪ್ರಾಧಿಕಾರಗಳು ತೆಗೆದುಕೊಳ್ಳಬೇಕೆಂದು ಅಗತ್ಯಪಡಿಸಿರುವ ಸಾಮರ್ಥ್ಯ ಸಂವರ್ಧನೆ ಮತ್ತು ಸನ್ನದ್ಧತೆಯ ಕ್ರಮಗಳನ್ನು;

(ಡಿ) ವಿಪತ್ತಿನ ಸಂದರ್ಭದಲ್ಲಿ, ಈ ಕೆಳಕಂಡವುಗಳಿಗೆ ಅವಕಾಶ ಕಲ್ಪಿಸುವುದಕ್ಕಾಗಿ, ಎಂದರೆ:–

(i) ಜಿಲ್ಲಾ ಮಟ್ಟದಲ್ಲಿಯ ಸರ್ಕಾರದ ಇಲಾಖೆಗಳಿಗೆ ಮತ್ತು ಜಿಲ್ಲೆಯ ಸ್ಥಳೀಯ ಪ್ರಾಧಿಕಾರಗಳಿಗೆ ಜವಾಬ್ದಾರಿಗಳ ಹಂಚಿಕೆಗಾಗಿ;

(ii) ವಿಪತ್ತು ಮತ್ತು ಅದರ ಪರಿಹಾರದ ಪ್ರತಿಸ್ಪಂದನೆಗಾಗಿ;

(iii) ಅಗತ್ಯ ಸಂಪನ್ಮೂಲಗಳ ಸಂಗ್ರಹಣೆಗಾಗಿ;

(iv) ಸಂಪರ್ಕ ಸಂವಹನ ವ್ಯವಸ್ಥೆಯ ಸ್ಥಾಪನೆಗಾಗಿ; ಮತ್ತು

(v) ಸಾರ್ವಜನಿಕರಿಗೆ ಮಾಹಿತಿಯ ಪ್ರಸಾರಕ್ಕಾಗಿ

– ಪ್ರತಿಸ್ಪಂದನಾ ಯೋಜನೆಗಳನ್ನು ಮತ್ತು ಕಾರ್ಯವಿಧಾನಗಳನ್ನು;

(ಇ) ರಾಜ್ಯ ಪ್ರಾಧಿಕಾರದ ಮೂಲಕ ಅಗತ್ಯಪಡಿಸಬಹುದಾದಂತೆ ಅಂಥ ಇತರೆ ವಿಷಯಗಳನ್ನು

– ಒಳಗೊಂಡಿರತಕ್ಕದ್ದು.

(4) ಜಿಲ್ಲಾ ಯೋಜನೆಯನ್ನು ವಾರ್ಷಿಕವಾಗಿ ಪರಿಶೀಲಿಸತಕ್ಕದ್ದು ಹಾಗೂ ಇಂದೀಕರಿಸತಕ್ಕದ್ದು.

(5) ಉಪಪ್ರಕರಣ (2) ಮತ್ತು (4)ರಲ್ಲಿ ಉಲ್ಲೇಖಿಸಲಾದ, ಜಿಲ್ಲಾ ಯೋಜನೆಯ ಪ್ರತಿಗಳನ್ನು ಜಿಲ್ಲೆಯಲ್ಲಿಯ ಸರ್ಕಾರದ ಇಲಾಖೆಗಳಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

(6) ಜಿಲ್ಲಾ ಪ್ರಾಧಿಕಾರವು, ರಾಜ್ಯ ಪ್ರಾಧಿಕಾರಕ್ಕೆ ಜಿಲ್ಲಾ ಯೋಜನೆಯ ಪ್ರತಿಯನ್ನು ಕಳುಹಿಸತಕ್ಕದ್ದು, ಅದು ಅದನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(7) ಜಿಲ್ಲಾ ಪ್ರಾಧಿಕಾರವು, ಯೋಜನೆಯ ಅನುಷ್ಠಾನವನ್ನು ಕಾಲಕಾಲಕ್ಕೆ ಪರಿಶೀಲಿಸತಕ್ಕದ್ದು ಮತ್ತು ಅದರ ಅನುಷ್ಠಾನಕ್ಕೆ ಅಗತ್ಯವೆಂದು ಭಾವಿಸಬಹುದಾದಂಥ ಸೂಚನೆಗಳನ್ನು ಜಿಲ್ಲೆಯಲ್ಲಿಯ ಸರ್ಕಾರದ ವಿವಿಧ ಇಲಾಖೆಗಳಿಗೆ ನೀಡತಕ್ಕದ್ದು.

**32. ಜಿಲ್ಲಾ ಮಟ್ಟದಲ್ಲಿಯ ವಿವಿಧ ಪ್ರಾಧಿಕಾರಗಳ ಯೋಜನೆಗಳು ಮತ್ತು ಅವುಗಳ ಅನುಷ್ಠಾನ.–** ಜಿಲ್ಲಾ ಮಟ್ಟದಲ್ಲಿನ ಭಾರತ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಪ್ರತಿಯೊಂದು ಕಚೇರಿಯು ಮತ್ತು ಸ್ಥಳೀಯ ಪ್ರಾಧಿಕಾರಗಳು ಜಿಲ್ಲಾ ಪ್ರಾಧಿಕಾರದ ಮೇಲ್ವಿಚಾರಣೆಗೊಳಪಟ್ಟು,–

(ಎ) ಈ ಕೆಳಕಂಡ ವಿಷಯಗಳ ಬಗ್ಗೆ, ಎಂದರೆ:–

(i) ಜಿಲ್ಲಾ ಯೋಜನೆಯಲ್ಲಿ ಉಪಬಂಧಿಸಲಾದಂತೆ ಮತ್ತು ಇಲಾಖೆಗೆ ಅಥವಾ ಸಂಬಂಧಪಟ್ಟ ಏಜೆನ್ಸಿಗೆ ವಹಿಸಲಾದ ವಿಪತ್ತನ್ನು ತಡೆಗಟ್ಟುವ ಮತ್ತು ಉಪಶಮನ ಮಾಡುವ ಕ್ರಮಗಳಿಗೆ ಸಂಬಂಧಿಸಿದ ಉಪಬಂಧಗಳನ್ನು;

(ii) ಜಿಲ್ಲಾ ಯೋಜನೆಯಲ್ಲಿ ವಿವರಿಸಿದ ಸಾಮರ್ಥ್ಯ ಸಂವರ್ಧನೆ ಮತ್ತು ಸನ್ನದ್ಧತೆಗೆ ಸಂಬಂಧಿಸಿದ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಸಂಬಂಧಿಸಿದ ಉಪಬಂಧಗಳನ್ನು;

(iii) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದ ಅಥವಾ ವಿಪತ್ತಿನ ಸಂದರ್ಭದಲ್ಲಿ ಪ್ರತಿಸ್ಪಂದನಾ ಯೋಜನೆಗಳನ್ನು ಮತ್ತು ಕಾರ್ಯವಿಧಾನಗಳನ್ನು

– ನಿರೂಪಿಸುವ ವಿಪತ್ತು ನಿರ್ವಹಣಾ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು;

(ಬಿ) ಸ್ಥಳೀಯ ಪ್ರಾಧಿಕಾರ, ಸಮುದಾಯಗಳು ಮತ್ತು ಇತರೆ ಹಿತಾಸಕ್ತಿದಾರರನ್ನು ಒಳಗೊಂಡಂತೆ ಜಿಲ್ಲಾ ಮಟ್ಟದಲ್ಲಿ ಇತರೆ ಸಂಸ್ಥೆಗಳೊಂದಿಗೆ ಅದರ ಯೋಜನೆಯ ಸಿದ್ಧಪಡಿಸುವುದನ್ನು ಮತ್ತು ಅನುಷ್ಠಾನವನ್ನು ಸಮನ್ವಯಗೊಳಿಸತಕ್ಕದ್ದು;

(ಸಿ) ನಿಯತಕಾಲಿಕವಾಗಿ ಯೋಜನೆಯನ್ನು ಪರಿಶೀಲಿಸತಕ್ಕದ್ದು ಮತ್ತು ಇಂದೀಕರಿಸತಕ್ಕದ್ದು; ಮತ್ತು

(ಡಿ) ಅದರ ವಿಪತ್ತು ನಿರ್ವಹಣಾ ಯೋಜನೆಯ ಮತ್ತು ಅದರ ಯಾವುದೇ ತಿದ್ದುಪಡಿಯ ಪ್ರತಿಯನ್ನು ಜಿಲ್ಲಾ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

**33. ಜಿಲ್ಲಾ ಪ್ರಾಧಿಕಾರದಿಂದ ಕೋರಿಕೆ.–** ಜಿಲ್ಲಾ ಪ್ರಾಧಿಕಾರವು, ಜಿಲ್ಲಾ ಮಟ್ಟದಲ್ಲಿ ಆದೇಶದ ಮೂಲಕ, ಯಾರೇ ಅಧಿಕಾರಿಯು ಅಥವಾ ಯಾವುದೇ ಇಲಾಖೆಯು ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರವು, ವಿಪತ್ತನ್ನು ತಡೆಗಟ್ಟುವುದಕ್ಕಾಗಿ ಅಥವಾ ಅದನ್ನು ಉಪಶಮನ ಮಾಡುವುದಕ್ಕಾಗಿ ಅಥವಾ ಅದನ್ನು ಪರಿಣಾಮಕಾರಿಯಾಗಿ ಪ್ರತಿಸ್ಪಂದಿಸುವುದಕ್ಕಾಗಿ ಅಗತ್ಯವಾಗಬಹುದಾದ ಅಂಥ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಅಗತ್ಯಪಡಿಸಬಹುದು ಮತ್ತು ಅಂಥ ಅಧಿಕಾರಿಯು ಅಥವಾ ಇಲಾಖೆಯು ಅಂಥ ಆದೇಶವನ್ನು ಪಾಲಿಸಲು ಬದ್ಧರಾಗಿರತಕ್ಕದ್ದು.

**34. ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದಲ್ಲಿ ಮತ್ತು ವಿಪತ್ತಿನ ಸಂದರ್ಭದಲ್ಲಿ, ಜಿಲ್ಲಾ ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಅಥವಾ ವಿಪತ್ತಿಗೆ ಪ್ರತಿಸ್ಪಂದನೆಯಾಗಿ ಸಮುದಾಯಕ್ಕೆ, ನೆರವು ನೀಡುವ, ಸಂರಕ್ಷಿಸುವ ಅಥವಾ ಪರಿಹಾರ ಒದಗಿಸುವ ಉದ್ದೇಶದಿಂದ, ಜಿಲ್ಲಾ ಪ್ರಾಧಿಕಾರವು,–

(ಎ) ಸರ್ಕಾರದ ಯಾವುದೇ ಇಲಾಖೆಯಲ್ಲಿ ಮತ್ತು ಜಿಲ್ಲೆಯ ಸ್ಥಳೀಯ ಪ್ರಾಧಿಕಾರದಲ್ಲಿ ಲಭ್ಯವಿರುವ ಸಂಪನ್ಮೂಲಗಳ ಬಿಡುಗಡೆಗಾಗಿ ಮತ್ತು ಬಳಕೆಗಾಗಿ ನಿರ್ದೇಶನಗಳನ್ನು ನೀಡಬಹುದು;

(ಬಿ) ವಿಪತ್ತಿಗೆ ಒಳಗಾಗುವ ಮತ್ತು ಬಾಧಿತ ಪ್ರದೇಶದೊಳಗೆ ಹೋಗುವ, ಅಲ್ಲಿಂದ ಹೊರಬರುವ ಮತ್ತು ಆ ಪ್ರದೇಶದೊಳಗಿನ ವಾಹನಗಳ ಸಂಚಾರವನ್ನು ನಿಯಂತ್ರಿಸಬಹುದು ಮತ್ತು ನಿರ್ಬಂಧಿಸಬಹುದು;

(ಸಿ) ವಿಪತ್ತಿಗೆ ಒಳಗಾಗುವ ಅಥವಾ ಬಾಧಿತ ಪ್ರದೇಶದೊಳಗೆ ಪ್ರವೇಶಿಸುವಾಗಿನ, ಆ ಪ್ರದೇಶದೊಳಗೆ ಇರುವಾಗಿನ ಅಥವಾ ಹೊರ ಹೋಗುವಾಗಿನ ಯಾರೇ ವ್ಯಕ್ತಿಯ ಚಲನವಲನವನ್ನು ನಿಯಂತ್ರಿಸಬಹುದು ಮತ್ತು ನಿರ್ಬಂಧಿಸಬಹುದು;

(ಡಿ) ಅವಶೇಷಗಳನ್ನು ತೆರವುಗೊಳಿಸಬಹುದು, ಶೋಧನಾ ಕಾರ್ಯ ಜರುಗಿಸಬಹುದು ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ಕೈಗೊಳ್ಳಬಹುದು;

(ಇ) ಆಶ್ರಯ, ಆಹಾರ, ಕುಡಿಯುವ ನೀರು, ಅತ್ಯಾವಶ್ಯಕ ವ್ಯವಸ್ಥೆಗಳು, ಆರೋಗ್ಯ ರಕ್ಷಣೆ ಮತ್ತು ಸೇವೆಗಳನ್ನು ಒದಗಿಸಬಹುದು;

(ಎಫ್) ಬಾಧಿತ ಪ್ರದೇಶದಲ್ಲಿ ತುರ್ತು ಸಂವಹನ ವ್ಯವಸ್ಥೆಗಳನ್ನು ಸ್ಥಾಪಿಸಬಹುದು;

(ಜಿ) ವಾರಸುದಾರರಿಲ್ಲದ ಮೃತದೇಹಗಳ ವಿಲೇವಾರಿಗಾಗಿ ಏರ್ಪಾಡು ಮಾಡುವುದು;

(ಹೆಚ್) ಜಿಲ್ಲಾ ಮಟ್ಟದಲ್ಲಿನ ರಾಜ್ಯ ಸರ್ಕಾರದ ಯಾವುದೇ ಇಲಾಖೆಗೆ ಅಥವಾ ಯಾವುದೇ ಪ್ರಾಧಿಕಾರಕ್ಕೆ ಅಥವಾ ಆ ಸರ್ಕಾರದ ನಿಕಾಯಕ್ಕೆ ತನ್ನ ಅಭಿಪ್ರಾಯದಲ್ಲಿ ಅವಶ್ಯಕವಾಗಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡುವುದು;

(ಐ) ರಕ್ಷಣೆ ಮತ್ತು ಪರಿಹಾರ ಕಾರ್ಯಕ್ಕೆ, ಸಲಹೆ ಮತ್ತು ನೆರವು ನೀಡಲು ವಿಪತ್ತುಗಳ ಕ್ಷೇತ್ರದಲ್ಲಿ ತಜ್ಞರನ್ನು ಮತ್ತು ಸಮಾಲೋಚಕರನ್ನು ಅಗತ್ಯಪಡಿಸಬಹುದು;

(ಜೆ) ಯಾವುದೇ ಪ್ರಾಧಿಕಾರದಿಂದ ಅಥವಾ ಯಾರೇ ವ್ಯಕ್ತಿಯಿಂದ ಸೌಲಭ್ಯಗಳ ಬಳಕೆಯನ್ನು ಪ್ರತ್ಯೇಕವಾಗಿ ಅಥವಾ ಆದ್ಯತೆಗೆ ಅನುಸಾರವಾಗಿ ಪಡೆದುಕೊಳ್ಳಬಹುದು;

(ಕೆ) ತಾತ್ಕಾಲಿಕ ಸೇತುವೆಗಳನ್ನು ಅಥವಾ ಅಗತ್ಯ ನಿರ್ಮಿತಿಗಳನ್ನು ನಿರ್ಮಾಣ ಮಾಡಬಹುದು ಮತ್ತು ಸಾರ್ವಜನಿಕರಿಗೆ ಅಪಾಯ ಉಂಟಾಗಬಹುದಾದ ಅಥವಾ ವಿಪತ್ತಿನ ಪರಿಣಾಮವನ್ನು ತೀವ್ರಗೊಳಿಸಬಹುದಾದ ನಿರ್ಮಿತಿಗಳನ್ನು ಕೆಡವಬಹುದು;

(ಎಲ್) ಸರ್ಕಾರೇತರ ಸಂಸ್ಥೆಗಳು, ಅವು ತಮ್ಮ ಕಾರ್ಯಚಟುವಟಿಕೆಗಳನ್ನು, ನ್ಯಾಯೋಚಿತವಾಗಿ ಮತ್ತು ಭೇದಭಾವವಿಲ್ಲದೇ ಕೈಗೊಳ್ಳುವುದನ್ನು ಖಚಿತಪಡಿಸಿಕೊಳ್ಳಬಹುದು;

(ಎಮ್) ಅಂಥ ಸಂದರ್ಭದಲ್ಲಿ, ತೆಗೆದುಕೊಳ್ಳಬೇಕೆಂದು ಅಗತ್ಯಪಡಿಸಬಹುದಾದಂಥ ಅಥವಾ ನಿರ್ದೇಶಿಸಬಹುದಾದಂಥ ಇತರ ಕ್ರಮಗಳನ್ನು ಕೈಗೊಳ್ಳಬಹುದು.

## ಅಧ್ಯಾಯ V

## ವಿಪತ್ತು ನಿರ್ವಹಣೆಗಾಗಿ ಸರ್ಕಾರದ ಕ್ರಮಗಳು

**35. ಕೇಂದ್ರ ಸರ್ಕಾರವು ಕ್ರಮಗಳನ್ನು ಕೈಗೊಳ್ಳುವುದು.–** (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಕೇಂದ್ರ ಸರ್ಕಾರವು, ವಿಪತ್ತು ನಿರ್ವಹಣೆಯ ಉದ್ದೇಶಕ್ಕಾಗಿ, ಅದು ಅವಶ್ಯಕ ಅಥವಾ ವಿಹಿತವೆಂದು ಭಾವಿಸಬಹುದಾದಂಥ ಎಲ್ಲ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಕೇಂದ್ರ ಸರ್ಕಾರವು, ವಿಶೇಷವಾಗಿ ಮತ್ತು (1)ನೇ ಉಪಪ್ರಕರಣದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಆ ಉಪಪ್ರಕರಣದ ಮೇರೆಗೆ ಕೈಗೊಳ್ಳಬಹುದಾದಂಥ ಕ್ರಮಗಳು, ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳು ಒಳಗೊಂಡಂತೆ, ಅವುಗಳ ಸಂಬಂಧದಲ್ಲಿ, ಎಂದರೆ:–

(ಎ) ವಿಪತ್ತು ನಿರ್ವಹಣೆಗೆ ಸಂಬಂಧಿಸಿದಂತೆ, ಭಾರತ ಸರ್ಕಾರದ ಮಂತ್ರಾಲಯಗಳು ಅಥವಾ ಇಲಾಖೆಗಳು, ರಾಜ್ಯ ಸರ್ಕಾರಗಳು, ರಾಷ್ಟ್ರೀಯ ಪ್ರಾಧಿಕಾರ, ರಾಜ್ಯ ಪ್ರಾಧಿಕಾರಗಳು, ಸರ್ಕಾರದ ಮತ್ತು ಸರ್ಕಾರೇತರ ಸಂಸ್ಥೆಗಳು ಕೈಗೊಂಡ ಕ್ರಮಗಳನ್ನು ಸಮನ್ವಯಗೊಳಿಸುವುದು;

(ಬಿ) ಅವುಗಳ ಅಭಿವೃದ್ಧಿ ಯೋಜನೆಗಳು ಮತ್ತು ಪರಿಯೋಜನೆಗಳಲ್ಲಿ ಭಾರತ ಸರ್ಕಾರದ ಮಂತ್ರಾಲಯಗಳು ಅಥವಾ ಇಲಾಖೆಗಳು, ವಿಪತ್ತು ನಿವಾರಣೆ ಮತ್ತು ಉಪಶಮನ ಮಾಡುವುದಕ್ಕಾಗಿ ಕೈಗೊಂಡ ಕ್ರಮಗಳ ಸಂಯೋಜನೆಯನ್ನು ಖಚಿತಪಡಿಸಿಕೊಳ್ಳುವುದು;

(ಸಿ) ಭಾರತ ಸರ್ಕಾರದ ಮಂತ್ರಾಲಯಗಳು ಅಥವಾ ಇಲಾಖೆಗಳು, ವಿಪತ್ತು ನಿವಾರಣೆಗಾಗಿ ಮತ್ತು ಉಪಶಮನಕ್ಕಾಗಿ, ಸಾಮರ್ಥ್ಯ ಸಂವರ್ಧನೆಗಾಗಿ ಮತ್ತು ಸನ್ನದ್ಧತೆಗಾಗಿ ನಿಧಿಗಳನ್ನು ಸಮರ್ಪಕವಾಗಿ ಹಂಚಿಕೆ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದು;

(ಡಿ) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಅಥವಾ ವಿಪತ್ತಿಗೆ ಸಂಬಂಧಿಸಿದಂತೆ, ಭಾರತ ಸರ್ಕಾರದ ಮಂತ್ರಾಲಯಗಳು ಅಥವಾ ಇಲಾಖೆಗಳು, ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಪ್ರತಿಸ್ಪಂದಿಸುವುದಕ್ಕೆ, ಸನ್ನದ್ಧತೆಯ ಅಗತ್ಯ ಕ್ರಮಗಳನ್ನು ಕೈಗೊಂಡಿವೆಯೋ ಎಂಬುದನ್ನು ಖಚಿತಪಡಿಸುವುದು;

(ಇ) ರಾಜ್ಯ ಸರ್ಕಾರಗಳು, ಕೋರಿಕೊಂಡಿರುವಂತೆ ಅಥವಾ ಅನ್ಯಥಾ ಅದು ಸೂಕ್ತವೆಂದು ಭಾವಿಸಬಹುದಾದಂತೆ, ಅವುಗಳೊಂದಿಗೆ ಸಹಕರಿಸುವ ಹಾಗೂ ಅವುಗಳಿಗೆ ನೆರವು ನೀಡುವುದು;

(ಎಫ್) ಈ ಅಧಿನಿಯಮದ ಉದ್ದೇಶಗಳಿಗಾಗಿ ಅಗತ್ಯವಾಗಬಹುದಾದ ನೌಕಾ ಪಡೆಯನ್ನು, ಮಿಲಿಟರಿಯನ್ನು ಮತ್ತು ವಾಯುಪಡೆಗಳನ್ನು, ಇತರೆ ಕೇಂದ್ರ ಸಶಸ್ತ್ರ ಪಡೆಗಳನ್ನು ಅಥವಾ ಯಾವುದೇ ಇತರೆ ಅಸೈನಿಕ ಸಿಬ್ಬಂದಿ ವರ್ಗವನ್ನು ನಿಯೋಜಿಸುವುದು;

(ಜಿ) ಈ ಅಧಿನಿಯಮದ ಉದ್ದೇಶಗಳಿಗಾಗಿ, ವಿಶ್ವಸಂಸ್ಥೆಯ ಏಜೆನ್ಸಿಗಳು, ಅಂತರರಾಷ್ಟ್ರೀಯ ಸಂಘಟನೆಗಳು ಮತ್ತು ವಿದೇಶಿ ಸರ್ಕಾರಗಳೊಂದಿಗೆ ಸಮನ್ವಯ ಸಾಧಿಸುವುದು;

(ಹೆಚ್) ವಿಪತ್ತು ನಿರ್ವಹಣೆ ಕ್ಷೇತ್ರದಲ್ಲಿ ಸಂಶೋಧನೆ, ತರಬೇತಿ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಸಂಸ್ಥೆಗಳನ್ನು ಸ್ಥಾಪಿಸುವುದು;

(ಐ) ಈ ಅಧಿನಿಯಮದ ಉಪಬಂಧಗಳ ಪರಿಣಾಮಕಾರಿ ಅನುಷ್ಠಾನವನ್ನು ಸುನಿಶ್ಚಿತಗೊಳಿಸುವ ಉದ್ದೇಶಕ್ಕಾಗಿ, ಅದು ಅವಶ್ಯಕ ಅಥವಾ ವಿಹಿತವೆಂದು ಭಾವಿಸಬಹುದಾದಂಥ ಇತರ ವಿಷಯಗಳು.

(3) ಕೇಂದ್ರ ಸರ್ಕಾರವು, ಭಾರಿ ವಿಪತ್ತಿನಿಂದ ಬಾಧಿತವಾದ ದೇಶಗಳಿಗೆ ಅದು ಸೂಕ್ತವೆಂದು ಭಾವಿಸಬಹುದಾದಂಥ ನೆರವನ್ನು ವಿಸ್ತರಿಸಬಹುದು.

**36. ಭಾರತ ಸರ್ಕಾರದ ಮಂತ್ರಾಲಯಗಳ ಅಥವಾ ಇಲಾಖೆಗಳ ಜವಾಬ್ದಾರಿಗಳು.**– ಈ ಮುಂದಿನವುಗಳು, ಎಂದರೆ:–

(ಎ) ರಾಷ್ಟ್ರೀಯ ಪ್ರಾಧಿಕಾರವು ರೂಪಿಸಿದ ಮಾರ್ಗಸೂಚಿಗಳಿಗನುಸಾರ, ವಿಪತ್ತುಗಳನ್ನು ತಡೆಗಟ್ಟುವುದಕ್ಕಾಗಿ, ಉಪಶಮನಕ್ಕಾಗಿ, ಸನ್ನದ್ಧತೆಗಾಗಿ ಮತ್ತು ಸಾಮರ್ಥ್ಯ ಸಂವರ್ಧನೆಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು;

(ಬಿ) ರಾಷ್ಟ್ರೀಯ ಪ್ರಾಧಿಕಾರವು ರೂಪಿಸಿದ ಮಾರ್ಗಸೂಚಿಗಳಿಗನುಸಾರವಾಗಿ, ಅದರ ಅಭಿವೃದ್ಧಿ ಯೋಜನೆಗಳಲ್ಲಿ ಮತ್ತು ಪರಿಯೋಜನೆಗಳಲ್ಲಿ, ವಿಪತ್ತನ್ನು ತಡೆಗಟ್ಟುವುದಕ್ಕಾಗಿ ಅಥವಾ ಉಪಶಮನಕ್ಕಾಗಿ ಕ್ರಮಗಳನ್ನು ಸಂಯೋಜಿಸುವುದು;

(ಸಿ) ರಾಷ್ಟ್ರೀಯ ಪ್ರಾಧಿಕಾರದ ಮಾರ್ಗಸೂಚಿಗಳಿಗೆ ಅಥವಾ ಈ ಬಗ್ಗೆ ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯ ನಿರ್ದೇಶನಗಳಿಗೆ ಅನುಸಾರವಾಗಿ ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಅಥವಾ ವಿಪತ್ತಿಗೆ ಪರಿಣಾಮಕಾರಿಯಾಗಿ ಮತ್ತು ತ್ವರಿತವಾಗಿ ಪ್ರತಿಸ್ಪಂದಿಸುವುದು;

(ಡಿ) ಅದು ಜಾರಿಗೆ ತರುವ ಅಧಿನಿಯಮಿತಿಗಳನ್ನು, ಅದರ ಕಾರ್ಯನೀತಿಗಳಲ್ಲಿ, ನಿಯಮಗಳಲ್ಲಿ ಮತ್ತು ವಿನಿಯಮನಗಳಲ್ಲಿ, ವಿಪತ್ತುಗಳ ತಡೆಗಟ್ಟುವಿಕೆಗಾಗಿ, ಉಪಶಮನಕ್ಕಾಗಿ ಅಥವಾ ಸನ್ನದ್ಧತೆಗಾಗಿ ಅಗತ್ಯವಾದ ಉಪಬಂಧಗಳನ್ನು ಸೇರಿಸುವ ದೃಷ್ಟಿಯಿಂದ, ಅವುಗಳನ್ನು ಪರಿಶೀಲಿಸುವುದು;

(ಇ) ವಿಪತ್ತು ತಡೆಗಟ್ಟುವ, ಉಪಶಮನ ಮಾಡುವ, ಸಾಮರ್ಥ್ಯ ಸಂವರ್ಧನೆಯ ಮತ್ತು ಸನ್ನದ್ಧತೆಯ ಕ್ರಮಗಳಿಗಾಗಿ ನಿಧಿಗಳನ್ನು ಹಂಚಿಕೆ ಮಾಡುವುದು;

(ಎಫ್) ರಾಷ್ಟ್ರೀಯ ಪ್ರಾಧಿಕಾರಕ್ಕೆ ಮತ್ತು ರಾಜ್ಯ ಸರ್ಕಾರಗಳಿಗೆ,–

(i) ವಿಪತ್ತು ನಿರ್ವಹಣೆಗೆ ಸಂಬಂಧಿಸಿದಂತೆ, ಉಪಶಮನಕ್ಕಾಗಿ, ಸನ್ನದ್ಧತೆಗಾಗಿ ಮತ್ತು ಪ್ರತಿಸ್ಪಂದನೆಗಾಗಿ ಯೋಜನೆಗಳನ್ನು ಸಿದ್ಧಪಡಿಸುವುದಕ್ಕಾಗಿ, ಸಾಮರ್ಥ್ಯ–ಸಂವರ್ಧನೆ, ದತ್ತಾಂಶ ಸಂಗ್ರಹಣೆ ಮತ್ತು ಗುರುತಿಸುವಿಕೆಗಾಗಿ ಮತ್ತು ಸಿಬ್ಬಂದಿಗಳ ತರಬೇತಿಗಾಗಿ ವ್ಯವಸ್ಥೆ ಮಾಡುವುದಕ್ಕಾಗಿ;

(ii) ಬಾಧಿತ ಪ್ರದೇಶದಲ್ಲಿ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗಳನ್ನು ಕೈಗೊಳ್ಳುವುದಕ್ಕಾಗಿ;

(iii) ಯಾವುದೇ ವಿಪತ್ತಿನಿಂದ ಉಂಟಾದ ಹಾನಿಯನ್ನು ನಿರ್ಧರಿಸುವುದಕ್ಕಾಗಿ;

(iv) ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವುದಕ್ಕಾಗಿ

– ನೆರವು ನೀಡುವುದು;

(ಜಿ) ಅದರ ಸಂಪನ್ಮೂಲಗಳು,–

(i) ವಿಪತ್ತಿಗೆ ಒಳಗಾಗಬಹುದಾದ ಅಥವಾ ಬಾಧಿತ ಪ್ರದೇಶದೊಂದಿಗೆ ತುರ್ತು ಸಂಪರ್ಕ ಕಲ್ಪಿಸುವುದಕ್ಕಾಗಿ;

(ii) ಬಾಧಿತ ಪ್ರದೇಶಕ್ಕೆ ಮತ್ತು ಬಾಧಿತ ಪ್ರದೇಶದಿಂದ ಸಿಬ್ಬಂದಿ ಹಾಗೂ ಪರಿಹಾರ ಸರಕುಗಳನ್ನು ಸಾಗಿಸುವುದಕ್ಕೆ;

(iii) ಸ್ಥಳಾಂತರಿಸುವುದು, ರಕ್ಷಣೆ, ತಾತ್ಕಾಲಿಕ ಆಶ್ರಯ ಅಥವಾ ಇತರ ತುರ್ತು ಪರಿಹಾರ ಒದಗಿಸುವುದಕ್ಕೆ;

(iv) ತಾತ್ಕಾಲಿಕ ಸೇತುವೆಗಳು, ಒಡ್ಡುಗಳು ಮತ್ತು ಇಳಿದಾಣಗಳನ್ನು ಸ್ಥಾಪಿಸುವುದಕ್ಕೆ;

(v) ಬಾಧಿತ ಪ್ರದೇಶದಲ್ಲಿ ಕುಡಿಯುವ ನೀರು, ಅತ್ಯಾವಶ್ಯಕ ವ್ಯವಸ್ಥೆಗಳು, ಆರೋಗ್ಯ ರಕ್ಷಣೆ ಮತ್ತು ಸೇವೆಗಳನ್ನು ಕಲ್ಪಿಸುವುದಕ್ಕೆ

– ಸಂಬಂಧಿಸಿದ ಕ್ರಮಗಳು ಒಳಗೊಂಡಂತೆ, ರಾಜ್ಯದಲ್ಲಿ ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಅಥವಾ ವಿಪತ್ತಿಗೆ, ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಪ್ರತಿಸ್ಪಂದಿಸುವ ಉದ್ದೇಶಗಳಿಗಾಗಿ, ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಗೆ ಅಥವಾ ರಾಜ್ಯ ಕಾರ್ಯನಿರ್ವಾಹಕ ಸಮಿತಿಗೆ ಲಭ್ಯವಾಗುವಂತೆ ಮಾಡುವುದು;

(ಹೆಚ್) ವಿಪತ್ತು ನಿರ್ವಹಣೆಗಾಗಿ ಅಗತ್ಯವಾಗಬಹುದಾದಂಥ ಇತರ ಕ್ರಮಗಳನ್ನು ಕೈಗೊಳ್ಳುವುದು

– ರಾಜ್ಯ ಸರ್ಕಾರದ ಪ್ರತಿಯೊಂದು ಮಂತ್ರಾಲಯದ ಮತ್ತು ಇಲಾಖೆಯ ಜವಾಬ್ದಾರಿಯಾಗಿರತಕ್ಕದ್ದು.

**37. ಭಾರತ ಸರ್ಕಾರದ ಮಂತ್ರಾಲಯಗಳ ಅಥವಾ ಇಲಾಖೆಗಳ ವಿಪತ್ತು ನಿರ್ವಹಣಾ ಯೋಜನೆಗಳು.–** (1) ಭಾರತ ಸರ್ಕಾರದ ಪ್ರತಿಯೊಂದು ಮಂತ್ರಾಲಯವು ಅಥವಾ ಇಲಾಖೆಯು,–

(ಎ) ಈ ಕೆಳಕಂಡ ವಿವರಗಳನ್ನು ನಿರ್ದಿಷ್ಟಪಡಿಸಿ ವಿಪತ್ತು ನಿರ್ವಹಣಾ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು, ಎಂದರೆ:–

(i) ರಾಷ್ಟ್ರೀಯ ಯೋಜನೆಯನುಸಾರ ವಿಪತ್ತುಗಳನ್ನು ತಡೆಗಟ್ಟುವುದಕ್ಕಾಗಿ ಮತ್ತು ಉಪಶಮನಕ್ಕಾಗಿ ಅದು ಕೈಗೊಳ್ಳಬೇಕಾದ ಕ್ರಮಗಳು;

(ii) ರಾಷ್ಟ್ರೀಯ ಪ್ರಾಧಿಕಾರದ ಮತ್ತು ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯ ಮಾರ್ಗಸೂಚಿಗಳನುಸಾರ ಅದರ ಅಭಿವೃದ್ಧಿ ಯೋಜನೆಗಳಲ್ಲಿ ಉಪಶಮನ ಮಾಡುವುದಕ್ಕಾಗಿ ಕ್ರಮಗಳನ್ನು ಸಂಯೋಜಿಸುವುಕ್ಕೆ ಸಂಬಂಧಿಸಿದ ನಿರ್ದಿಷ್ಟ ವಿವರಣೆಗಳು;

(iii) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶವನ್ನು ಅಥವಾ ವಿಪತ್ತನ್ನು ನಿಭಾಯಿಸಲು ಸನ್ನದ್ಧತೆ ಮತ್ತು ಸಾಮರ್ಥ್ಯ ಸಂವರ್ಧನೆಗೆ ಸಂಬಂಧಿಸಿದಂತೆ ಅದರ ಪಾತ್ರಗಳು ಮತ್ತು ಜವಾಬ್ದಾರಿಗಳು;

(iv) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಅಥವಾ ವಿಪತ್ತಿಗೆ ತ್ವರಿತವಾಗಿ ಹಾಗೂ ಪರಿಣಾಮಕಾರಿಯಾಗಿ ಪ್ರತಿಸ್ಪಂದಿಸುವುದಕ್ಕಾಗಿ ಅದರ ಪಾತ್ರಗಳು ಮತ್ತು ಜವಾಬ್ದಾರಿಗಳು;

(v) ಉಪ–ಖಂಡಗಳಾದ (iii) ಮತ್ತು (iv) ರಲ್ಲಿ ನಿರ್ದಿಷ್ಟಪಡಿಸಿದ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಲು ಅದರ ಸನ್ನದ್ಧತೆಯ ಪ್ರಸಕ್ತ ಸ್ಥಿತಿಗತಿ;

(vi) ಉಪ–ಖಂಡಗಳಾದ (iii) ಮತ್ತು (iv) ರಲ್ಲಿ ನಿರ್ದಿಷ್ಟಪಡಿಸಿದ ಅದರ ಜವಾಬ್ದಾರಿಗಳನ್ನು ನಿರ್ವಹಿಸಲು ಅನುಕೂಲ ಮಾಡಿಕೊಡುವ ಸಲುವಾಗಿ, ತೆಗೆದುಕೊಳ್ಳಬೇಕೆಂದು ಅಗತ್ಯಪಡಿಸಿದ ಕ್ರಮಗಳು;

(ಬಿ) ಖಂಡ (ಎ)ಯಲ್ಲಿ ಉಲ್ಲೇಖಿಸಿದ ಯೋಜನೆಯನ್ನು ವಾರ್ಷಿಕವಾಗಿ ಪರಿಶೀಲಿಸತಕ್ಕದ್ದು ಮತ್ತು ಇಂದೀಕರಿಸತಕ್ಕದ್ದು;

(ಸಿ) ಸಂದರ್ಭಾನುಸಾರ ಖಂಡ (ಎ)ಯಲ್ಲಿ ಅಥವಾ ಖಂಡ (ಬಿ)ಯಲ್ಲಿ ಉಲ್ಲೇಖಿಸಿದ ಯೋಜನೆಯ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು ಹಾಗೂ ಅದು, ಅದರ ಒಂದು ಪ್ರತಿಯನ್ನು ಅನುಮೋದನೆಗಾಗಿ ರಾಷ್ಟ್ರೀಯ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(2) ಭಾರತ ಸರ್ಕಾರದ ಪ್ರತಿಯೊಂದು ಮಂತ್ರಾಲಯವು ಅಥವಾ ಇಲಾಖೆಯು,–

(ಎ) (1)ನೇ ಉಪಪ್ರಕರಣದ ಖಂಡ (ಎ)ನ ಮೇರೆಗೆ, ವಿಪತ್ತು ನಿರ್ವಹಣಾ ಕಾರ್ಯಚಟುವಟಿಕೆ ಯೋಜನೆಯನ್ನು ಸಿದ್ಧಪಡಿಸುವಾಗ, ಅದರಲ್ಲಿ ನಿರ್ದಿಷ್ಟಪಡಿಸಿದ ಕಾರ್ಯಚಟುವಟಿಕೆಗಳಿಗೆ ಹಣಕಾಸು ಒದಗಿಸುವುದಕ್ಕಾಗಿ ಏರ್ಪಾಡು ಮಾಡತಕ್ಕದ್ದು;

(ಬಿ) ರಾಷ್ಟ್ರೀಯ ಪ್ರಾಧಿಕಾರಕ್ಕೆ, (1)ನೇ ಉಪಪ್ರಕರಣದ ಖಂಡ (ಎ)ನಲ್ಲಿ ಉಲ್ಲೇಖಿಸಿದ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಸ್ಥಿತಿಗತಿಯ ಒಂದು ವರದಿಯನ್ನು ಅದು ಅಗತ್ಯಪಡಿಸಿದಾಗ ಒದಗಿಸತಕ್ಕದ್ದು.

**38. ರಾಜ್ಯ ಸರ್ಕಾರವು ಕ್ರಮಗಳನ್ನು ಕೈಗೊಳ್ಳುವುದು.–** (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಪ್ರತಿಯೊಂದು ರಾಜ್ಯ ಸರ್ಕಾರವು, ವಿಪತ್ತು ನಿರ್ವಹಣೆಯ ಉದ್ದೇಶಕ್ಕಾಗಿ, ರಾಷ್ಟ್ರೀಯ ಪ್ರಾಧಿಕಾರವು, ರೂಪಿಸಿರುವ ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಕ್ರಮಗಳನ್ನು ಹಾಗೂ ತಾನು ಅವಶ್ಯಕ ಅಥವಾ ವಿಹಿತವೆಂದು ಭಾವಿಸಬಹುದಾದಂಥ ಹೆಚ್ಚುವರಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ರಾಜ್ಯ ಸರ್ಕಾರವು, (1)ನೇ ಉಪಪ್ರಕರಣದ ಮೇರೆಗೆ ಕೈಗೊಳ್ಳಬಹುದಾದ ಕ್ರಮಗಳು, ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಸಂಬಂಧಪಟ್ಟ ಕ್ರಮಗಳನ್ನು, ಎಂದರೆ:–

(ಎ) ರಾಜ್ಯ ಸರ್ಕಾರ, ರಾಜ್ಯ ಪ್ರಾಧಿಕಾರ, ಜಿಲ್ಲಾ ಪ್ರಾಧಿಕಾರಗಳು, ಸ್ಥಳೀಯ ಪ್ರಾಧಿಕಾರ ಮತ್ತು ಇತರ ಸರ್ಕಾರೇತರ ಸಂಸ್ಥೆಗಳ ವಿವಿಧ ಇಲಾಖೆಗಳ ಕ್ರಮಗಳನ್ನು ಸಮನ್ವಯಗೊಳಿಸುವುದನ್ನು;

(ಬಿ) ರಾಷ್ಟ್ರೀಯ ಪ್ರಾಧಿಕಾರಕ್ಕೆ ಮತ್ತು ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಗೆ, ರಾಜ್ಯ ಪ್ರಾಧಿಕಾರಕ್ಕೆ ಮತ್ತು ರಾಜ್ಯ ಕಾರ್ಯನಿರ್ವಾಹಕ ಸಮಿತಿಗೆ ಮತ್ತು ಜಿಲ್ಲಾ ಪ್ರಾಧಿಕಾರಗಳಿಗೆ ವಿಪತ್ತು ನಿರ್ವಹಣೆಯಲ್ಲಿ ಸಹಕಾರ ಮತ್ತು ನೆರವು ನೀಡುವುದನ್ನು;

(ಸಿ) ಭಾರತ ಸರ್ಕಾರದ ಮಂತ್ರಾಲಯಗಳು ಅಥವಾ ಇಲಾಖೆಗಳು ಕೋರಿದಾಗ ಅಥವಾ ಅನ್ಯಥಾ ಅದು ಸೂಕ್ತವೆಂದು ಭಾವಿಸಬಹುದಾದಂತೆ, ವಿಪತ್ತು ನಿರ್ವಹಣೆಯಲ್ಲಿ ಅವುಗಳೊಂದಿಗೆ ಸಹಕರಿಸುವುದು ಹಾಗೂ ಅವುಗಳಿಗೆ ನೆರವು ನೀಡುವುದನ್ನು;

(ಡಿ) ರಾಜ್ಯ ಯೋಜನೆ ಮತ್ತು ಜಿಲ್ಲಾ ಯೋಜನೆಗಳ ಉಪಬಂಧಗಳಿಗೆ ಅನುಸಾರವಾಗಿ ರಾಜ್ಯ ಸರ್ಕಾರದ ಇಲಾಖೆಗಳು ಕೈಗೊಂಡ ವಿಪತ್ತು ತಡೆಗಟ್ಟುವ, ಉಪಶಮನ ಮಾಡುವ, ಸಾಮರ್ಥ್ಯ ಸಂವರ್ಧನೆ ಮತ್ತು ಸನ್ನದ್ಧತೆಯ ಕ್ರಮಗಳಿಗಾಗಿ ನಿಧಿಗಳನ್ನು ಹಂಚಿಕೆ ಮಾಡುವುದನ್ನು;

(ಇ) ರಾಜ್ಯ ಸರ್ಕಾರದ ಇಲಾಖೆಗಳು, ತಮ್ಮ ಅಭಿವೃದ್ಧಿ ಯೋಜನೆಗಳಲ್ಲಿ ಮತ್ತು ಪರಿಯೋಜನೆಗಳಲ್ಲಿ ವಿಪತ್ತು ತಡೆಗಟ್ಟುವಿಕೆ ಅಥವಾ ಉಪಶಮನಕ್ಕಾಗಿನ ಕ್ರಮಗಳನ್ನು ಸಂಯೋಜಿಸುವುದನ್ನು ಖಚಿತಪಡಿಸಿಕೊಳ್ಳುವುದನ್ನು;

(ಎಫ್) ರಾಜ್ಯ ಅಭಿವೃದ್ಧಿ ಯೋಜನೆಯಲ್ಲಿ, ವಿವಿಧ ವಿಪತ್ತುಗಳಿಗೆ ರಾಜ್ಯದ ವಿವಿಧ ಭಾಗಗಳು ಒಳಗಾಗುವ ಸಂಭಾವ್ಯತೆಯನ್ನು ಕಡಿಮೆ ಮಾಡಲು ಅಥವಾ ಉಪಶಮನ ಮಾಡಲು ಕ್ರಮಗಳ ಸಂಯೋಜನೆಯನ್ನು ಖಚಿತಪಡಿಸಿಕೊಳ್ಳುವುದನ್ನು;

(ಜಿ) ರಾಷ್ಟ್ರೀಯ ಪ್ರಾಧಿಕಾರವು ಮತ್ತು ರಾಜ್ಯ ಪ್ರಾಧಿಕಾರವು, ರೂಪಿಸಿರುವ ಮಾರ್ಗ ಸೂಚಿಗಳಿಗೆ ಅನುಸಾರವಾಗಿ, ರಾಜ್ಯದ ವಿವಿಧ ಇಲಾಖೆಗಳ ವಿಪತ್ತು ನಿರ್ವಹಣಾ ಯೋಜನೆಗಳ ಸಿದ್ಧತೆಯನ್ನು ಖಚಿತಪಡಿಸುವುದನ್ನು;

(ಹೆಚ್) ವಿಪತ್ತಿಗೆ ಒಳಗಾಗುವ ಸಮುದಾಯಗಳ ಹಂತದವರೆಗೆ ಸಾಕಷ್ಟು ಎಚ್ಚರಿಕೆಯ ವ್ಯವಸ್ಥೆಗಳನ್ನು ಏರ್ಪಡಿಸುವುದನ್ನು;

(ಐ) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಜಿಲ್ಲಾ ಪ್ರಾಧಿಕಾರಗಳ ಸೂಕ್ತ ಸನ್ನದ್ಧತೆ ಕ್ರಮಗಳನ್ನು ಕೈಗೊಳ್ಳುತ್ತವೆಯೇ ಎಂಬುದನ್ನು ಖಚಿತಪಡಿಸುವುದನ್ನು;

(ಜೆ) ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದಲ್ಲಿ ಅಥವಾ ವಿಪತ್ತಿನಲ್ಲಿ, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸಂಪನ್ಮೂಲಗಳು, ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದಲ್ಲಿ ಅಥವಾ ವಿಪತ್ತಿನಲ್ಲಿ ಪರಿಣಾಮಕಾರಿಯಾಗಿ ಪ್ರತಿಸ್ಪಂದಿಸುವ, ರಕ್ಷಣೆ ನೀಡುವ ಮತ್ತು ಪರಿಹಾರ ನೀಡುವ ಉದ್ದೇಶಕ್ಕಾಗಿ, ಸಂದರ್ಭಾನುಸಾರ, ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಗೆ ಅಥವಾ ರಾಜ್ಯ ಕಾರ್ಯನಿರ್ವಾಹಕ ಸಮಿತಿಗೆ ಅಥವಾ ಜಿಲ್ಲಾ ಪ್ರಾಧಿಕಾರಗಳಿಗೆ ಲಭ್ಯವಾಗುವಂತೆ ಮಾಡಲಾಗಿದೆ ಎಂಬುದನ್ನು ಖಚಿತಪಡಿಸುವುದನ್ನು;

(ಕೆ) ಯಾವುದೇ ವಿಪತ್ತಿನ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸುವುದು ಮತ್ತು ಪುನರ್ ನಿರ್ಮಾಣ ಕಾರ್ಯಕ್ಕೆ ನೆರವನ್ನು ನೀಡುವುದನ್ನು; ಮತ್ತು

(ಎಲ್) ಈ ಅಧಿನಿಯಮದ ಉಪಬಂಧಗಳ ಪರಿಣಾಮಕಾರಿಯಾಗಿ ಅನುಷ್ಠಾನವನ್ನು ಸುನಿಶ್ಚಿತಗೊಳಿಸುವ ಉದ್ದೇಶಕ್ಕಾಗಿ, ಅದು ಅವಶ್ಯಕ ಅಥವಾ ವಿಹಿತವೆಂದು ಭಾವಿಸಬಹುದಾದಂಥ ಇತರ ವಿಷಯಗಳನ್ನು

– ಒಳಗೊಳ್ಳುತ್ತವೆ.

**39. ರಾಜ್ಯ ಸರ್ಕಾರದ ಇಲಾಖೆಗಳ ಜವಾಬ್ದಾರಿಗಳು.–** ಈ ಮುಂದಿನವುಗಳು, ಎಂದರೆ:–

(ಎ) ರಾಷ್ಟ್ರೀಯ ಪ್ರಾಧಿಕಾರವು ಮತ್ತು ರಾಜ್ಯ ಪ್ರಾಧಿಕಾರವು, ರೂಪಿಸಿರುವ ಮಾರ್ಗಸೂಚಿಗಳನುಸಾರವಾಗಿ, ವಿಪತ್ತುಗಳ ತಡೆಗಟ್ಟುವುದಕ್ಕಾಗಿ, ಉಪಶಮನಕ್ಕಾಗಿ, ಸನ್ನದ್ಧತೆಗಾಗಿ ಮತ್ತು ಸಾಮರ್ಥ್ಯ ವರ್ಧನೆಗಾಗಿ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವುದು;

(ಬಿ) ತನ್ನ ಅಭಿವೃದ್ಧಿ ಯೋಜನೆಗಳಲ್ಲಿ ಮತ್ತು ಪರಿಯೋಜನೆಗಳಲ್ಲಿ, ವಿಪತ್ತನ್ನು ತಡೆಗಟ್ಟುವುದಕ್ಕಾಗಿ ಮತ್ತು ಉಪಶಮನಕ್ಕಾಗಿ ಸಂಬಂಧಿಸಿದ ಕ್ರಮಗಳನ್ನು ಸಂಯೋಜಿಸುವುದು;

(ಸಿ) ವಿಪತ್ತು ತಡೆಗಟ್ಟುವುದಕ್ಕಾಗಿ, ಉಪಶಮನಕ್ಕಾಗಿ, ಸಾಮರ್ಥ್ಯ ಸಂವರ್ಧನೆಗಾಗಿ ಮತ್ತು ಸನ್ನದ್ಧತೆಗಾಗಿ ನಿಧಿಗಳ ಹಂಚಿಕೆ ಮಾಡುವುದು;

(ಡಿ) ರಾಜ್ಯ ಯೋಜನೆಯನುಸಾರ ಹಾಗೂ ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯ ಮತ್ತು ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಮಾರ್ಗಸೂಚಿಗಳು ಅಥವಾ ನಿರ್ದೇಶನಗಳ ಅನುಸಾರ ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಅಥವಾ ವಿಪತ್ತಿಗೆ ಪರಿಣಾಮಕಾರಿಯಾಗಿ ಮತ್ತು ತ್ವರಿತವಾಗಿ ಪ್ರತಿಸ್ಪಂದಿಸುವುದು;

(ಇ) ತಾನು ಜಾರಿಗೊಳಿಸುವ ಅಧಿನಿಯಮಿತಿಗಳಲ್ಲಿ, ಅದರ ನೀತಿಗಳಲ್ಲಿ, ನಿಯಮಗಳಲ್ಲಿ ಮತ್ತು ವಿನಿಯಮನಗಳಲ್ಲಿ ವಿಪತ್ತನ್ನು ತಡೆಗಟ್ಟುವುದಕ್ಕಾಗಿ, ಉಪಶಮನಕ್ಕಾಗಿ ಅಥವಾ ಸನ್ನದ್ಧತೆಗಾಗಿ ಅಗತ್ಯವಾದ ಉಪಬಂಧಗಳನ್ನು ಸೇರಿಸುವ ದೃಷ್ಟಿಯಿಂದ ಅವುಗಳನ್ನು ಪರಿಶೀಲಿಸುವುದು;

(ಎಫ್) ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯು, ರಾಜ್ಯ ಕಾರ್ಯನಿರ್ವಾಹಕ ಸಮಿತಿಯು ಮತ್ತು ಜಿಲ್ಲಾ ಪ್ರಾಧಿಕಾರಗಳು ಅಗತ್ಯಪಡಿಸುವ,–

(i) ವಿಪತ್ತು ನಿರ್ವಹಣೆಗೆ ಸಂಬಂಧಿಸಿದಂತೆ, ಉಪಶಮನಕ್ಕಾಗಿ, ಸನ್ನದ್ಧತೆಗಾಗಿ ಮತ್ತು ಪ್ರತಿಸ್ಪಂದನೆಗಾಗಿ ಯೋಜನೆಗಳನ್ನು ಸಿದ್ಧಪಡಿಸುವುದು, ಸಾಮರ್ಥ್ಯ–ಸಂವರ್ಧನೆ, ದತ್ತಾಂಶ ಸಂಗ್ರಹಣೆ ಮತ್ತು ಗುರುತಿಸುವಿಕೆ ಮತ್ತು ಸಿಬ್ಬಂದಿಗಳ ತರಬೇತಿಯನ್ನು ಕ್ರಮಬದ್ಧಗೊಳಿಸುವುದು;

(ii) ಯಾವುದೇ ವಿಪತ್ತಿನಿಂದಾದ ಹಾನಿಯನ್ನು ನಿರ್ಧರಿಸುವುದು;

(iii) ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವುದಕ್ಕಾಗಿ

– ನೆರವು ನೀಡುವುದು;

(ಜಿ) ಅದರ ಪ್ರಾಧಿಕಾರಗಳ ಮೂಲಕ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಯೋಜನೆಯ ಅನುಷ್ಠಾನಕ್ಕಾಗಿ, ರಾಜ್ಯ ಪ್ರಾಧಿಕಾರದೊಡನೆ ಸಮಾಲೋಚಿಸಿ ಸಂಪನ್ಮೂಲಗಳಿಗಾಗಿ ಏರ್ಪಾಡು ಮಾಡುವುದು;

(ಹೆಚ್) ಅದರ ಸಂಪನ್ಮೂಲಗಳು,–

(i) ವಿಪತ್ತಿಗೆ ಒಳಗಾಗುವ ಅಥವಾ ಬಾಧಿತ ಪ್ರದೇಶದೊಂದಿಗೆ ತುರ್ತು ಸಂವಹನ–ಸಂಪರ್ಕ ಕಲ್ಪಿಸುವುದಕ್ಕೆ;

(ii) ಬಾಧಿತ ಪ್ರದೇಶದೊಳಗೆ ಮತ್ತು ಬಾಧಿತ ಪ್ರದೇಶದಿಂದ, ಸಿಬ್ಬಂದಿ ಹಾಗೂ ಪರಿಹಾರ ಸರಕುಗಳನ್ನು ಸಾಗಿಸುವುದಕ್ಕೆ;

(iii) ಸ್ಥಳಾಂತರಿಸುವುದು, ರಕ್ಷಣೆ, ತಾತ್ಕಾಲಿಕ ಆಶ್ರಯ ಅಥವಾ ಇತರ ತುರ್ತು ಪರಿಹಾರ ಒದಗಿಸುವುದಕ್ಕೆ;

(iv) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದ ಅಥವಾ ವಿಪತ್ತಿನ ಪ್ರದೇಶದಿಂದ ವ್ಯಕ್ತಿಗಳನ್ನು ಅಥವಾ ಜಾನುವಾರುಗಳನ್ನು ಸ್ಥಳಾಂತರಿಸುವುದಕ್ಕೆ;

(v) ತಾತ್ಕಾಲಿಕ ಸೇತುವೆಗಳನ್ನು, ಒಡ್ಡುಗಳನ್ನು ಮತ್ತು ಇಳಿದಾಣಗಳನ್ನು ಸ್ಥಾಪಿಸುವುದಕ್ಕೆ;

(vi) ಬಾಧಿತ ಪ್ರದೇಶದಲ್ಲಿ ಕುಡಿಯುವ ನೀರು, ಅತ್ಯಾವಶ್ಯಕ ವ್ಯವಸ್ಥೆಗಳು, ಆರೋಗ್ಯ ರಕ್ಷಣೆ ಮತ್ತು ಸೇವೆಗಳನ್ನು ಒದಗಿಸುವುದಕ್ಕೆ

– ಸಂಬಂಧಿಸಿದ ಕ್ರಮಗಳೂ ಒಳಗೊಂಡಂತೆ, ರಾಜ್ಯದಲ್ಲಿ ಯಾವುದೇ ವಿಪತ್ತಿಗೆ ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಪ್ರತಿಸ್ಪಂದಿಸುವ ಉದ್ದೇಶಗಳಿಗಾಗಿ, ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಗೆ ಅಥವಾ ರಾಜ್ಯ ಕಾರ್ಯನಿರ್ವಾಹಕ ಸಮಿತಿಗೆ ಅಥವಾ ಜಿಲ್ಲಾ ಪ್ರಾಧಿಕಾರಗಳಿಗೆ ಲಭ್ಯವಾಗುವಂತೆ ಮಾಡುವುದು;

(ಐ) ವಿಪತ್ತು ನಿರ್ವಹಣೆಗೆ ಅಗತ್ಯವಾಗಬಹುದಾದಂಥ ಇತರ ಕ್ರಮಗಳನ್ನು ಕೈಗೊಳ್ಳುವುದು

– ರಾಜ್ಯ ಸರ್ಕಾರದ ಪ್ರತಿಯೊಂದು ಇಲಾಖೆಯ ಜವಾಬ್ದಾರಿಯಾಗಿರತಕ್ಕದ್ದು.

**40. ರಾಜ್ಯದ ಇಲಾಖೆಗಳ ವಿಪತ್ತು ನಿರ್ವಹಣಾ ಯೋಜನೆ.–** ರಾಜ್ಯ ಪ್ರಾಧಿಕಾರವು, ರೂಪಿಸಿರುವ ಮಾರ್ಗಸೂಚಿಗಳಿಗೆ ಸುಸಂಗತವಾಗಿ, ರಾಜ್ಯ ಸರ್ಕಾರದ ಪ್ರತಿಯೊಂದು ಇಲಾಖೆಯು,–

(ಎ) ಈ ಕೆಳಕಂಡವುಗಳನ್ನು ಎಂದರೆ:–

(i) ರಾಜ್ಯದ ಯಾವ ವಿವಿಧ ಭಾಗಗಳು ವಿಪತ್ತುಗಳಿಗೆ ಒಳಗಾಗುವುವೋ ಅಂಥ ಭಾಗಗಳನ್ನು;

(ii) ಇಲಾಖೆಯ ಅಭಿವೃದ್ಧಿ ಯೋಜನೆಗಳು ಮತ್ತು ಕಾರ್ಯಕ್ರಮಗಳೊಂದಿಗೆ ವಿಪತ್ತನ್ನು ತಡೆಗಟ್ಟುವುದಕ್ಕಾಗಿ ಅಥವಾ ಅದರ ಪರಿಣಾಮಗಳ ಉಪಶಮನಕ್ಕಾಗಿ ಅಥವಾ ಅವೆರಡಕ್ಕೂ ಸಂಬಂಧಿಸಿದ ಕಾರ್ಯತಂತ್ರಗಳನ್ನು ಒಟ್ಟುಗೂಡಿಸುವುದನ್ನು;

(iii) ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದಲ್ಲಿ ಅಥವಾ ವಿಪತ್ತಿನಲ್ಲಿ ಮತ್ತು ತುರ್ತು ನೆರವು ಪ್ರಕಾರ್ಯ ಸಂದರ್ಭದಲ್ಲಿ, ರಾಜ್ಯದ ಇಲಾಖೆಯು ನಿರ್ವಹಿಸಬೇಕಾದ ಅದರ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು;

(iv) ಉಪಖಂಡ (iii)ರ ಮೇರೆಗೆ, ಅಂಥ ಪಾತ್ರಗಳನ್ನು ಅಥವಾ ಜವಾಬ್ದಾರಿಗಳನ್ನು ಅಥವಾ ತುರ್ತು ನೆರವು ಪ್ರಕಾರ್ಯವನ್ನು, ನಿರ್ವಹಿಸುವ ಅದರ ಸನ್ನದ್ಧತೆಯ ಪ್ರಸಕ್ತ ಸ್ಥಿತಿಗತಿಯನ್ನು;

(v) 37ನೇ ಪ್ರಕರಣದ ಮೇರೆಗೆ, ಭಾರತ ಸರ್ಕಾರದ ಮಂತ್ರಾಲಯಗಳು ಅಥವಾ ಇಲಾಖೆಗಳು, ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲು ಅನುಕೂಲ ಮಾಡಿಕೊಡುವ ಸಲುವಾಗಿ, ಸಾಮರ್ಥ್ಯ–ಸಂವರ್ಧನೆ ಮತ್ತು ಸನ್ನದ್ಧತೆಯ ಕ್ರಮಗಳನ್ನು ಜಾರಿಗೆ ತರಲು ಪ್ರಸ್ತಾಪಿಸುವುದನ್ನು

– ನಿರೂಪಿಸಿ ವಿಪತ್ತು ನಿರ್ವಹಣಾ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು;

(ಬಿ) ಖಂಡ (ಎ)ಯಲ್ಲಿ ಉಲ್ಲೇಖಿಸಲಾದ ಯೋಜನೆಯನ್ನು ವಾರ್ಷಿಕವಾಗಿ ಪರಿಶೀಲಿಸತಕ್ಕದ್ದು ಮತ್ತು ಇಂದೀಕರಿಸತಕ್ಕದ್ದು; ಮತ್ತು

(ಸಿ) ಸಂದರ್ಭಾನುಸಾರ ಖಂಡ (ಎ) ಅಥವಾ ಖಂಡ (ಬಿ)ಯಲ್ಲಿ ಉಲ್ಲೇಖಿಸಲಾದ ಯೋಜನೆಯ ಒಂದು ಪ್ರತಿಯನ್ನು ರಾಜ್ಯ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(2) ರಾಜ್ಯ ಸರ್ಕಾರದ ಪ್ರತಿಯೊಂದು ಇಲಾಖೆಯು, (1)ನೇ ಉಪಪ್ರಕರಣದ ಮೇರೆಗೆ ಯೋಜನೆಯನ್ನು ಸಿದ್ಧಪಡಿಸುವಾಗ, ಅದರಲ್ಲಿ ನಿರ್ದಿಷ್ಟಪಡಿಸಲಾದ ಕಾರ್ಯಚಟುವಟಿಕೆಗಳಿಗೆ ಹಣವನ್ನು ಒದಗಿಸುವುದಕ್ಕಾಗಿ ಏರ್ಪಾಡುಗಳನ್ನು ಮಾಡತಕ್ಕದ್ದು.

(3) ರಾಜ್ಯ ಸರ್ಕಾರದ ಪ್ರತಿಯೊಂದು ಇಲಾಖೆಯು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವಿಪತ್ತು ನಿರ್ವಹಣಾ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಾಜ್ಯ ಕಾರ್ಯನಿರ್ವಾಹಕ ಸಮಿತಿಗೆ, ಅನುಷ್ಠಾನ ಸ್ಥಿತಿಗತಿಯ ವರದಿಯನ್ನು ಒದಗಿಸತಕ್ಕದ್ದು.

## ಅಧ್ಯಾಯ VI

## ಸ್ಥಳೀಯ ಪ್ರಾಧಿಕಾರಗಳು

**41. ಸ್ಥಳೀಯ ಪ್ರಾಧಿಕಾರದ ಪ್ರಕಾರ್ಯಗಳು.–** (1) ಜಿಲ್ಲಾ ಪ್ರಾಧಿಕಾರದ ನಿರ್ದೇಶನಗಳಿಗೆ ಒಳಪಟ್ಟು, ಸ್ಥಳೀಯ ಪ್ರಾಧಿಕಾರವು,–

(ಎ) ಅದರ ಅಧಿಕಾರಿಗಳು ಮತ್ತು ನೌಕರರು ವಿಪತ್ತು ನಿರ್ವಹಣೆ ಬಗ್ಗೆ ತರಬೇತಿ ಪಡೆದಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು;

(ಬಿ) ವಿಪತ್ತು ನಿರ್ವಹಣೆಗೆ ಸಂಬಂಧಿಸಿದ ಸಂಪನ್ಮೂಲಗಳನ್ನು ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದಲ್ಲಿ ಅಥವಾ ವಿಪತ್ತಿನಲ್ಲಿ ಬಳಸುವುದಕ್ಕಾಗಿ, ಕೂಡಲೇ ಲಭ್ಯವಾಗುವ ಹಾಗೆ ನಿರ್ವಹಿಸಲಾಗಿದೆ ಎಂಬುದನ್ನು ಖಚಿತಪಡಿಸತಕ್ಕದ್ದು;

(ಸಿ) ರಾಷ್ಟ್ರೀಯ ಪ್ರಾಧಿಕಾರ, ರಾಜ್ಯ ಪ್ರಾಧಿಕಾರ ಮತ್ತು ಜಿಲ್ಲಾ ಪ್ರಾಧಿಕಾರವು ವಿಪತ್ತು ತಡೆಗಟ್ಟುವುದಕ್ಕಾಗಿ ಮತ್ತು ಉಪಶಮನಕ್ಕಾಗಿ ಅದರ ಮೇರೆಗೆ ಅಥವಾ ಅದರ ಅಧಿಕಾರವ್ಯಾಪ್ತಿಯೊಳಗೆ ಎಲ್ಲಾ ನಿರ್ಮಾಣ ಪರಿಯೋಜನೆಗಳನ್ನು ರೂಪಿಸಿರುವ ಮಾನಕಗಳಿಗೆ ಮತ್ತು ನಿರ್ದಿಷ್ಟ ವಿವರಣೆಗಳಿಗೆ ಅನುಸಾರವಾಗಿ ಇವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು;

(ಡಿ) ರಾಜ್ಯ ಯೋಜನೆಯ ಮತ್ತು ಜಿಲ್ಲಾ ಯೋಜನೆಯ ಅನುಸಾರವಾಗಿ, ಬಾಧಿತ ಪ್ರದೇಶದಲ್ಲಿ ಪರಿಹಾರ, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳತಕ್ಕದ್ದು.

(2) ಸ್ಥಳೀಯ ಪ್ರಾಧಿಕಾರವು, ವಿಪತ್ತು ನಿರ್ವಹಣೆಗೆ ಅಗತ್ಯವಾಗಬಹುದಾದಂಥ ಇತರ ಕ್ರಮಗಳನ್ನು ಕೈಗೊಳ್ಳಬಹುದು.

## ಅಧ್ಯಾಯ VII

## ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆ

**42. ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರುವಂತೆ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆ ಎಂದು ಕರೆಯುವ ಒಂದು ಸಂಸ್ಥೆಯನ್ನು ರಚಿಸತಕ್ಕದ್ದು.

(2) ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯು, ಕೇಂದ್ರ ಸರ್ಕಾರವು ನಿಯಮಿಸಬಹುದಾದಷ್ಟು ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯ ಸದಸ್ಯರ ಪದಾವಧಿ ಮತ್ತು ಅವರಲ್ಲಿ ಖಾಲಿಸ್ಥಾನಗಳು ಮತ್ತು ಅಂಥ ಖಾಲಿಸ್ಥಾನಗಳನ್ನು ತುಂಬುವ ರೀತಿಯು ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಕೇಂದ್ರ ಸರ್ಕಾರವು, ನಿಯಮಿಸಬಹುದಾದಂಥ ರೀತಿಯಲ್ಲಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯ ಸದಸ್ಯರ ಪೈಕಿಯಿಂದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯ ಆಡಳಿತ ಮಂಡಳಿಯನ್ನು ರಚಿಸತಕ್ಕದ್ದು.

(5) ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯ ಆಡಳಿತ ಮಂಡಳಿಯು, ವಿನಿಯಮನಗಳ ಮೂಲಕ ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(6) ಆಡಳಿತ ಮಂಡಳಿಯು ಅದರ ಅಧಿಕಾರಗಳನ್ನು ಚಲಾಯಿಸುವಾಗ ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅನುಸರಿಸಬೇಕಾದ ಕಾರ್ಯವಿಧಾನವು ಮತ್ತು ಆಡಳಿತ ಮಂಡಳಿಯ ಸದಸ್ಯರ ಪದಾವಧಿ ಮತ್ತು ಆಡಳಿತ ಮಂಡಳಿಯ ಸದಸ್ಯರ ಪೈಕಿಯಿಂದ ಖಾಲಿ ಸ್ಥಾನಗಳನ್ನು ತುಂಬುವ ವಿಧಾನವು, ವಿನಿಯಮನಗಳ ಮೂಲಕ ನಿಯಮಿಸಬಹುದಾದಂಥದ್ದು ಆಗಿರತಕ್ಕದ್ದು.

(7) ಈ ಪ್ರಕರಣದ ಮೇರೆಗೆ, ವಿನಿಯಮನಗಳನ್ನು ರಚಿಸುವವರೆಗೂ, ಕೇಂದ್ರ ಸರ್ಕಾರವು ಅಂಥ ವಿನಿಯಮನಗಳನ್ನು ರಚಿಸಬಹುದು; ಮತ್ತು ಹಾಗೆ ರಚಿಸಿದ್ದ ಯಾವುದೇ ವಿನಿಯಮನವನ್ನು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯು ತನ್ನ ಅಧಿಕಾರಗಳನ್ನು ಚಲಾಯಿಸಿ ಬದಲಾಯಿಸಬಹುದು ಅಥವಾ ರದ್ದುಗೊಳಿಸಬಹುದು.

(8) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯು, ರಾಷ್ಟ್ರೀಯ ಪ್ರಾಧಿಕಾರವು ರೂಪಿಸಿರುವ ಸ್ಥೂಲ ಕಾರ್ಯನೀತಿಗಳು ಹಾಗೂ ಮಾರ್ಗಸೂಚಿ ವ್ಯಾಪ್ತಿಯೊಳಗೆ ಕಾರ್ಯನಿರ್ವಹಿಸತಕ್ಕದ್ದು ಮತ್ತು ವಿಪತ್ತು ನಿರ್ವಹಣಾ ದಸ್ತಾವೇಜು ಸಿದ್ಧಪಡಿಸುವುದು ಹಾಗೂ ವಿಪತ್ತು ನಿರ್ವಹಣಾ ಕಾರ್ಯನೀತಿಗಳು, ತಡೆಗಟ್ಟುವಿಕೆಯ ಕಾರ್ಯವ್ಯವಸ್ಥೆಗಳು ಮತ್ತು ಉಪಶಮನ ಕ್ರಮಗಳಿಗೆ ಸಂಬಂಧಿಸಿದ ರಾಷ್ಟ್ರೀಯ ಮಟ್ಟದ ಮಾಹಿತಿ ಮೂಲವನ್ನು ಅಭಿವೃದ್ಧಿ ಕ್ಷೇತ್ರದಲ್ಲಿ ತರಬೇತಿಯನ್ನು ಯೋಜಿಸುವುದು ಮತ್ತು ಸಂಶೋಧನೆಯನ್ನು ಉತ್ತೇಜಿಸುವುದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯ ಜವಾಬ್ದಾರಿಯಾಗಿರತಕ್ಕದ್ದು.

(9) ಉಪಪ್ರಕರಣ (8)ರಲ್ಲಿ ಒಳಗೊಂಡಿರುವ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ರಾಷ್ಟ್ರೀಯ ಸಂಸ್ಥೆಯು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ,–

(ಎ) ತರಬೇತಿ ಮಾಡ್ಯುಲ್‌ಗಳನ್ನು ಅಭಿವೃದ್ಧಿಪಡಿಸಬಹುದು, ವಿಪತ್ತು ನಿರ್ವಹಣೆಯಲ್ಲಿ ಸಂಶೋಧನೆ ನಡೆಸಬಹುದು ಮತ್ತು ದಸ್ತಾವೇಜುಗಳನ್ನು ಸಿದ್ಧಪಡಿಸಬಹುದು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬಹುದು;

(ಬಿ) ವಿಪತ್ತು ನಿರ್ವಹಣೆಯ ಎಲ್ಲಾ ವಿಷಯಗಳನ್ನು ಒಳಗೊಳ್ಳುವ, ಸಮಗ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಯೋಜನೆಯನ್ನು ರಚಿಸಬಹುದು ಮತ್ತು ಅನುಷ್ಠಾನಗೊಳಿಸಬಹುದು;

(ಸಿ) ರಾಷ್ಟ್ರೀಯ ಮಟ್ಟದ ಕಾರ್ಯನೀತಿ ರಚನೆಯಲ್ಲಿ ನೆರವು ನೀಡಬಹುದು;

(ಡಿ) ಸರ್ಕಾರಿ ಕಾರ್ಯಪ್ರವರ್ತಕರನ್ನು ಒಳಗೊಂಡಂತೆ, ಹಿತಾಸಕ್ತಿದಾರರಿಗಾಗಿ ತರಬೇತಿ ಮತ್ತು ಸಂಶೋಧನಾ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮತ್ತು ರಾಜ್ಯ ಮಟ್ಟದ ತರಬೇತಿ ಸಂಸ್ಥೆಗಳ ಫ್ಯಾಕಲ್ಟಿ ಸದಸ್ಯರ ತರಬೇತಿ ವ್ಯವಸ್ಥೆ ಮಾಡುವುದಕ್ಕಾಗಿ, ತರಬೇತಿ ಮತ್ತು ಸಂಶೋಧನಾ ಸಂಸ್ಥೆಗಳಿಗೆ ಅಗತ್ಯ ನೆರವು ನೀಡಬಹುದು;

(ಇ) ರಾಜ್ಯಮಟ್ಟದ ಕಾರ್ಯನೀತಿಗಳು, ಕಾರ್ಯತಂತ್ರಗಳು, ವಿಪತ್ತು ನಿರ್ವಹಣಾ ಕೌರ್ಯಚೌಕಟ್ಟಿನ ರಚನೆಯಲ್ಲಿ, ರಾಜ್ಯ ಸರ್ಕಾರಗಳಿಗೆ ಮತ್ತು ರಾಜ್ಯ ತರಬೇತಿ ಸಂಸ್ಥೆಗಳಿಗೆ ನೆರವನ್ನು ಹಾಗೂ ಹಿತಾಸಕ್ತಿದಾರರು, ಸರ್ಕಾರದ ಕಾರ್ಯಪ್ರವರ್ತಕರೂ ಒಳಗೊಂಡಂತೆ, ನಾಗರಿಕ ಸಮಾಜದ ಸದಸ್ಯರು, ಕಾರ್ಪೋರೇಟ್ ವಲಯದಿಂದ ಮತ್ತು ಜನರಿಂದ ಚುನಾಯಿತರಾದ ಪ್ರತಿನಿಧಿಗಳ ಸಾಮರ್ಥ್ಯ ಸಂವರ್ಧನೆಗಾಗಿ, ರಾಜ್ಯ ಸರ್ಕಾರಗಳು ಅಥವಾ ರಾಜ್ಯ ತರಬೇತಿ ಸಂಸ್ಥೆಗಳು ಅಗತ್ಯಪಡಿಸಬಹುದಾದಂಥ ಇತರ ಯಾವುದೇ ನೆರವನ್ನು ನೀಡಬಹುದು;

(ಎಫ್) ಶೈಕ್ಷಣಿಕ ಹಾಗೂ ವೃತ್ತಿಪರ ಶಿಕ್ಷಣ ಕ್ರಮಗಳೂ ಒಳಗೊಂಡಂತೆ ವಿಪತ್ತು ನಿರ್ವಹಣೆಗೆ ಸಂಬಂಧಿಸಿದ ಶಿಕ್ಷಣ ಸಾಮಗ್ರಿಗಳನ್ನು ಅಭಿವೃದ್ಧಿಗೊಳಿಸಬಹುದು;

(ಜಿ) ಬಹು–ಅಪಾಯ ಉಪಶಮನ, ಸನ್ನದ್ಧತೆ ಮತ್ತು ಪ್ರತಿಸ್ಪಂದನಾ ಕ್ರಮಗಳಿಗೆ ಸಂಬಂಧಿಸಿದಂತೆ ಕಾಲೇಜು ಅಥವಾ ಶಾಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು, ತಾಂತ್ರಿಕ ಸಿಬ್ಬಂದಿ ಮತ್ತು ಇತರರೂ ಒಳಗೊಂಡಂತೆ, ಹಿತಾಸಕ್ತಿದಾರರಲ್ಲಿ ಅರಿವನ್ನು ಉತ್ತೇಜಿಸುವುದು;

(ಹೆಚ್) ಮೇಲೆ ಹೇಳಿದ ಉದ್ದೇಶಗಳನ್ನು ಉತ್ತೇಜಿಸಲು, ದೇಶದ ಒಳಗೆ ಮತ್ತು ಹೊರಗೆ ಅಧ್ಯಯನ ಕೋರ್ಸುಗಳನ್ನು, ಸಮ್ಮೇಳನಗಳನ್ನು, ಉಪನ್ಯಾಸಗಳನ್ನು, ವಿಚಾರ ಸಂಕಿರಣಗಳನ್ನು ನಡೆಸಬಹುದು, ಆಯೋಜಿಸಬಹುದು;

(ಐ) ಮೇಲೆ ಹೇಳಿದ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ಪತ್ರಿಕೆಗಳು, ಸಂಶೋಧನಾ ಲೇಖನಗಳು ಮತ್ತು ಪುಸ್ತಕಗಳನ್ನು ಪ್ರಕಟಿಸುವುದಕ್ಕೆ ಹಾಗೂ ಗ್ರಂಥಾಲಯಗಳನ್ನು ಸ್ಥಾಪಿಸುವುದಕ್ಕೆ ಮತ್ತು ನಿರ್ವಹಿಸುವುದಕ್ಕೆ ಕ್ರಮ ಕೈಗೊಳ್ಳಬಹುದು ಹಾಗೂ ಅದಕ್ಕೆ ಅವಕಾಶವನ್ನು ಕಲ್ಪಿಸಬಹುದು;

(ಜೆ) ಮೇಲ್ಕಂಡ ಉದ್ದೇಶಗಳನ್ನು ಸಾಧಿಸುವುದಕ್ಕೆ, ಪೂರಕವಾದ ಅಥವಾ ಪ್ರಾಸಂಗಿಕವಾದಂಥ ಇತರ ಎಲ್ಲಾ ಕಾನೂನುಬದ್ಧ ಕಾರ್ಯಗಳನ್ನು ಮಾಡಬಹುದು; ಮತ್ತು

(ಕೆ) ಕೇಂದ್ರ ಸರ್ಕಾರವು ಅದಕ್ಕೆ ಗೊತ್ತುಪಡಿಸಬಹುದಾದಂಥ ಇತರ ಯಾವುದೇ ಪ್ರಕಾರ್ಯವನ್ನು ಕೈಗೊಳ್ಳಬಹುದು.

**43. ರಾಷ್ಟ್ರೀಯ ಸಂಸ್ಥೆಯ ಅಧಿಕಾರಿಗಳು ಮತ್ತು ಇತರ ನೌಕರರು.–** ಕೇಂದ್ರ ಸರ್ಕಾರವು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಗೆ, ಅದರ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ, ಅದು ಅಗತ್ಯವೆಂದು ಪರಿಗಣಿಸಬಹುದಾದಷ್ಟು ಅಧಿಕಾರಿಗಳನ್ನು, ಸಮಾಲೋಚಕರನ್ನು ಮತ್ತು ಇತರ ನೌಕರರನ್ನು ಒದಗಿಸತಕ್ಕದ್ದು.

## ಅಧ್ಯಾಯ VIII

## ರಾಷ್ಟ್ರೀಯ ವಿಪತ್ತು ಪ್ರತಿಸ್ಪಂದನ ಪಡೆ

**44. ರಾಷ್ಟ್ರೀಯ ವಿಪತ್ತು ಪ್ರತಿಸ್ಪಂದನ ಪಡೆ.–** (1) ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಅಥವಾ ವಿಪತ್ತಿಗೆ ವಿಶೇಷ ರೀತಿಯಲ್ಲಿ ಪ್ರತಿಸ್ಪಂದನೆಯ ಉದ್ದೇಶಕ್ಕಾಗಿ, ಒಂದು ರಾಷ್ಟ್ರೀಯ ವಿಪತ್ತು ಪ್ರತಿಸ್ಪಂದನ ಪಡೆಯನ್ನು ರಚಿಸತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಈ ಪಡೆಯನ್ನು ರಚಿಸಬಹುದಾದ ರೀತಿಯು ಮತ್ತು ಆ ಪಡೆಯ ಶಿಸ್ತಿಗೆ ಸಂಬಂಧಿಸಿದ ಉಪಬಂಧಗಳನ್ನು ಒಳಗೊಂಡಂತೆ ಪಡೆಯ ಸದಸ್ಯರ ಸೇವಾ ಷರತ್ತುಗಳು ನಿಯಮಿಸಬಹುದಾದಂಥವುಗಳು ಆಗಿರತಕ್ಕದ್ದು.

**45. ನಿಯಂತ್ರಣ, ನಿರ್ದೇಶನ, ಇತ್ಯಾದಿ.–** ಪಡೆಯ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ರಾಷ್ಟ್ರೀಯ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅದು, ಅವುಗಳನ್ನು ಚಲಾಯಿಸತಕ್ಕದ್ದು ಮತ್ತು ಪಡೆಯ ಕಮಾಂಡ್ ಮತ್ತು ಅಧೀಕ್ಷಣೆಯು, ಕೇಂದ್ರ ಸರ್ಕಾರವು ನೇಮಕ ಮಾಡುವ ಅಧಿಕಾರಿಯಾದ ರಾಷ್ಟ್ರೀಯ ವಿಪತ್ತು ಪ್ರತಿಸ್ಪಂದನ ಪಡೆಯ ಮಹಾನಿರ್ದೇಶಕರಲ್ಲಿ ನಿಹಿತವಾಗತಕ್ಕದ್ದು.

## ಅಧ್ಯಾಯ IX

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**46. ರಾಷ್ಟ್ರೀಯ ವಿಪತ್ತು ಪ್ರತಿಸ್ಪಂದನ ನಿಧಿ.–** (1) ಕೇಂದ್ರ ಸರ್ಕಾರವು, ಅಧಿಕೃತ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶವನ್ನು ಅಥವಾ ವಿಪತ್ತನ್ನು ಎದುರಿಸುವುದಕ್ಕಾಗಿ, ರಾಷ್ಟ್ರೀಯ ವಿಪತ್ತು ಪ್ರತಿಸ್ಪಂದನ ನಿಧಿ ಎಂದು ಕರೆಯಲಾಗುವ ನಿಧಿಯನ್ನು ಸ್ಥಾಪಿಸಬಹುದು ಮತ್ತು,–

(ಎ) ಕೇಂದ್ರ ಸರ್ಕಾರವು, ಯಾವ ಮೊಬಲಗನ್ನು, ಈ ಬಗ್ಗೆ ಕಾನೂನಿನ ಮೂಲಕ ಸಂಸತ್ತಿನಿಂದ ಉಪಬಂಧಿಸಿದಂತೆ ಸೂಕ್ತವಾಗಿ ಧನವಿನಿಯೋಗ ಮಾಡಲಾಗಿರುತ್ತದೆಯೋ ಆ ತರುವಾಯದ ಮೊಬಲಗನ್ನು;

(ಬಿ) ವಿಪತ್ತು ನಿರ್ವಹಣೆಯ ಉದ್ದೇಶಕ್ಕಾಗಿ, ಯಾರೇ ವ್ಯಕ್ತಿಯು ಅಥವಾ ಸಂಸ್ಥೆಗಳು ನೀಡಬಹುದಾದಂಥ ಯಾವುವೇ ಅನುದಾನಗಳನ್ನು

– ಅದಕ್ಕೆ ಜಮೆ ಮಾಡತಕ್ಕದ್ದು.

(2) ಕೇಂದ್ರ ಸರ್ಕಾರವು, ರಾಷ್ಟ್ರೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ರೂಪಿಸಿದ ಮಾರ್ಗಸೂಚಿಗಳ ಅನುಸಾರವಾಗಿ, ತುರ್ತು ಪರಿಸ್ಥಿತಿ ಪ್ರತಿಸ್ಪಂದನ, ಪರಿಹಾರ ಮತ್ತು ಪುನರ್ವಸತಿಗಾಗಿನ ವೆಚ್ಚಗಳನ್ನು ಭರಿಸುವುದಕ್ಕಾಗಿ ಬಳಸಿಕೊಳ್ಳಲು, ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಗೆ, ರಾಷ್ಟ್ರೀಯ ವಿಪತ್ತು ಪ್ರತಿಸ್ಪಂದನ ನಿಧಿಯು ಲಭ್ಯವಾಗುವಂತೆ ಮಾಡತಕ್ಕದ್ದು.

**47. ರಾಷ್ಟ್ರೀಯ ವಿಪತ್ತನ್ನು ಉಪಶಮನ ಮಾಡುವ ನಿಧಿ.–** (1) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ, ಅಧಿಸೂಚನೆಯ ಮೂಲಕ ರಾಷ್ಟ್ರೀಯ ವಿಪತ್ತು ಉಪಶಮನ ಮಾಡುವ ಉದ್ದೇಶಕ್ಕಾಗಿ ಪ್ರತ್ಯೇಕ ಪರಿಯೋಜನೆಗಳಿಗಾಗಿ ರಾಷ್ಟ್ರೀಯ ವಿಪತ್ತು ಉಪಶಮನ ನಿಧಿ ಎಂದು ಕರೆಯಲಾಗುವ ನಿಧಿಯನ್ನು ರಚಿಸಬಹುದು ಮತ್ತು ಕೇಂದ್ರ ಸರ್ಕಾರವು, ಈ ಬಗ್ಗೆ ಕಾನೂನಿನ ಮೂಲಕ ಉಪಬಂಧಿಸಿದಂತೆ ಸಂಸತ್ತಿನಿಂದ ಯಾವ ಮೊತ್ತವನ್ನು ಸೂಕ್ತವಾಗಿ ಧನ ವಿನಿಯೋಗ ಮಾಡಲಾಗಿರುತ್ತದೆಯೋ, ಆ ತರುವಾಯ ಅಂಥ ಮೊತ್ತವನ್ನು ಅದಕ್ಕೆ ಜಮೆ ಮಾಡತಕ್ಕದ್ದು.

(2) ರಾಷ್ಟ್ರೀಯ ವಿಪತ್ತನ್ನು ಉಪಶಮನ ಮಾಡುವ ನಿಧಿಯನ್ನು, ರಾಷ್ಟ್ರೀಯ ಪ್ರಾಧಿಕಾರವು ಬಳಸತಕ್ಕದ್ದು.

**48. ರಾಜ್ಯ ಸರ್ಕಾರದಿಂದ ನಿಧಿಗಳ ಸ್ಥಾಪನೆ.–** (1) ರಾಜ್ಯ ಸರ್ಕಾರವು, ರಾಜ್ಯ ಪ್ರಾಧಿಕಾರ ಮತ್ತು ಜಿಲ್ಲಾ ಪ್ರಾಧಿಕಾರಗಳನ್ನು ರಚಿಸುವುದಕ್ಕಾಗಿ ಅಧಿಸೂಚನೆಗಳನ್ನು ಹೊರಡಿಸಿದ ತರುವಾಯ ಕೂಡಲೇ, ಈ ಅಧಿನಿಯಮದ ಉದ್ದೇಶಕ್ಕಾಗಿ, ಈ ಕೆಳಕಂಡ ನಿಧಿಗಳನ್ನು ಸ್ಥಾಪಿಸತಕ್ಕದ್ದು ಎಂದರೆ:–

(ಎ) ರಾಜ್ಯ ವಿಪತ್ತು ಪ್ರತಿಸ್ಪಂದನ ನಿಧಿ ಎಂದು ಕರೆಯಲಾಗುವ ನಿಧಿ;

(ಬಿ) ಜಿಲ್ಲಾ ವಿಪತ್ತು ಪ್ರತಿಸ್ಪಂದನ ನಿಧಿ ಎಂದು ಕರೆಯಲಾಗುವ ನಿಧಿ;

(ಸಿ) ರಾಜ್ಯ ವಿಪತ್ತು ಉಪಶಮನ ಮಾಡುವ ನಿಧಿ ಎಂದು ಕರೆಯಲಾಗುವ ನಿಧಿ;

(ಡಿ) ಜಿಲ್ಲಾ ವಿಪತ್ತು ಉಪಶಮನ ಮಾಡುವ ನಿಧಿ ಎಂದು ಕರೆಯಲಾಗುವ ನಿಧಿ.

(2) ರಾಜ್ಯ ಸರ್ಕಾರವು, ಸ್ಥಾಪಿಸಲಾಗಿರುವ ನಿಧಿಗಳು,–

(i) (1)ನೇ ಉಪಪ್ರಕರಣದ ಖಂಡ (ಎ)ಯ ಮೇರೆಗೆ ರಾಜ್ಯ ಕಾರ್ಯನಿರ್ವಾಹಕ ಸಮಿತಿಗೆ ಲಭ್ಯವಾಗಿರುತ್ತವೆಯೇ ಎಂಬುದನ್ನು;

(ii) (1)ನೇ ಉಪಪ್ರಕರಣದ ಉಪಖಂಡ (ಸಿ)ಯ ಮೇರೆಗೆ ರಾಜ್ಯ ಪ್ರಾಧಿಕಾರಕ್ಕೆ ಲಭ್ಯವಾಗಿರುತ್ತವೆಯೇ ಎಂಬುದನ್ನು;

(iii) (1)ನೇ ಉಪಪ್ರಕರಣದ ಖಂಡ (ಬಿ) ಮತ್ತು (ಡಿ)ಗಳ ಮೇರೆಗೆ ಜಿಲ್ಲಾ ಪ್ರಾಧಿಕಾರಕ್ಕೆ ಲಭ್ಯವಾಗುತ್ತವೆಯೇ ಎಂಬುದನ್ನು

– ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

**49. ಮಂತ್ರಾಲಯಗಳಿಂದ ಮತ್ತು ಇಲಾಖೆಗಳಿಂದ ನಿಧಿಗಳ ಹಂಚಿಕೆ.–** (1) ಭಾರತ ಸರ್ಕಾರದ ಪ್ರತಿಯೊಂದು ಮಂತ್ರಾಲಯವು ಅಥವಾ ಇಲಾಖೆಗಳು ತನ್ನ ವಾರ್ಷಿಕ ಆಯವ್ಯಯದಲ್ಲಿ, ತನ್ನ ವಿಪತ್ತು ನಿರ್ವಹಣಾ ಯೋಜನೆಯಲ್ಲಿ ಘೋಷಿಸಿದ ಕಾರ್ಯಚಟುವಟಿಕೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ನಿಧಿಗಳಿಗೆ ಏರ್ಪಾಡುಗಳನ್ನು ಮಾಡತಕ್ಕದ್ದು.

(2) ಉಪಪ್ರಕರಣ (1)ರ ಉಪಬಂಧಗಳು, ರಾಜ್ಯ ಸರ್ಕಾರದ ಇಲಾಖೆಗಳಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

**50. ತುರ್ತು ಪರಿಸ್ಥಿತಿಯಲ್ಲಿನ ಸಂಗ್ರಹಣೆ ಮತ್ತು ಲೆಕ್ಕ ಇಡುವುದು.–** ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದ ಅಥವಾ ವಿಪತ್ತಿನ ಕಾರಣದಿಂದಾಗಿ, ರಕ್ಷಣೆ ಅಥವಾ ಪರಿಹಾರಕ್ಕಾಗಿ ಆಹಾರ ಪದಾರ್ಥಗಳನ್ನು ಅಥವಾ ಸಾಮಗ್ರಿಗಳನ್ನು ಕೂಡಲೇ

ಸಂಗ್ರಹಿಸುವುದು ಅಥವಾ ಸಂಪನ್ಮೂಲಗಳನ್ನು ಕೂಡಲೇ ಬಳಸುವುದು ಅವಶ್ಯಕವಾಗಿದೆ ಎಂದು, ರಾಷ್ಟ್ರೀಯ ಪ್ರಾಧಿಕಾರಕ್ಕೆ ಅಥವಾ ರಾಜ್ಯ ಪ್ರಾಧಿಕಾರಕ್ಕೆ ಅಥವಾ ಜಿಲ್ಲಾ ಪ್ರಾಧಿಕಾರಕ್ಕೆ ಮನದಟ್ಟಾದ ಸಂದರ್ಭದಲ್ಲಿ,–

(ಎ) ಅದು ತುರ್ತು ಪರಿಸ್ಥಿತಿಯಲ್ಲಿ ಸಂಗ್ರಹಣೆಗಾಗಿ ಸಂಬಂಧಪಟ್ಟ ಇಲಾಖೆಗೆ ಅಥವಾ ಪ್ರಾಧಿಕಾರಕ್ಕೆ ಅಧಿಕಾರ ನೀಡಬಹುದು ಮತ್ತು ಅಂಥ ಸಂದರ್ಭದಲ್ಲಿ, ಟೆಂಡರ್‌ಗಳನ್ನು ಆಹ್ವಾನಿಸಲು ಅಗತ್ಯವಿರುವ ಗುಣಮಟ್ಟ ಪ್ರಕ್ರಿಯೆಗಳನ್ನು ಮನ್ನಾ ಮಾಡಲಾಗಿದೆ ಎಂದು ಭಾವಿಸತಕ್ಕದ್ದು;

(ಬಿ) ಸಂದರ್ಭಾನುಸಾರ ರಾಷ್ಟ್ರೀಯ ಪ್ರಾಧಿಕಾರವು, ರಾಜ್ಯ ಪ್ರಾಧಿಕಾರವು ಅಥವಾ ಜಿಲ್ಲಾ ಪ್ರಾಧಿಕಾರವು, ಅಧಿಕೃತಗೊಳಿಸಿದ ನಿಯಂತ್ರಣ ಅಧಿಕಾರಿಯು ಆಹಾರ ಪದಾರ್ಥಗಳನ್ನು ಅಥವಾ ಸಾಮಗ್ರಿಗಳ ಬಳಕೆಯ ಬಗ್ಗೆ ನೀಡಿದ ಪ್ರಮಾಣಪತ್ರವು, ತುರ್ತು ಪರಿಸ್ಥಿತಿ, ಅಂಥ ಆಹಾರ ಪದಾರ್ಥಗಳ ಅಥವಾ ಸಾಮಗ್ರಿಗಳ ಸಂಗ್ರಹಣೆಯ ಲೆಕ್ಕ ಇಡುವ ಉದ್ದೇಶಕ್ಕಾಗಿ, ಸಿಂಧುವಾದ ದಸ್ತಾವೇಜುಗಳು ಅಥವಾ ವೋಚರುಗಳಾಗಿವೆ ಎಂದು ಭಾವಿಸತಕ್ಕದ್ದು.

## ಅಧ್ಯಾಯ X

## ಅಪರಾಧಗಳು ಮತ್ತು ದಂಡಗಳು

**51. ಅಡ್ಡಿಪಡಿಸುವುದಕ್ಕಾಗಿ ಶಿಕ್ಷೆ, ಇತ್ಯಾದಿ.–** ಯಾರೇ ವ್ಯಕ್ತಿಯು,–

(ಎ) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾರೇ ಅಧಿಕಾರಿಯನ್ನು ಅಥವಾ ನೌಕರನನ್ನು ಅಥವಾ ರಾಷ್ಟ್ರೀಯ ಪ್ರಾಧಿಕಾರವು ಅಥವಾ ರಾಜ್ಯ ಪ್ರಾಧಿಕಾರವು ಅಥವಾ ಜಿಲ್ಲಾ ಪ್ರಾಧಿಕಾರವು ಅಧಿಕೃತಗೊಳಿಸಿದ ವ್ಯಕ್ತಿಯನ್ನು, ಈ ಅಧಿನಿಯಮದ ಮೇರೆಗೆ ಅವನು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಸಮಂಜಸ ಕಾರಣವಿಲ್ಲದೆ ಅಡ್ಡಿಪಡಿಸಿದರೆ; ಅಥವಾ

(ಬಿ) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯು ಅಥವಾ ರಾಜ್ಯ ಕಾರ್ಯನಿರ್ವಾಹಕ ಸಮಿತಿಯು ಅಥವಾ ಜಿಲ್ಲಾ ಪ್ರಾಧಿಕಾರವು, ನೀಡಿದ ಅಥವಾ ಅದರ ಪರವಾಗಿ ನೀಡಲಾದ ಯಾವುವೇ ನಿರ್ದೇಶನಗಳನ್ನು ಪಾಲಿಸಲು ಸಮಂಜಸವಾದ ಕಾರಣವಿಲ್ಲದೆ ನಿರಾಕರಿಸಿದರೆ

– ಅಪರಾಧ ನಿರ್ಣಯವಾದ ನಂತರ, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು ಮತ್ತು ಹಾಗೆ ಅಡ್ಡಿಪಡಿಸುವಿಕೆಯಿಂದಾಗಿ ಅಥವಾ ನಿರ್ದೇಶನಗಳನ್ನು ಪಾಲಿಸಲು ನಿರಾಕರಿಸಿದ್ದರಿಂದಾಗಿ, ಜೀವ ಹಾನಿ ಅಥವಾ ಸನ್ನಿಹಿತ ಅಪಾಯ ಉಂಟಾದರೆ ಅಪರಾಧ ನಿರ್ಣಯವಾದ ನಂತರ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದೊಂದಿಗೆ ದಂಡಿತನಾಗತಕ್ಕದ್ದು.

**52. ಸುಳ್ಳು ಕ್ಲೇಮುಗಳಿಗಾಗಿ ದಂಡನೆ.–** ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ, ರಾಷ್ಟ್ರೀಯ ಪ್ರಾಧಿಕಾರದ, ರಾಜ್ಯ ಪ್ರಾಧಿಕಾರದ ಅಥವಾ ಜಿಲ್ಲಾ ಪ್ರಾಧಿಕಾರದ ಯಾರೇ ಅಧಿಕಾರಿಯಿಂದ, ವಿಪತ್ತಿನ ಪರಿಣಾಮವಾಗಿ ದೊರಕುವ ಯಾವುದೇ ಪರಿಹಾರ, ನೆರವು, ದುರಸ್ತಿ, ಪುನರ್ ನಿರ್ಮಾಣ ಅಥವಾ ಇತರೆ ಪ್ರಯೋಜನಗಳನ್ನು ಪಡೆಯುವುದಕ್ಕಾಗಿ, ಸುಳ್ಳೆಂದು ತನಗೆ ತಿಳಿದಿರುವ ಅಥವಾ ನಂಬಲು ಕಾರಣವಿರುವ ಕ್ಲೇಮನ್ನು ಉದ್ದೇಶಪೂರ್ವಕವಾಗಿ ಸಲ್ಲಿಸಿರುವ ಯಾರೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**53. ಹಣ ಅಥವಾ ಸಾಮಗ್ರಿಗಳು, ಇತ್ಯಾದಿಗಳ ದುರುಪಯೋಗಕ್ಕಾಗಿ ದಂಡನೆ.–** ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶದಲ್ಲಿ ಅಥವಾ ವಿಪತ್ತಿನಲ್ಲಿ, ಪರಿಹಾರ ಒದಗಿಸುವ ಉದ್ದೇಶಕ್ಕಾಗಿ ಇಟ್ಟಿರುವ ಯಾವುದೇ ಹಣವನ್ನು ಅಥವಾ ಸಾಮಗ್ರಿಗಳನ್ನು ವಶಕ್ಕೆ ವಹಿಸಿಕೊಟ್ಟಿರುವ ಅಥವಾ ಅನ್ಯಥಾ ಯಾವುದೇ ಹಣ ಅಥವಾ ಸರಕುಗಳ ಅಭಿರಕ್ಷೆಯಲ್ಲಿ ಇರುವ ಅಥವಾ ಒಡೆತನ ಹೊಂದಿರುವ ಯಾರೇ ವ್ಯಕ್ತಿಯು, ಅಂಥ ಹಣವನ್ನು ಅಥವಾ ಸಾಮಗ್ರಿಗಳನ್ನು ಅಥವಾ ಅದರ ಯಾವುದೇ ಭಾಗವನ್ನು

ದುರುಪಯೋಗ ಮಾಡಿಕೊಂಡರೆ ಅಥವಾ ತನ್ನ ಸ್ವಂತ ಬಳಕೆಗಾಗಿ ವಿನಿಯೋಗಿಸಿದರೆ ಅಥವಾ ವಿಲೇವಾರಿ ಮಾಡಿದರೆ ಅಥವಾ ಹಾಗೆ ಮಾಡಲು ಉದ್ದೇಶಪೂರ್ವಕವಾಗಿ ಯಾರೇ ಇತರೆ ವ್ಯಕ್ತಿಯನ್ನು ಒತ್ತಾಯಪಡಿಸಿದರೆ, ಅಪರಾಧ ನಿರ್ಣಯವಾದ ಮೇಲೆ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**54. ಸುಳ್ಳು ಎಚ್ಚರಿಕೆ ನೀಡಿದ್ದಕ್ಕಾಗಿ ದಂಡನೆ.–** ವಿಪತ್ತು ಅಥವಾ ಅದರ ತೀವ್ರತೆಗೆ ಅಥವಾ ಪ್ರಮಾಣಕ್ಕೆ ಸಂಬಂಧಿಸಿದಂತೆ ಅದರ ಅಪಾಯದ ಬಗ್ಗೆ ಸುಳ್ಳು ಎಚ್ಚರಿಕೆ ಅಥವಾ ಮುನ್ಸೂಚನೆ ಅಥವಾ ಪ್ರಚಾರವನ್ನು ಮಾಡುವ ಯಾರೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**55. ಸರ್ಕಾರದ ಇಲಾಖೆಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗೆ ಸರ್ಕಾರದ ಯಾವುದೇ ಇಲಾಖೆಯಿಂದ ಘಟಿಸಿದ ಅಪರಾಧದ ಸಂದರ್ಭಗಳಲ್ಲಿ, ಆ ಇಲಾಖಾ ಮುಖ್ಯಸ್ಥನು ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅಪರಾಧವು ತನ್ನ ಗಮನಕ್ಕೆ ಬಾರದೆ ಘಟಿಸಿದೆ ಎಂದು ಅಥವಾ ಅಂಥ ಅಪರಾಧ ಮಾಡುವುದನ್ನು ತಡೆಗಟ್ಟಲು ಎಲ್ಲಾ ಯುಕ್ತ ಕ್ರಮಗಳನ್ನು ಕೈಗೊಂಡಿದ್ದನೆಂದು ಅವನು ರುಜುವಾತುಪಡಿಸಿದ ಹೊರತು, ಅವನು ತನ್ನ ವಿರುದ್ಧದ ಕ್ರಮಕ್ಕೆ ಬದ್ಧನಾಗಿರತಕ್ಕದ್ದು ಮತ್ತು ತದನುಸಾರ ದಂಡಿತನಾಗತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಅಧಿನಿಯಮದ ಮೇರೆಗೆ ಸರ್ಕಾರದ ಇಲಾಖೆಯಿಂದ ಅಪರಾಧವು ಘಟಿಸಿದ್ದರೆ ಮತ್ತು ಇಲಾಖಾ ಮುಖ್ಯಸ್ಥನನ್ನು ಹೊರತುಪಡಿಸಿ, ಯಾರೇ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾದ ಅಥವಾ ಆತನ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಆರೋಪಿಸಬಹುದಾದದ್ದೆಂದು ರುಜುವಾತಾದ ಸಂದರ್ಭದಲ್ಲಿ, ಅಂಥ ಅಧಿಕಾರಿಯು ಅಪರಾಧದ ತಪ್ಪಿತಸ್ಥನೆಂಬುದಾಗಿ ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧ ಕ್ರಮಕ್ಕೆ ಬದ್ಧನಾಗಿರತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**56. ಅಧಿಕಾರಿಯ ಕರ್ತವ್ಯ ಪಾಲನೆಯಲ್ಲಿ ವಿಫಲತೆ ಅಥವಾ ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಯಲ್ಲಿ ಅವನ ಪರೋಕ್ಷ ಸಮ್ಮತಿ.–** ಯಾರೇ ಅಧಿಕಾರಿಗೆ, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಯಾವುದೇ ಕರ್ತವ್ಯ ವಿಧಿಸಲಾಗಿದ್ದಲ್ಲಿ, ಆತನು ತನ್ನ ಪದದ ಕರ್ತವ್ಯಗಳನ್ನು ಸ್ವತಃ ನಿರ್ವಹಿಸುವುದನ್ನು ನಿಲ್ಲಿಸಿಬಿಟ್ಟರೆ ಅಥವಾ ನಿರಾಕರಿಸಿದರೆ ಅಥವಾ ಕರ್ತವ್ಯ ಪಾಲನೆ ಮಾಡಲು ಹಿಂಜರಿದರೆ, ಅವನು ಹಾಗೆ ಮಾಡುವುದಕ್ಕೆ ತನ್ನ ಮೇಲಾಧಿಕಾರಿಯ ಸ್ಪಷ್ಟ ಲಿಖಿತ ಅನುಮತಿಯನ್ನು ಅಥವಾ ಇತರೆ ಕಾನೂನುಬದ್ಧ ವಿನಾಯಿತಿಯನ್ನು ಪಡೆದಿದ್ದ ಹೊರತು, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**57. ಕಡ್ಡಾಯ ಕೋರಿಕೆಯ ಸಂಬಂಧದಲ್ಲಿಯ ಯಾವುದೇ ಆದೇಶದ ಉಲ್ಲಂಘನೆಗಾಗಿ ದಂಡನೆ.–** ಯಾರೇ ವ್ಯಕ್ತಿಯು, 65ನೇ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶವನ್ನು ಉಲ್ಲಂಘಿಸಿದ್ದಲ್ಲಿ, ಆತನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**58. ಕಂಪನಿಗಳಿಂದ ಅಪರಾಧ.–** (1) ಒಂದು ಕಂಪನಿಯು ಅಥವಾ ನಿಗಮಿತ ನಿಕಾಯವು, ಈ ಅಧಿನಿಯಮದ ಮೇರೆಗೆ ಅಪರಾಧ ಮಾಡಿದ್ದ ಸಂದರ್ಭದಲ್ಲಿ ಆ ಅಪರಾಧವನ್ನು ಮಾಡಲಾದ ಸಮಯದಲ್ಲಿ, ಕಂಪನಿಯ ವ್ಯವಹಾರವನ್ನು ನಿರ್ವಹಿಸುವುದಕ್ಕಾಗಿ, ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು, ಅದೇ ರೀತಿ ಕಂಪನಿಯನ್ನು ಉಲ್ಲಂಘನೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನ ವಿರುದ್ಧ ಕ್ರಮ ತೆಗೆದುಕೊಳ್ಳಲು ಬದ್ಧನಾಗಿರತಕ್ಕದ್ದು ಮತ್ತು ತದನುಸಾರವಾಗಿ ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಒಂದು ವೇಳೆ, ಒಬ್ಬ ವ್ಯಕ್ತಿಯು, ಅಪರಾಧವು ಆತನ ಗಮನಕ್ಕೆ ಬಾರದಂತೆ ನಡೆಯಿತು ಎಂದು ಅಥವಾ ಅಂಥ ಅಪರಾಧವನ್ನು ನಡೆಯುವುದರಿಂದ ತಪ್ಪಿಸಲು, ಆತ ಯುಕ್ತ ಜಾಗರೂಕತೆಯನ್ನು

ವಹಿಸಿದ್ದನು ಎಂದು ರುಜುವಾತುಪಡಿಸಿದರೆ, ಆತನನ್ನು ಈ ಅಧಿನಿಯಮದಲ್ಲಿ ಉಪಬಂಧಿಸಲಾದ ಯಾವುದೇ ದಂಡನೆಗೆ ಹೊಣೆಗಾರರನ್ನಾಗಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದಾಗ್ಯೂ, ಈ ಅಧಿನಿಯಮದಡಿಯಲ್ಲಿ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಅಪರಾಧವನ್ನು ಮಾಡಲು ಅಥವಾ ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಮತ್ತು ಪರೋಕ್ಷ ಸಮ್ಮತಿಯಿಂದ ನಡೆಯಿತು ಎಂದು ರುಜುವಾತಾದರೆ ಅಥವಾ ಅವರ ಯಾವುದೇ ನಿರ್ಲಕ್ಷ್ಯತೆಯ ಕಾರಣದಿಂದಾಗಿ ಮಾಡಲಾಗಿದೆಯೆಂದು ಆರೋಪಿಸಬಹುದಾದರೆ, ಅಂಥ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವರ ವಿರುದ್ಧ ಕ್ರಮಕ್ಕೆ ಬದ್ಧರಾಗಿರತಕ್ಕದ್ದು ಮತ್ತು ತದನುಸಾರ ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದರಲ್ಲಿ ವ್ಯಕ್ತಿಗಳ ಫರ್ಮನ್ನು ಅಥವಾ ಇತರ ಸಂಘವನ್ನು ಒಳಗೊಂಡಿರುತ್ತದೆ; ಮತ್ತು

(ಬಿ) ಫರ್ಮ್‌ಗೆ ಸಂಬಂಧಿಸಿದಂತೆ, "ನಿರ್ದೇಶಕ" ಎಂದರೆ, ಫರ್ಮಿನ ಪಾಲುದಾರ.

**59. ಪ್ರಾಸಿಕ್ಯೂಷನ್‌ಗಾಗಿ ಪೂರ್ವ ಮಂಜೂರಾತಿ.–** 55ನೇ ಮತ್ತು 56ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಗಳಿಗಾಗಿ, ಯಾವುದೇ ಪ್ರಾಸಿಕ್ಯೂಷನನ್ನು ಸಂದರ್ಭಾನುಸಾರ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಅಂಥ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಬಗ್ಗೆ ಅಧಿಕೃತಗೊಂಡಿರುವ ಯಾರೇ ಅಧಿಕಾರಿಯ ಪೂರ್ವ ಮಂಜೂರಾತಿಯ ಹೊರತಾಗಿ, ಪ್ರಾರಂಭಿಸತಕ್ಕದ್ದಲ್ಲ.

**60. ಅಪರಾಧಗಳ ಸಂಜ್ಞಾನ.–** ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು,–

(ಎ) ಸಂದರ್ಭಾನುಸಾರವಾಗಿ, ರಾಷ್ಟ್ರೀಯ ಪ್ರಾಧಿಕಾರ, ರಾಜ್ಯ ಪ್ರಾಧಿಕಾರ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಜಿಲ್ಲಾ ಪ್ರಾಧಿಕಾರದ ಅಥವಾ ಇತರ ಯಾವುದೇ ಪ್ರಾಧಿಕಾರದಿಂದ ಅಥವಾ ಆ ಪ್ರಾಧಿಕಾರದಿಂದ, ಸರ್ಕಾರದಿಂದ ಈ ಬಗ್ಗೆ ಅಧಿಕೃತಗೊಂಡಿರುವ ಅಧಿಕಾರಿಯು ನೀಡಿದ ದೂರಿನ ಹೊರತು;

(ಬಿ) ಆಪಾದಿಸಲಾದ ಅಪರಾಧದ ಬಗ್ಗೆ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ ಯಾರೇ ವ್ಯಕ್ತಿಯು ಮೂವತ್ತು ದಿನಗಳಿಗಿಂತ ಕಡಿಮೆಯಿಲ್ಲದಂತೆ, ನೋಟೀಸನ್ನು ನೀಡಿದ್ದ ಮತ್ತು ಸಂದರ್ಭಾನುಸಾರ ರಾಷ್ಟ್ರೀಯ ಪ್ರಾಧಿಕಾರಕ್ಕೆ, ರಾಜ್ಯ ಪ್ರಾಧಿಕಾರಕ್ಕೆ, ಕೇಂದ್ರ ಸರ್ಕಾರಕ್ಕೆ, ರಾಜ್ಯ ಸರ್ಕಾರಕ್ಕೆ, ಜಿಲ್ಲಾ ಪ್ರಾಧಿಕಾರಕ್ಕೆ, ಯಾವುದೇ ಇತರ ಪ್ರಾಧಿಕಾರಕ್ಕೆ ಅಥವಾ ಮೇಲೆ ಹೇಳಲಾದಂತೆ ಅಧಿಕೃತಗೊಂಡ ಅಧಿಕಾರಿಗೆ ದೂರು ನೀಡುವ ತನ್ನ ಉದ್ದೇಶವನ್ನು ತಿಳಿಸಿದ್ದ ಹೊರತು

– ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

## ಅಧ್ಯಾಯ XI

## ಸಂಕೀರ್ಣ

**61. ತಾರತಮ್ಯದ ವಿರುದ್ಧ ನಿಷೇಧ.–** ವಿಪತ್ತಿನಿಂದ ಸಂತ್ರಸ್ತರಾದವರಿಗೆ ನಷ್ಟಪರಿಹಾರ ಮತ್ತು ಪರಿಹಾರ ಒದಗಿಸುವಾಗ, ಲಿಂಗ, ಜಾತಿ, ಸಮುದಾಯ, ಸಂತತಿ ಅಥವಾ ಧರ್ಮದ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡತಕ್ಕದ್ದಲ್ಲ.

**62. ಕೇಂದ್ರ ಸರ್ಕಾರವು ನಿರ್ದೇಶನ ನೀಡುವುದಕ್ಕೆ ಅಧಿಕಾರ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸಂದರ್ಭಾನುಸಾರವಾಗಿ, ಕೇಂದ್ರ ಸರ್ಕಾರವು, ಭಾರತ ಸರ್ಕಾರದ ಮಂತ್ರಾಲಯಗಳಿಗೆ ಅಥವಾ ಇಲಾಖೆಗಳಿಗೆ ಅಥವಾ ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಗೆ ಅಥವಾ ರಾಜ್ಯ ಸರ್ಕಾರಕ್ಕೆ, ರಾಜ್ಯ ಪ್ರಾಧಿಕಾರಕ್ಕೆ, ರಾಜ್ಯ ಕಾರ್ಯನಿರ್ವಾಹಕ ಸಮಿತಿಗೆ, ಶಾಸನಬದ್ಧ ನಿಕಾಯಗಳಿಗೆ ಅಥವಾ ಅದರ ಯಾರೇ ಅಧಿಕಾರಿಗಳಿಗೆ ಅಥವಾ ನೌಕರರಿಗೆ, ವಿಪತ್ತು

ನಿರ್ವಹಣೆಯಲ್ಲಿ ಅನುಕೂಲ ಮಾಡಿಕೊಡಲು ಅಥವಾ ನೆರವು ನೀಡಲು, ಲಿಖಿತದಲ್ಲಿ ನಿರ್ದೇಶನಗಳನ್ನು ನೀಡುವುದು ಕಾನೂನುಬದ್ಧವಾಗಿರತಕ್ಕದ್ದು ಮತ್ತು ಅಂಥ ಮಂತ್ರಾಲಯವು ಅಥವಾ ಇಲಾಖೆಯು ಅಥವಾ ಸರ್ಕಾರವು ಅಥವಾ ಪ್ರಾಧಿಕಾರವು, ಕಾರ್ಯನಿರ್ವಾಹಕ ಸಮಿತಿಯು, ಶಾಸನಬದ್ಧ ನಿಕಾಯವು, ಅಧಿಕಾರಿಯು ಅಥವಾ ನೌಕರನು ಅಂಥ ನಿರ್ದೇಶನವನ್ನು ಪಾಲಿಸಲು ಬದ್ಧರಾಗಿರತಕ್ಕದ್ದು.

**63. ರಕ್ಷಣಾ ಕಾರ್ಯಾಚರಣೆಗಳಿಗೆ ಲಭ್ಯವಾಗುವಂತೆ ಮಾಡಬೇಕಾದ ಅಧಿಕಾರಗಳು.–** ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯು, ಯಾವುದೇ ರಾಜ್ಯ ಕಾರ್ಯನಿರ್ವಾಹಕ ಸಮಿತಿಯು ಅಥವಾ ಜಿಲ್ಲಾ ಪ್ರಾಧಿಕಾರವು ಅಥವಾ ಅಂಥ ಸಮಿತಿಯಿಂದ ಅಥವಾ ಪ್ರಾಧಿಕಾರದಿಂದ ಈ ಬಗ್ಗೆ ಅಧಿಕೃತಗೊಂಡಿರುವ ಯಾರೇ ವ್ಯಕ್ತಿಯು ಒಕ್ಕೂಟದ ಅಥವಾ ರಾಜ್ಯದ ಯಾರೇ ಅಧಿಕಾರಿಯನ್ನು ಅಥವಾ ಪ್ರಾಧಿಕಾರವನ್ನು ಕೋರಿಕೊಂಡಾಗ, ಅಂಥ ಅಧಿಕಾರಿಗಳ ಅಥವಾ ನೌಕರರು ವಿಪತ್ತನ್ನು ತಡೆಗಟ್ಟುವ ಅಥವಾ ಉಪಶಮನ ಮಾಡುವುದಕ್ಕೆ ಅಥವಾ ರಕ್ಷಣಾ ಅಥವಾ ಪರಿಹಾರ ಕಾರ್ಯಗಳಿಗೆ ಸಂಬಂಧಿಸಿದ, ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸಲು ಆ ಸಮಿತಿಗೆ ಅಥವಾ ಪ್ರಾಧಿಕಾರಕ್ಕೆ ಅಥವಾ ವ್ಯಕ್ತಿಗೆ ದೊರಕುವಂತೆ ಮಾಡತಕ್ಕದ್ದು.

**64. ಕೆಲವು ಸಂದರ್ಭಗಳಲ್ಲಿ ನಿಯಮಗಳನ್ನು ರಚಿಸುವುದು ಅಥವಾ ತಿದ್ದುಪಡಿ ಮಾಡುವುದು, ಇತ್ಯಾದಿ.–** ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಸಂದರ್ಭಾನುಸಾರವಾಗಿ, ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಗೆ, ರಾಜ್ಯ ಕಾರ್ಯನಿರ್ವಾಹಕ ಸಮಿತಿಗೆ ಅಥವಾ ಜಿಲ್ಲಾ ಪ್ರಾಧಿಕಾರಕ್ಕೆ, ವಿಪತ್ತನ್ನು ತಡೆಗಟ್ಟುವ ಅಥವಾ ಉಪಶಮನ ಮಾಡುವ ಉದ್ದೇಶಗಳಿಗಾಗಿ ಸಂದರ್ಭಾನುಸಾರ ಯಾವುದಕ್ಕೆ ನಿಯಮ, ವಿನಿಯಮನ, ಅಧಿಸೂಚನೆ, ಮಾರ್ಗಸೂಚಿ, ಸೂಚನೆ, ಆದೇಶ, ಯೋಜನೆ ಅಥವಾ ಉಪ–ವಿಧಿಗಳಿಗೆ ಸಂಬಂಧಿಸಿದಂತೆ ಉಪಬಂಧಗಳನ್ನು ಕಲ್ಪಿಸುವ ಅಥವಾ ತಿದ್ದುಪಡಿ ಮಾಡುವ ಅಗತ್ಯವಿದೆ ಎಂದು ಕಂಡುಬಂದರೆ, ಆ ಉದ್ದೇಶಕ್ಕಾಗಿ ಸಂದರ್ಭಾನುಸಾರ, ಅಂಥ ನಿಯಮಗಳ, ವಿನಿಯಮನದ, ಅಧಿಸೂಚನೆಯ, ಮಾರ್ಗಸೂಚಿಗಳ, ಸೂಚನೆ, ಆದೇಶ, ಯೋಜನೆ ಅಥವಾ ಉಪ–ವಿಧಿಗಳ ತಿದ್ದುಪಡಿ ಮಾಡಲು ಅಗತ್ಯಪಡಿಸಬಹುದು ಮತ್ತು ಸಮುಚಿತ ಇಲಾಖೆ ಅಥವಾ ಪ್ರಾಧಿಕಾರವು, ಆ ಅಗತ್ಯತೆಗಳನ್ನು ಪಾಲಿಸಲು ಅಗತ್ಯ ಕ್ರಮವನ್ನು ಕೈಗೊಳ್ಳತಕ್ಕದ್ದು.

**65. ರಕ್ಷಣಾ ಕಾರ್ಯಾಚರಣೆಗಳು ಇತ್ಯಾದಿಗಳಿಗಾಗಿ ಸಂಪನ್ಮೂಲಗಳು, ಆಹಾರ ಪದಾರ್ಥಗಳು, ವಾಹನ, ಇತ್ಯಾದಿಗಳನ್ನು ಕೋರುವ ಅಧಿಕಾರ.–** (1) ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಗೆ, ರಾಜ್ಯ ಕಾರ್ಯನಿರ್ವಾಹಕ ಸಮಿತಿಗೆ ಅಥವಾ ಜಿಲ್ಲಾ ಪ್ರಾಧಿಕಾರಕ್ಕೆ ಅಥವಾ ಅವುಗಳಿಂದ ಈ ಬಗ್ಗೆ ಅಧಿಕೃತಗೊಂಡಿರುವ ಯಾರೇ ಅಧಿಕಾರಿಗೆ,–

(ಎ) ತ್ವರಿತ ಪ್ರತಿಸ್ಪಂದನೆಯ ಉದ್ದೇಶಕ್ಕಾಗಿ, ಯಾವುದೇ ಪ್ರಾಧಿಕಾರದ ಅಥವಾ ವ್ಯಕ್ತಿಯ ಬಳಿಯಿರುವ ಯಾವುವೇ ಸಂಪನ್ಮೂಲಗಳ ಅಗತ್ಯವಿದೆ ಎಂದು;

(ಬಿ) ರಕ್ಷಣಾ ಕಾರ್ಯಾಚರಣೆಗಳ ಉದ್ದೇಶಕ್ಕಾಗಿ ಯಾವುದೇ ಆವರಣಗಳ ಅಗತ್ಯವಿದೆ ಅಥವಾ ಅಗತ್ಯವಾಗುವ ಸಂಭವವಿದೆ ಎಂದು; ಅಥವಾ

(ಸಿ) ವಿಪತ್ತು ಬಾಧಿತ ಪ್ರದೇಶಗಳಿಂದ ಸಂಪನ್ಮೂಲಗಳನ್ನು ಸಾಗಿಸುವ ಉದ್ದೇಶಕ್ಕಾಗಿ ಅಥವಾ ಬಾಧಿತ ಪ್ರದೇಶಗಳಿಗೆ ಸಂಪನ್ಮೂಲಗಳನ್ನು ಸಾಗಿಸುವ ಉದ್ದೇಶಕ್ಕಾಗಿ ಅಥವಾ ರಕ್ಷಣಾ, ಪುನರ್ವಸತಿ ಅಥವಾ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸಂಪನ್ಮೂಲಗಳನ್ನು ಸಾಗಿಸುವ ಉದ್ದೇಶಗಳಿಗಾಗಿ, ಯಾವುದೇ ವಾಹನದ ಅಗತ್ಯವಿದೆ ಅಥವಾ ಅಗತ್ಯವಾಗುವ ಸಂಭವವಿದೆ ಎಂದು

– ಕಂಡುಬಂದರೆ, ಅಂಥ ಪ್ರಾಧಿಕಾರವು, ಲಿಖಿತದಲ್ಲಿ ಆದೇಶದ ಮೂಲಕ, ಸಂದರ್ಭಾನುಸಾರವಾಗಿ, ಅಂಥ ಸಂಪನ್ಮೂಲಗಳನ್ನು ಅಥವಾ ಆವರಣಗಳನ್ನು ಅಥವಾ ಅಂಥ ವಾಹನವನ್ನು ಕೋರಬಹುದು ಮತ್ತು ಕೋರಿಕೆಗೆ ಸಂಬಂಧಪಟ್ಟಂತೆ, ಅಗತ್ಯ ಅಥವಾ ಸಮಯೋಚಿತವೆಂದು ಅದಕ್ಕೆ ಕಂಡುಬರಬಹುದಾದ ಅಂಥ ಮುಂದಿನ ಆದೇಶಗಳನ್ನು ಹೊರಡಿಸಬಹುದು.

(2) ಯಾವುದೇ ಸಂಪನ್ಮೂಲ, ಆವರಣ ಅಥವಾ ವಾಹನವನ್ನು (1)ನೇ ಉಪಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಿದಾಗಲ್ಲೆಲ್ಲಾ, ಅಂಥ ಕೋರಿಕೆಯ ಅವಧಿಯನ್ನು, ಅಂಥ ಸಂಪನ್ಮೂಲ, ಆವರಣ ಅಥವಾ ವಾಹನವು, ಆ ಉಪಪ್ರಕರಣದಲ್ಲಿ ನಮೂದಿಸಲಾದ ಯಾವುದೇ ಉದ್ದೇಶಗಳಿಗಾಗಿ ಅವಶ್ಯಕವಿರುವ ಅವಧಿಯನ್ನು ಮೀರಿ ವಿಸ್ತರಿಸತಕ್ಕದ್ದಲ್ಲ.

(3) ಈ ಪ್ರಕರಣದಲ್ಲಿ,–

(ಎ) "ಸಂಪನ್ಮೂಲಗಳು" ಎಂಬುದು ಮಾನವ ಮತ್ತು ವಸ್ತು ಸಂಪನ್ಮೂಲಗಳನ್ನು ಒಳಗೊಳ್ಳುತ್ತವೆ;

(ಬಿ) "ಸೇವೆಗಳು" ಎಂಬುದು ಸೌಲಭ್ಯಗಳನ್ನು ಒಳಗೊಳ್ಳುತ್ತವೆ;

(ಸಿ) "ಆವರಣ" ಎಂದರೆ, ಯಾವುದೇ ಭೂಮಿ, ಕಟ್ಟಡ ಅಥವಾ ಕಟ್ಟಡದ ಭಾಗ ಮತ್ತು ಇದರಲ್ಲಿ ಗುಡಿಸಲು, ಶೆಡ್ ಅಥವಾ ಇತರೆ ರಚನೆ ಅಥವಾ ಅದರ ಯಾವುದೇ ಭಾಗವನ್ನು ಒಳಗೊಳ್ಳುತ್ತದೆ;

(ಡಿ) "ವಾಹನ" ಎಂದರೆ, ಯಾಂತ್ರಿಕ ಶಕ್ತಿಯಿಂದಾಗಲೀ ಅಥವಾ ಅನ್ಯಥಾವಾಗಲಿ ಎಳೆಯಲ್ಪಡುವ, ಸಾಗಣೆಯ ಉದ್ದೇಶಕ್ಕಾಗಿ, ಉಪಯೋಗಿಸಲಾದ ಅಥವಾ ಉಪಯೋಗಿಸಲು ಸಾಧ್ಯವಿರುವಂಥ ಯಾವುದೇ ವಾಹನ.

**66. ನಷ್ಟಪರಿಹಾರದ ಸಂದಾಯ.–** (1) 65ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಸಮಿತಿಯು, ಪ್ರಾಧಿಕಾರವು ಅಥವಾ ಯಾರೇ ಅಧಿಕಾರಿಯು, ಆ ಪ್ರಕರಣಕ್ಕೆ ಅನುಸಾರವಾಗಿ ಯಾವುದೇ ಆವರಣವನ್ನು ಕಡ್ಡಾಯವಾಗಿ ಕೋರಿದರೆ, ಹಿತಾಸಕ್ತಿಯುಳ್ಳ ವ್ಯಕ್ತಿಗಳಿಗೆ ಮತ್ತು ಈ ಮುಂದಿನವುಗಳನ್ನು ಪರಿಹಾರದ ಮೊತ್ತವನ್ನು, ಎಂದರೆ:–

(i) ಆವರಣಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಬಾಡಿಗೆ ಅಥವಾ ಬಾಡಿಗೆಯನ್ನು ಸಂದಾಯ ಮಾಡಬೇಕಾಗಿಲ್ಲದಿದ್ದರೆ, ಆಯಾ ಸ್ಥಳದಲ್ಲಿ ಅಂಥದ್ದೇ ಆವರಣಕ್ಕೆ ಸಂದಾಯ ಮಾಡತಕ್ಕ ಬಾಡಿಗೆ;

(ii) ಆವರಣದ ಕಡ್ಡಾಯ ಕೋರಿಕೆಯ ಪರಿಣಾಮವಾಗಿ, ಹಿತಾಸಕ್ತಿಯುಳ್ಳ ವ್ಯಕ್ತಿಯು ತನ್ನ ನಿವಾಸವನ್ನು ಅಥವಾ ವ್ಯವಹಾರದ ಸ್ಥಳವನ್ನು ಬದಲಾಯಿಸುವಂತೆ ಒತ್ತಾಯಿಸಲ್ಪಟ್ಟರೆ, ಅಂಥ ಬದಲಾವಣೆಗೆ ಪ್ರಾಸಂಗಿಕವಾದ ಸೂಕ್ತ ವೆಚ್ಚಗಳನ್ನು (ಯಾವುದಾದರೂ ಇದ್ದರೆ)

– ಪರಿಗಣನೆಗೆ ತೆಗೆದುಕೊಂಡು ನಿರ್ಧರಿಸತಕ್ಕದ್ದು:

ಪರಂತು, ಹಾಗೆ ನಿರ್ಧರಿಸಲಾದ ಪರಿಹಾರದ ಮೊತ್ತದಿಂದಾಗಿ ಬಾಧಿತನಾದ ಯಾರೇ ಹಿತಾಸಕ್ತ ವ್ಯಕ್ತಿಯು, ಸಂದರ್ಭಾನುಸಾರ ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಮೂವತ್ತು ದಿನಗಳೊಳಗಾಗಿ ಮಧ್ಯಸ್ಥಗಾರರಿಗೆ ವಿಷಯವನ್ನು ಒಪ್ಪಿಸಲು ಕೋರಿ ಅರ್ಜಿಯನ್ನು ಸಲ್ಲಿಸಿದ್ದಲ್ಲಿ, ಸಂದಾಯ ಮಾಡಬೇಕಾದ ಪರಿಹಾರದ ಮೊತ್ತವು, ಸಂದರ್ಭಾನುಸಾರ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಈ ಬಗ್ಗೆ ನೇಮಿಸಿದ ಮಧ್ಯಸ್ಥಗಾರನು ನಿರ್ಧರಿಸಿದಂತೆ ಇರತಕ್ಕದ್ದು:

ಮತ್ತು ಪರಂತು, ಪರಿಹಾರವನ್ನು ಸ್ವೀಕರಿಸುವುದಕ್ಕಾಗಿನ ಸ್ವಾಮ್ಯಕ್ಕೆ ಅಥವಾ ಪರಿಹಾರದ ಮೊತ್ತದ ಹಂಚಿಕೆಗೆ ಸಂಬಂಧಿಸಿದಂತೆ ಯಾವುದೇ ವಿವಾದವಿದ್ದರೆ, ಅದನ್ನು ಸಂದರ್ಭಾನುಸಾರವಾಗಿ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು, ಈ ಬಗ್ಗೆ ಸಂದರ್ಭಾನುಸಾರವಾಗಿ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ನೇಮಿಸಿದ ಮಧ್ಯಸ್ಥಗಾರನಿಗೆ ನಿರ್ಧರಣೆಗಾಗಿ ಒಪ್ಪಿಸತಕ್ಕದ್ದು ಮತ್ತು ಅಂಥ ಮಧ್ಯಸ್ಥಗಾರನ ನಿರ್ಣಯದನುಸಾರವಾಗಿ ನಿರ್ಧರಿಸತಕ್ಕದ್ದು.

**ವಿವರಣೆ.–** ಈ ಉಪಪ್ರಕರಣದಲ್ಲಿ, "ಹಿತಾಸಕ್ತಿಯುಳ್ಳ ವ್ಯಕ್ತಿ" ಎಂದರೆ, ಕೋರಿಕೆಯ ನಿಕಟಪೂರ್ವದಲ್ಲಿ 65ನೇ ಪ್ರಕರಣದ ಮೇರೆಗೆ ಕೋರಿಕೆ ಸಲ್ಲಿಸಿದಾಗ, ಆವರಣದ ನೈಜ ಸ್ವಾಧೀನತೆಯಲ್ಲಿದ್ದ ವ್ಯಕ್ತಿ ಅಥವಾ ಅಂಥ ನೈಜ ಸ್ವಾಧೀನತೆಯಲ್ಲಿ ಯಾರೇ ವ್ಯಕ್ತಿ ಇಲ್ಲದಿದ್ದರೆ, ಅಂಥ ಆವರಣದ ಮಾಲೀಕ.

(2) 65ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಸಮಿತಿಯು, ಪ್ರಾಧಿಕಾರವು ಅಥವಾ ಅಧಿಕಾರಿಯು, ಆ ಪ್ರಕರಣಕ್ಕೆ ಅನುಸಾರವಾಗಿ, ಯಾವುದೇ ವಾಹನಕ್ಕಾಗಿ ಕೋರಿಕೆ ಸಲ್ಲಿಸಿದರೆ, ಅದರ ಮಾಲೀಕನಿಗೆ ಸಂದಾಯ

ಮಾಡತಕ್ಕ ಅದರ ಪರಿಹಾರದ ಮೊಬಲಗು, ಸಂದರ್ಭಾನುಸಾರವಾಗಿ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು, ಅಂಥ ವಾಹನದ ಬಾಡಿಗೆಗಾಗಿ ಆಯಾ ಸ್ಥಳದಲ್ಲಿ ಪ್ರಚಲಿತದಲ್ಲಿರುವ ಬಾಡಿಗೆಗಳು ಅಥವಾ ದರಗಳ ಆಧಾರದ ಮೇಲೆ ನಿರ್ಧರಿಸತಕ್ಕ ಮೊಬಲಗು ಆಗಿರತಕ್ಕದ್ದು:

ಪರಂತು, ಹಾಗೆ ನಿರ್ಧರಿಸಿದ ಪರಿಹಾರದ ಮೊಬಲಗಿನಿಂದ ಬಾಧಿತನಾದ ಅಂಥ ವಾಹನದ ಮಾಲೀಕನು, ಮಧ್ಯಸ್ಥಗಾರರಿಗೆ ವಿಷಯವನ್ನು ಒಪ್ಪಿಸುವುದಕ್ಕಾಗಿ ಸಂದರ್ಭಾನುಸಾರ, ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಗೊತ್ತುಪಡಿಸಿದ ಸಮಯದೊಳಗೆ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಸಂದರ್ಭಾನುಸಾರ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು, ಈ ಬಗ್ಗೆ ನೇಮಕ ಮಾಡಿದ ಮಧ್ಯಸ್ಥಗಾರರು ನಿರ್ಧರಿಸಿದ ಪರಿಹಾರದ ಮೊಬಲಗನ್ನು ಆತನಿಗೆ ಸಂದಾಯ ಮಾಡತಕ್ಕದ್ದು:

ಮತ್ತು ಪರಂತು, ಮಾಲೀಕನ ಹೊರತಾಗಿ ಇತರ ವ್ಯಕ್ತಿಯ ಸ್ವಾಧೀನದಲ್ಲಿರುವ ವಾಹನಕ್ಕಾಗಿ ಅಥವಾ ನೌಕೆಗಾಗಿ ಕೋರಿಕೆಯ ನಿಕಟಪೂರ್ವದಲ್ಲಿಯ ಕಂತು ಖರೀದಿ ಒಪ್ಪಂದದ ಕಾರಣದಿಂದಾಗಿ, ಈ ಉಪಪ್ರಕರಣದ ಮೇರೆಗೆ, ಕೋರಿಕೆಗೆ ಸಂಬಂಧಿಸಿದಂತೆ ಒಟ್ಟು ಪರಿಹಾರವಾಗಿ ನಿರ್ಧರಿಸಿದ ಮೊಬಲಗನ್ನು ಆ ವ್ಯಕ್ತಿ ಮತ್ತು ಮಾಲೀಕನ ನಡುವೆ, ಅವರು ಒಪ್ಪಬಹುದಾದಂಥ ರೀತಿಯಲ್ಲಿ ಮತ್ತು ಒಪ್ಪಂದಕ್ಕೆ ತಪ್ಪಿದಲ್ಲಿ, ಸಂದರ್ಭಾನುಸಾರ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ನೇಮಕ ಮಾಡಿದ ಮಧ್ಯಸ್ಥಗಾರರು ಈ ಬಗ್ಗೆ ನಿರ್ಧರಿಸಬಹುದಾದಂಥ ರೀತಿಯಲ್ಲಿ ಹಂಚಿಕೆ ಮಾಡತಕ್ಕದ್ದು.

**67. ಎಚ್ಚರಿಕೆ, ಇತ್ಯಾದಿಗಳ ಸಂವಹನಕ್ಕಾಗಿ ಮಾಧ್ಯಮಗಳಿಗೆ ನಿರ್ದೇಶನ.–** ರಾಷ್ಟ್ರೀಯ ಪ್ರಾಧಿಕಾರವು, ರಾಜ್ಯ ಪ್ರಾಧಿಕಾರವು ಅಥವಾ ಜಿಲ್ಲಾ ಪ್ರಾಧಿಕಾರವು, ಯಾವುದೇ ಅಪಾಯ ಸಂಭಾವ್ಯ ವಿಪತ್ತಿನ ಸನ್ನಿವೇಶಕ್ಕೆ ಅಥವಾ ವಿಪತ್ತಿಗೆ ಸಂಬಂಧಿಸಿದಂತೆ, ಯಾವುದೇ ಎಚ್ಚರಿಕೆ ಅಥವಾ ಸಲಹೆಗಳನ್ನು ನೀಡಲು ಲಭ್ಯವಿರಬಹುದಾದಂಥ, ಯಾವುದೇ ಶ್ರವ್ಯ ಅಥವಾ ಶ್ರವ್ಯ–ದೃಶ್ಯ ಮಾಧ್ಯಮದ ಅಥವಾ ಇತರ ಸಂಪರ್ಕ ಸಾಧನಗಳ ನಿಯಂತ್ರಣ ಹೊಂದಿರುವ ಯಾವುದೇ ಪ್ರಾಧಿಕಾರಕ್ಕೆ ಅಥವಾ ವ್ಯಕ್ತಿಗೆ ನಿರ್ದೇಶನ ನೀಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದು ಮತ್ತು ಗೊತ್ತುಮಾಡಲಾದ ಸದರಿ ಸಂಪರ್ಕ ಸಾಧನಗಳು ಮತ್ತು ಮಾಧ್ಯಮವು, ಅಂಥ ನಿರ್ದೇಶನವನ್ನು ಪಾಲಿಸತಕ್ಕದ್ದು.

**68. ಆದೇಶಗಳ ಮತ್ತು ತೀರ್ಮಾನಗಳ ಅಧಿಪ್ರಮಾಣೀಕರಣ.–** ರಾಷ್ಟ್ರೀಯ ಪ್ರಾಧಿಕಾರದ ಅಥವಾ ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯ, ರಾಜ್ಯ ಪ್ರಾಧಿಕಾರದ ಅಥವಾ ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಅಥವಾ ಜಿಲ್ಲಾ ಪ್ರಾಧಿಕಾರದ ಪ್ರತಿಯೊಂದು ಆದೇಶವನ್ನು ಅಥವಾ ತೀರ್ಮಾನವನ್ನು, ಈ ಬಗ್ಗೆ ಅಧಿಕೃತಗೊಳಿಸಬಹುದಾದಂಥ ರಾಷ್ಟ್ರೀಯ ಪ್ರಾಧಿಕಾರದ ಅಥವಾ ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯ ಅಥವಾ ರಾಜ್ಯ ಕಾರ್ಯನಿವಾಹಕ ಸಮಿತಿಯ ಅಥವಾ ಜಿಲ್ಲಾ ಪ್ರಾಧಿಕಾರದ ಅಧಿಕಾರಿಗಳು ಅಧಿಪ್ರಮಾಣಿಕರಿಸತಕ್ಕದ್ದು.

**69. ಅಧಿಕಾರಗಳ ಪ್ರತ್ಯಾಯೋಜನೆ.–** ಸಂದರ್ಭಾನುಸಾರ ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯು, ರಾಜ್ಯ ಕಾರ್ಯನಿರ್ವಾಹಕ ಸಮಿತಿಯು, ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ, ಅದು ಅಗತ್ಯವೆಂದು ಭಾವಿಸಿದರೆ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳು ಯಾವುದಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ತನ್ನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಅಧ್ಯಕ್ಷನಿಗೆ ಅಥವಾ ಯಾರೇ ಇತರ ಸದಸ್ಯನಿಗೆ ಅಥವಾ ಯಾರೇ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

**70. ವಾರ್ಷಿಕ ವರದಿ.–** (1) ರಾಷ್ಟ್ರೀಯ ಪ್ರಾಧಿಕಾರವು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಕಾಲದಲ್ಲಿ, ಹಿಂದಿನ ವರ್ಷದ ಅವಧಿಯ ತನ್ನ ಚಟುವಟಿಕೆಗಳ ನೈಜವಾದ ಮತ್ತು ಪೂರ್ಣವಾದ ವಾರ್ಷಿಕ ವರದಿಯನ್ನು ಪ್ರತಿ ವರ್ಷ ಸಿದ್ಧಪಡಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು, ಅದನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಸಂಸತ್ತಿನ ಉಭಯ ಸದನಗಳ ಮುಂದೆ ಇಡುವಂತೆ ಮಾಡತಕ್ಕದ್ದು.

(2) ರಾಜ್ಯ ಪ್ರಾಧಿಕಾರವು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಕಾಲದಲ್ಲಿ, ಹಿಂದಿನ ವರ್ಷದ ಅವಧಿಯ ತನ್ನ ಚಟುವಟಿಕೆಗಳ ನಿಜವಾದ ಮತ್ತು ಪೂರ್ಣವಾದ ವಾರ್ಷಿಕ ವರದಿಯನ್ನು ಪ್ರತಿ ವರ್ಷಕ್ಕೊಮ್ಮೆ ಸಿದ್ಧಪಡಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು, ರಾಜ್ಯ ವಿಧಾನಮಂಡಲವು ಎರಡು ಸದನಗಳನ್ನು ಒಳಗೊಂಡಿರುವಲ್ಲಿ, ಪ್ರತಿಯೊಂದು ಸದನದ ಮುಂದೆ ಅಥವಾ ಅಂಥ ವಿಧಾನಮಂಡಲವು ಒಂದೇ ಸದನವನ್ನು ಒಳಗೊಂಡಿರುವಲ್ಲಿ, ಆ ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

**71. ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಪ್ರತಿಷೇಧ.–** ಯಾವುದೇ ನ್ಯಾಯಾಲಯವು (ಸರ್ವೋಚ್ಚ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ಹೊರತಾಗಿ) ಈ ಅಧಿನಿಯಮದ ಮೂಲಕ ಪ್ರದತ್ತವಾದ ಯಾವುದೇ ಅಧಿಕಾರದ ಅನುಸಾರವಾಗಿ ಅಥವಾ ಅದರ ಪ್ರಕಾರ್ಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು, ರಾಷ್ಟ್ರೀಯ ಪ್ರಾಧಿಕಾರವು, ರಾಜ್ಯ ಸರ್ಕಾರವು, ರಾಜ್ಯ ಪ್ರಾಧಿಕಾರವು ಅಥವಾ ಜಿಲ್ಲಾ ಪ್ರಾಧಿಕಾರವು ಮಾಡಿದ ಯಾವುದೇ ಕಾರ್ಯದ, ಕೈಗೊಂಡ ಕ್ರಮದ, ಹೊರಡಿಸಿದ ಆದೇಶಗಳ, ನೀಡಲಾದ ನಿರ್ದೇಶನದ, ಸೂಚನೆಯ ಅಥವಾ ಮಾರ್ಗಸೂಚಿಗಳ ಸಂಬಂಧದಲ್ಲಿ ಯಾವುದೇ ದಾವೆ ಅಥವಾ ವ್ಯವಹರಣೆಯನ್ನು ಪುರಸ್ಕರಿಸುವ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

**72. ಅಧಿನಿಯಮವು ಅಧ್ಯಾರೋಹಿ ಪರಿಣಾಮವನ್ನು ಹೊಂದಿರುವುದು.–** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ಈ ಅಧಿನಿಯಮವನ್ನು ಹೊರತುಪಡಿಸಿ, ಯಾವುದೇ ಕಾನೂನಿನ ಬಲದಿಂದ ಪರಿಣಾಮಕಾರಿಯಾದ ಯಾವುದೇ ಲಿಖಿತ ಪತ್ರದಲ್ಲಿ ಅಸಂಗತವಾದುದು ಏನೇ ಒಳಗೊಂಡಿದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

**73. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಥವಾ ವಿನಿಯಮನಗಳ ಉಪಬಂಧಗಳ ಮೇರೆಗೆ, ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಅಥವಾ ಮಾಡಲು ಉದ್ದೇಶಿಸಲಾದ ಯಾವುದೇ ಕಾರ್ಯಕ್ಕೆ ಸಂಬಂಧಪಟ್ಟಂತೆ, ಕೇಂದ್ರ ಸರ್ಕಾರದ ಅಥವಾ ರಾಷ್ಟ್ರೀಯ ಪ್ರಾಧಿಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ರಾಜ್ಯ ಪ್ರಾಧಿಕಾರದ ಅಥವಾ ಜಿಲ್ಲಾ ಪ್ರಾಧಿಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ವಿರುದ್ಧ ಅಥವಾ ಕೇಂದ್ರ ಸರ್ಕಾರದ ಅಥವಾ ರಾಷ್ಟ್ರೀಯ ಪ್ರಾಧಿಕಾರದ ಯಾರೇ ಅಧಿಕಾರಿಯ ಅಥವಾ ನೌಕರನ ಅಥವಾ ಅಂಥ ಸರ್ಕಾರ ಅಥವಾ ಪ್ರಾಧಿಕಾರಿಯ ಪರವಾಗಿ, ಕೆಲಸ ಮಾಡುವ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ, ಯಾವುದೇ ದಾವೆಯನ್ನು ಅಥವಾ ಪ್ರಾಸಿಕ್ಯೂಷನ್‌ನ್ನು ಅಥವಾ ಇತರ ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**74. ಕಾನೂನು ಕ್ರಮದಿಂದ ರಕ್ಷಣೆ.–** ಕೇಂದ್ರ ಸರ್ಕಾರಕ್ಕೆ, ರಾಷ್ಟ್ರೀಯ ಪ್ರಾಧಿಕಾರಕ್ಕೆ, ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಗೆ, ರಾಜ್ಯ ಸರ್ಕಾರಕ್ಕೆ, ರಾಜ್ಯ ಪ್ರಾಧಿಕಾರಕ್ಕೆ, ರಾಜ್ಯ ಕಾರ್ಯನಿವಾಹಕ ಸಮಿತಿಗೆ ಅಥವಾ ಜಿಲ್ಲಾ ಪ್ರಾಧಿಕಾರದ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಅವರು ತಮ್ಮ ಪದೀಯ ಸಾಮರ್ಥ್ಯದಲ್ಲಿ, ಸಂವಹನ ಅಥವಾ ಪ್ರಸಾರ ಮಾಡಿದ ಯಾವುದೇ ಸನ್ನಿಹಿತ ವಿಪತ್ತಿನ ಅಥವಾ ಅಂಥ ಸಂವಹನದ ಅಥವಾ ಪ್ರಸಾರಕ್ಕೆ ಸಂಬಂಧಿಸಿದಂತೆ ಅವರು ತೆಗೆದುಕೊಂಡ ಯಾವುದೇ ಕ್ರಮದ ಅಥವಾ ನೀಡಿದ ನಿರ್ದೇಶನದ ಸಂಬಂಧದಲ್ಲಿ, ಯಾವುದೇ ಎಚ್ಚರಿಕೆಗೆ ಸಂಬಂಧಿಸಿದಂತೆ ಕಾನೂನು ಕ್ರಮದಿಂದ ರಕ್ಷಣೆ ಇರತಕ್ಕದ್ದು.

**75. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ, ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) (2)ನೇ ಉಪಪ್ರಕರಣದ ಅಡಿಯಲ್ಲಿ ರಾಷ್ಟ್ರೀಯ ಪ್ರಾಧಿಕಾರದ ರಚನೆ ಮತ್ತು ಸದಸ್ಯರ ಸಂಖ್ಯೆ ಮತ್ತು 3ನೇ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ, ರಾಷ್ಟ್ರೀಯ ಪ್ರಾಧಿಕಾರದ ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು;

(ಬಿ) 7ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಸಲಹಾ ಸಮಿತಿಯ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಸಿ) 8ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ, ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯ ಅಧ್ಯಕ್ಷರ ಅಧಿಕಾರಗಳು ಮತ್ತು ಪ್ರಕಾರ್ಯಗಳು ಮತ್ತು 8ನೇ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ ಅದರ ಅಧಿಕಾರಗಳನ್ನು ಚಲಾಯಿಸುವಲ್ಲಿ ಮತ್ತು ಅದರ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನ;

(ಡಿ) 9ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ, ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿಯು ಸ್ಥಾಪಿಸಿದ ಉಪ–ಸಮಿತಿಗೆ ಸಂಬಂಧಿಸಿದ ವ್ಯಕ್ತಿಗಳಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಇ) (2)ನೇ ಉಪಪ್ರಕರಣದ ಅಡಿಯಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯ ಸದಸ್ಯರ ಸಂಖ್ಯೆ, ಪದಾವಧಿ ಮತ್ತು ಸದಸ್ಯರ ಖಾಲಿಸ್ಥಾನಗಳು ಮತ್ತು (3)ನೇ ಉಪಪ್ರಕರಣದ ಅಡಿಯಲ್ಲಿ, ಅಂಥ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ರೀತಿ ಮತ್ತು 42ನೇ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯ ಆಡಳಿತ ಮಂಡಳಿಯನ್ನು ರಚಿಸುವ ರೀತಿ;

(ಎಫ್) 44ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ, ಶಿಸ್ತಿಗೆ ಸಂಬಂಧಪಟ್ಟ ಉಪಬಂಧಗಳು ಸೇರಿದಂತೆ ಪಡೆಯ ರಚನೆಯ ರೀತಿ, ಪಡೆಯ ಸದಸ್ಯರ ಸೇವಾ ಷರತ್ತುಗಳು;

(ಜಿ) 60ನೇ ಪ್ರಕರಣದ ಖಂಡ (ಬಿ)ಯ ಅಡಿಯಲ್ಲಿ, ಅಪರಾಧದ ಬಗ್ಗೆ ನೋಟೀಸನ್ನು ಮತ್ತು ದೂರನ್ನು ರಾಷ್ಟ್ರೀಯ ಪ್ರಾಧಿಕಾರಕ್ಕೆ, ರಾಜ್ಯ ಪ್ರಾಧಿಕಾರಕ್ಕೆ, ಕೇಂದ್ರ ಸರ್ಕಾರಕ್ಕೆ, ರಾಜ್ಯ ಸರ್ಕಾರಕ್ಕೆ ಅಥವಾ ಇತರ ಪ್ರಾಧಿಕಾರಿಗೆ ಅಥವಾ ಅಧಿಕಾರಿಗೆ, ಸಲ್ಲಿಸುವ ಉದ್ದೇಶದ ರೀತಿ;

(ಹೆಚ್) 70ನೇ ಪ್ರಕರಣದ ಅಡಿಯಲ್ಲಿ ಯಾವ ನಮೂನೆಯಲ್ಲಿ ಮತ್ತು ಯಾವ ಕಾಲದೊಳಗೆ ವಾರ್ಷಿಕ ವರದಿಯನ್ನು ಸಿದ್ಧಪಡಿಸಬೇಕಾಗಿದೆಯೋ ಆ ನಮೂನೆ ಮತ್ತು ಕಾಲ;

(ಐ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಅಥವಾ ಯಾವ ವಿಷಯಕ್ಕೆ ಸಂಬಂಧಿಸಿದಂತೆ ನಿಯಮಗಳ ಮೂಲಕ ಉಪಬಂಧವನ್ನು ರಚಿಸಬೇಕಾಗಿದೆಯೋ ಆ ಯಾವುದೇ ಇತರ ವಿಷಯ.

**76. ವಿನಿಯಮನಗಳನ್ನು ರಚಿಸಲು ಅಧಿಕಾರ.–** (1) ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು, ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅನುಸಾರವಾಗಿ ವಿನಿಯಮನಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ವಿನಿಯಮನಗಳಲ್ಲಿ, ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಆಡಳಿತ ಮಂಡಳಿಯ ಮೂಲಕ ಚಲಾಯಿಸಬೇಕಾದ ಮತ್ತು ನಿರ್ವಹಿಸಬೇಕಾದ ಅಧಿಕಾರಗಳು ಮತ್ತು ಪ್ರಕಾರ್ಯಗಳು;

(ಬಿ) ಆಡಳಿತ ಮಂಡಳಿಯು, ಅಧಿಕಾರಗಳನ್ನು ಚಲಾಯಿಸುವಲ್ಲಿ ಮತ್ತು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ;

(ಸಿ) ಈ ಅಧಿನಿಯಮದ ಅಡಿಯಲ್ಲಿ ವಿನಿಯಮನಗಳ ಮೂಲಕ ಉಪಬಂಧ ಕಲ್ಪಿಸಬಹುದಾದ ಯಾವುದೇ ಇತರ ವಿಷಯ.

**77. ನಿಯಮಗಳನ್ನು ಮತ್ತು ವಿನಿಯಮನಗಳನ್ನು ಸಂಸತ್ತಿನ ಮುಂದೆ ಇಡುವುದು.–** ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಈ ಅಧಿನಿಯಮದ ಮೇರೆಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆ ರಚಿಸಿದ ಪ್ರತಿಯೊಂದು ವಿನಿಯಮನವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದು ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ವಿನಿಯಮನದಲ್ಲಿ, ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು ಮತ್ತು ವಿನಿಯಮನವನ್ನು ಮಾಡಕೂಡದೆಂದು ಎರಡೂ ಸದನಗಳೂ ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ವಿನಿಯಮನವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಅಥವಾ ವಿನಿಯಮನದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕ ಉಂಟು ಮಾಡತಕ್ಕದ್ದಲ್ಲ.

**78. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಅಂಥ ನಿಯಮಗಳು, ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 14ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ, ರಾಜ್ಯ ಪ್ರಾಧಿಕಾರದ ರಚನೆ ಮತ್ತು ಸದಸ್ಯರ ಸಂಖ್ಯೆ ಮತ್ತು ಆ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ, ರಾಜ್ಯ ಪ್ರಾಧಿಕಾರದ ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು;

(ಬಿ) 17ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ, ಸಲಹಾ ಸಮಿತಿಯ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಸಿ) 20ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ, ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಅಧ್ಯಕ್ಷನ ಅಧಿಕಾರಗಳು ಮತ್ತು ಪ್ರಕಾರ್ಯಗಳು ಮತ್ತು (4)ನೇ ಉಪಪ್ರಕರಣದ ಮೇರೆಗೆ ಅದರ ಅಧಿಕಾರಗಳನ್ನು ಚಲಾಯಿಸುವಾಗ ಮತ್ತು ಅದರ ಪ್ರಕಾರ್ಯಗಳನ್ನು ನಿರ್ವಹಿಸುವಾಗ, ರಾಜ್ಯ ಕಾರ್ಯನಿರ್ವಾಹಕ ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನ;

(ಡಿ) 21ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ, ರಾಜ್ಯ ಕಾರ್ಯನಿರ್ವಾಹಕ ಸಮಿತಿಯು ರಚಿಸಿದ ಉಪಸಮಿತಿಗೆ ಸಂಬಂಧಿಸಿದ ವ್ಯಕ್ತಿಗಳಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಇ) 25ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ, ಜಿಲ್ಲಾ ಪ್ರಾಧಿಕಾರದ ರಚನೆ ಮತ್ತು ಸದಸ್ಯರ ಸಂಖ್ಯೆ ಹಾಗೂ (3)ನೇ ಉಪಪ್ರಕರಣದ ಮೇರೆಗೆ ಜಿಲ್ಲಾ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಚಲಾಯಿಸಬೇಕಾದ ಅಧಿಕಾರಗಳು ಮತ್ತು ನಿರ್ವಹಿಸಬೇಕಾದ ಪ್ರಕಾರ್ಯಗಳು;

(ಎಫ್) 28ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ, ಜಿಲ್ಲಾ ಪ್ರಾಧಿಕಾರವು ರಚಿಸಿದ ಯಾವುದೇ ಸಮಿತಿಗೆ ಸಂಬಂಧಿಸಿದ, ತಜ್ಞ ವ್ಯಕ್ತಿಗಳಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಜಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಅಥವಾ ಯಾವ ಇತರ ವಿಷಯಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸಬೇಕಾಗಿದೆಯೋ ಆ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದಲ್ಲಿ ಎರಡು ಸದನಗಳು ಇದ್ದರೆ, ಪ್ರತಿಯೊಂದು ಸದನದ ಮುಂದೆ ಅಥವಾ ವಿಧಾನಮಂಡಲದಲ್ಲಿ ಒಂದೇ ಸದನ ಇದ್ದರೆ ಆ ಸದನದ ಮುಂದೆ ಮಂಡಿಸತಕ್ಕದ್ದು.

**79. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಸಂದರ್ಭಾನುಸಾರ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ತೊಂದರೆಗಳನ್ನು ನಿವಾರಿಸುವುದಕ್ಕಾಗಿ ಅವಶ್ಯವೆಂದು ಅಥವಾ ವಿಹಿತವೆಂದು ಅದಕ್ಕೆ ಕಂಡುಬರಬಹುದಾದ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಆದೇಶವನ್ನು ಮಾಡಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ನಂತರ, ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ, ಆದಷ್ಟು ಬೇಗನೆ ಸಂದರ್ಭಾನುಸಾರ ಸಂಸತ್ತಿನ ಸದನದ ಮುಂದೆ ಅಥವಾ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.